ನಮ್ಮ ಮಾನಸ

ಸಂಪುಟ : 6 ಅಕ್ಟೋಬರ್ 2012 ಸಂಚಿಕೆ: 6 ಬೆಲೆ: 10/-



ನಮ್ಮ ಮಾನಸ

ಅಕ್ಟೋಬರ್ 2012

ಸಂಪುಟ : 6 ಸಂಚಿಕೆ : 6

Editor, Printer and Publisher

Rajeshwari H.S.,

No. 114/5, 9th Cross, 2nd Main

Chamarajpet, Bangalore - 560 018.

Mobile : 98804 67372 / 98869 18910

Printed at

ILA Mudrana

No. 36, 40 Ft. Road, Raghavanagara,

New Timberyard Layout

Bangalore-26.

✆ : 26757159

ಚಂದಾ ವಿವರ

ಬಿಡಿಪ್ರತಿ	10–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

ಪ್ರಾರಂಭ : 'ಮಾನವಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಒಳಗಿನ ಪುಟಗಳಲ್ಲಿ....

ಸಹೃದಯ ಓದುಗರಲ್ಲಿ...

ನೀವು ನಮ್ಮ ಚಿಂತನೆ–ಗುರಿಯನ್ನು ಬಲಪಡಿಸುವಿರೆಂದು ನಮಗೆ ನಂಬಿಕೆ ಇದೆ. ನೀವು ಓದುತ್ತಿರುವ ಮಾನಸವನ್ನು ಹೊರತರಲು ನಿಮ್ಮ ಆರ್ಥಿಕ ನೆರವು, ಪ್ರೋತ್ಸಾಹ ಮುಖ್ಯ. ಮಾನಸವನ್ನು ಮತ್ತೊಮ್ಮೆ ನಿರಂತರವಾಗಿ ಜೀವಂತವಾಗಿಡಲು ಸಹೃದಯ ಓದುಗರ ಬೆಂಬಲದ ಅಗತ್ಯವಿದೆ. ನೀವು ಯಾವುದಾದರೊಂದು ಬಗೆಯಲ್ಲಿ ನಮ್ಮೊಂದಿಗೆ ಕೈಜೋಡಿಸಬಹುದು.

- ◆ ಪ್ರತಿ ತಿಂಗಳಿಗೊಮ್ಮೆ ಲೇಖನಗಳನ್ನು ಬರೆಯಿರಿ ಇಲ್ಲವೇ ಬೇರೆಯವರಿಂದ ಬರೆಯಿಸಿ ಕಳುಹಿಸಿ.
- ◆ ವಾರ್ಷಿಕ ಚಂದಾದಾರರಾಗಿ ಮತ್ತು ಇನ್ನಷ್ಟು ಚಂದಾದಾರರನ್ನು ಪರಿಚಯಿಸಿ.
- ◆ ಮಾನಸದ ಒಂದು ತಿಂಗಳ ಮುದ್ರಣದ ಖರ್ಚು ರೂ. 7,000/– ರಲ್ಲಿ ಪೂರ್ತಿ ಇಲ್ಲವೇ ನಿಮಗೆ ಸಾಧ್ಯವಾದಷ್ಟು ಹಣವನ್ನು ಕೊಟ್ಟು ಬೆಂಬಲಿಸಿ ಕೈ ಜೋಡಿಸುವಿರೆಂಬ ಆಶಯದೊಂದಿಗೆ,

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ

E-mail: nammamanasa@gmail.com

Contact: Disha K.R.: 9880467372, Lekha: 9686757053, Samudyatha : 88922 48351, Nirmala K.: 98869 18910

ಚಿತ್ರಕೃಪೆ: ಅಂತರಜಾಲ

ಸಂಪಾದಕೀಯ

ಅಸ್ತಿತ್ವ ರಾಜಕಾರಣದ ಹಲವು ಮಜಲುಗಳು

ಅಸ್ತಿತ್ವದ ರಾಜಕೀಯ ಕುರಿತು (identity politics) ಚರ್ಚಿಸುವಾಗ ನಾವು ಅನೇಕ ವಿಚಾರಗಳನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇಂದಿನ ಜಾಗತೀಕರಣದ ಹಂತದಲ್ಲಿ ಜಾತಿ ಹಾಗೂ ಧರ್ಮದ ಸುತ್ತ ಅಸ್ತಿತ್ವದ ರಾಜಕೀಯವನ್ನು ಬಳಸಿಕೊಳ್ಳುತ್ತಿರುವ ಮೂಲಭೂತವಾದಿ ಹಾಗೂ ಸಂಪ್ರದಾಯವಾದಿ ಗುಂಪುಗಳಿವೆ, ಸಂಘಟನೆಗಳಿವೆ ಹಾಗೂ ರಾಜಕೀಯ ಪಕ್ಷಗಳಿವೆ. ಜಾತಿಯನ್ನು ಕ್ರೋಡೀಕರಿಸುವ ಮೂಲಕ ಸೌಲಭ್ಯಗಳನ್ನು ಪಡೆಯಲು ಯತ್ನಿಸುವ ಸಂಪ್ರದಾಯವಾದಿ ಗುಂಪುಗಳು ಜಾತಿಯ ವೈಭವೀಕರಣ ನಡೆಸುತ್ತಿರುವುದಲ್ಲದೇ, ಪ್ರಭುತ್ವ ಅಥವಾ ಸರ್ಕಾರದ ಮೇಲೆ ಒತ್ತಡ ಹೇರಲು, ಜಾಗತೀಕರಣದ ಸವಲತ್ತುಗಳನ್ನು ಪಡೆಯಲು ಅಥವಾ ಅದರ ಹುನ್ನಾರಗಳನ್ನು ತಡೆಯಲು, ಸರ್ಕಾರ ನಗಣ್ಯವಾಗುತ್ತಿರುವುದನ್ನು ಎತ್ತಿಹಿಡಿಯಲು ಜಾತಿಯ ತೆಕ್ಕೆಗೆ ಬೀಳುತ್ತಿರುವುದನ್ನು ನಾವು ಕಾಣಬಹುದಾಗಿದೆ. ಅನೇಕ ಮೂಲಭೂತ ಸೌಲಭ್ಯಗಳನ್ನು ಜಾತಿಯ ಒಳಗೆ ಅಥವಾ ಜಾತಿ ಆಧಾರಿತ ಹೋರಾಟದ ಮೂಲಕ ಪಡೆಯಲು ಯತ್ನಿಸುವ ಈ ಗುಂಪುಗಳು ಆಯಾ ಜಾತಿಯ ಮುಖಂಡರಿಗೆ ವೋಟ್ ಬ್ಯಾಂಕ್ ಆಗಿ ಪರಿವರ್ತಿತವಾಗುವುದನ್ನು ನಾವು ಕಾಣುತ್ತಿದ್ದೇವೆ. ಇದೇ ರೀತಿಯ ಕ್ರೋಡೀಕರಣ ಧರ್ಮದ ಮೂಲಕ ನಡೆಯುತ್ತಿರುವುದನ್ನೂ ನಾವು ಕಾಣಬಹುದಾಗಿದೆ. ನಿರುದ್ಯೋಗ, ನೀರು, ವಿದ್ಯುಚ್ಛಕ್ತಿಯಂತಹ ಮೂಲಭೂತ ಅವಶ್ಯಕತೆಗಳಿಗಾಗಿ ಹೋರಾಟ ನಡೆಸಬೇಕಾದ ಸ್ಥಿತಿ ನಮ್ಮ ಮುಂದೆ ಇರುವಾಗ ರಾಜಕೀಯ ಪಕ್ಷಗಳು ಧರ್ಮದ ರಾಜಕಾರಣದ ಮೂಲಕ, ಸಂಸ್ಕೃತಿಯ ವೈಭವೀಕರಣದ ಮೂಲಕ ಭಾರತೀಯತೆಯನ್ನು ಎತ್ತಿ ಹಿಡಿಯಲು ಧಾರ್ಮಿಕ ಅಸ್ತಿತ್ವದ ರಾಜಕೀಯವನ್ನು ದಾಳವಾಗಿ ಮಾಡಿಕೊಳ್ಳುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಈ ರೀತಿಯ ಜಾತಿ ಹಾಗೂ ಧರ್ಮದ ಕ್ರೋಡೀಕರಣದಿಂದಾಗಿ, ಜಾತಿಯ ಹಾಗೂ ಧರ್ಮದ ಪ್ರತೀಕವಾಗಿ, ಸಾಂಸ್ಕೃತಿಕ ರೂಪಕವಾಗಿ ಮಹಿಳೆಯನ್ನು ಕಾಣಿಸುವ ಹುನ್ನಾರದಲ್ಲಿ ಆಕೆಯ ಮೇಲೆ ನಡೆಯುತ್ತಿರುವ ಹಿಂಸೆ ಹೆಚ್ಚಾಗಿ, ಹಲ್ಲೆಯ ಸ್ವರೂಪ ಕೂಡ ಭೀಕರ ರೂಪ ಪಡೆಯುತ್ತಿರುವುದನ್ನು ನಾವು ಕಾಣಬಹುದಾಗಿದೆ.

ಧಾರ್ಮಿಕ ಹಾಗೂ ಸಂಪ್ರದಾಯವಾದಿ ಜಾತಿ ಅಸ್ತಿತ್ವದ ರಾಜಕೀಯದಿಂದ ದೂರವಿರುವ ಹಾಗೂ ಭಿನ್ನವಾದ ಜನಪರ ಹಾಗೂ ಪ್ರಗತಿಪರ ಆಲೋಚನೆಗಳನ್ನು ಮಾಡುತ್ತಿರುವ ಅನೇಕ ಸಂಘಟನೆಗಳು, ಗುಂಪುಗಳು 20ನೆಯ ದಶಕದ ಇತ್ತೀಚಿನ ವರ್ಷಗಳಲ್ಲಿ ಅಸ್ತಿತ್ವದ ರಾಜಕೀಯದ ಸುತ್ತ ಸಂಘಟಿತರಾಗಿ ಹಕ್ಕುಗಳನ್ನು ಪ್ರತಿಪಾದಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಅಂದರೆ ಲಿಂಗ, ಜನಾಂಗ, ಲೈಂಗಿಕ ಭಿನ್ನತೆ, ಜಾತಿ, ವರ್ಗ, ಬಂಡವಾಳ ಮುಂತಾದ ಕಾರಣಗಳಿಂದ ದೌರ್ಜನ್ಯಕ್ಕೆ ಒಳಗಾಗಿ ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಹೋರಾಟಗಾರರ ರಾಜಕೀಯ ಅವುಗಳ ಅಸ್ತಿತ್ವದಿಂದಲೇ, ಅವುಗಳ ಮೂಲಕವೇ ರೂಪುಗೊಂಡಿರುವುದನ್ನು ಇಲ್ಲಿ ಅಸ್ತಿತ್ವದ ರಾಜಕೀಯ ಎಂದು ಗುರುತಿಸಬಹುದಾಗಿದೆ. ತುಳಿತಕ್ಕೆ ಒಳಗಾಗಿರುವವರು ಅವರ ಅನುಭವಗಳಿಗೆ ಅವರೇ ಧ್ವನಿಯಾಗಿ ಹೋರಾಟ ನಡೆಸುವಂತಹ ಪ್ರಕ್ರಿಯೆ ಇದಾಗಿದೆ. 1960ರ ಕಪ್ಪು ಮಹಿಳೆಯರ ಚಳವಳಿ, 1971ರ ಗೇ ಚಳವಳಿ, 1975ರ ಹೊತ್ತಿನ ಮಹಿಳಾ ಚಳವಳಿ, ದಲಿತ ಚಳವಳಿ ಹೀಗೆ ಅನೇಕ ಚಳವಳಿಗಳು ಅಸ್ತಿತ್ವದ ರಾಜಕೀಯ ಪ್ರಶ್ನೆಗಳನ್ನು ಎತ್ತುತ್ತಲೇ ಸಾರ್ವಜನಿಕ ವಲಯದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ, ಕಾನೂನುಗಳ ಪರಿಷ್ಕರಣೆಗಾಗಿ, ಭಿನ್ನ ತಿಳುವಳಿಕೆಗಾಗಿ, ಭಿನ್ನ ಸಮಾಜದ ಕನಸಿಗಾಗಿ ಹೋರಾಟ ನಡೆಸುತ್ತ ಪ್ರಭುತ್ವವನ್ನು ವಿರೋಧಿಸಿಕೊಂಡೇ ಬಂದಿವೆ. 70ರ ದಶಕದಲ್ಲಿ ರಾಜಕೀಯ ಪಕ್ಷಗಳು, ನಾಗರಿಕ ಹಕ್ಕುಗಳ ಚಳವಳಿಗಳ ಹಾಗೂ ಇತರ ಅನೇಕ ಪ್ರಗತಿಪರ ಚಳವಳಿಗಳ ಒಳಗೆ ಮಹಿಳೆಯರು ಎತ್ತಿದ ಮಹಿಳಾ ಸಮಸ್ಯೆಗಳನ್ನು ಮಹಿಳೆಯರ ವೈಯಕ್ತಿಕ ಸಮಸ್ಯೆಗಳು ಎಂದು ಮೂಲೆಗುಂಪಾಗಿಸಿದ ಕಾರಣಕ್ಕಾಗಿಯೇ ಮಹಿಳಾ ಚಳವಳಿ ತನ್ನ ಪ್ರತ್ಯೇಕವಾದ ಅಸ್ತಿತ್ವವನ್ನು ಕಂಡುಕೊಂಡಿತು. ತಮ್ಮ ವೈಯಕ್ತಿಕ, ಸ್ನೇಹಿತರ, ಪ್ರಿಯಕರರ, ರಾಜಕೀಯ ಸಂಗಾತಿಗಳ, ಪಕ್ಷಗಳ ಸಂಬಂಧಗಳಲ್ಲಿ ಇರುವ ಘರ್ಷಣೆ ಬರಿಯ ವೈಯಕ್ತಿಕವಲ್ಲ, ಇದಕ್ಕೆ ರಾಜಕೀಯ ಹುನ್ನಾರವಿದೆ ಎಂಬುದನ್ನು ಅರ್ಥೈಸಿಕೊಂಡ ಮಹಿಳೆಯರು ತಮ್ಮ ದೌರ್ಜನ್ಯದ ವಿರುದ್ಧವೇ ಸಂಘಟಿತರಾಗಿ ಹೋರಾಟ ಪ್ರಾರಂಭಿಸಿದರು. ಭಿನ್ನವಾದ ಸಾಮಾಜಿಕ ನ್ಯಾಯಕ್ಕಾಗಿ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಹೀಗೆ 70ರ ದಶಕದಲ್ಲಿ ನಡೆದ ಹೋರಾಟಗಳಲ್ಲಿ ಭಿನ್ನ-ಭಿನ್ನ ಅಸ್ತಿತ್ವದ ಗುಂಪುಗಳ ರಾಜಕೀಯ ಹೋರಾಟ ನಡೆದಿದ್ದಾಗ್ಯೂ ಕೂಡಾ ಭಿನ್ನ ಅಸ್ತಿತ್ವಗಳನ್ನು ಹಂಚಿಕೊಳ್ಳುವ, ಭಿನ್ನ ಅಸ್ತಿತ್ವಗಳಲ್ಲಿ ಗುರುತಿಸಿಕೊಳ್ಳುವ, (Shared identity) ಭಿನ್ನ ಅಸ್ತಿತ್ವಗಳ ಒಟ್ಟು ಒಳಿತಿನ ನವ ಸಮಾಜದ ಕನಸಿನ ತಾತ್ವಿಕತೆಗೆ ಇಂಬು ಕೊಡುವ ಒಂದು ದೃಷ್ಟಿಕೋನವಿತ್ತು.

ಆದರೆ 80ರ ದಶಕದ ನಂತರ ಎಲ್ಲಾ ಪ್ರಗತಿಪರ ಚಳವಳಿಗಳಲ್ಲಿ ಎದಿರೇಟು (Backlash) ಪ್ರಭಾವ ಕಂಡುಬರುತ್ತದೆ. ಮಹಿಳೆಯರು ಇನ್ನೂ ಹೆಚ್ಚು ಕೆಲಸದ ಹೊರೆ ಹೊರುವಂತಾದದ್ದನ್ನೂ, ಮನೆ ಹಾಗೂ ಹೊರಗಿನ ಜವಾಬ್ದಾರಿ ಎರಡನ್ನು

ಕೂಡಾ ನಿಭಾಯಿಸಬೇಕಾದ ಸ್ಥಿತಿ ಉಂಟಾದುದನ್ನು ನಾವು ಗಮನಿಸಬಹುದು. ಜಾಗತೀಕರಣ, ವಿಶ್ವಮಾರುಕಟ್ಟೆ, ಸಂಪ್ರದಾಯಸ್ಥ ಜಾತಿ ರಾಜಕಾರಣ, ಮೂಲಭೂತವಾದಿ ರಾಜಕಾರಣ ಒಂದಕ್ಕೊಂದು ತೆಕ್ಕೆ ಹಾಕಿಕೊಂಡು ಸಾಮಾಜಿಕ ನ್ಯಾಯದ ಪ್ರಶ್ನೆಯೇ ಇಲ್ಲವಾದಾಗ ಒಂದೆಡೆ ಲೈಂಗಿಕ ಅಲ್ಪಸಂಖ್ಯಾತರು, ಲೈಂಗಿಕ ಕಾರ್ಯಕರ್ತರು, ಗೇ, ಲೆಸ್ಬಿಯನ್ಸ್, ದಲಿತ ಹಾಗೂ ಇತರ ತುಳಿತಕ್ಕೊಳಗಾದ ಸಮುದಾಯಗಳಲ್ಲಿ ಅಸ್ತಿತ್ವದ ರಾಜಕೀಯವನ್ನು ಕೇಂದ್ರ ಬಿಂದುವಾಗಿಟ್ಟುಕೊಂಡು ಹೋರಾಟ ನಡೆಸಬೇಕಾದ ಸ್ಥಿತಿಯನ್ನು ಹುಟ್ಟುಹಾಕಿದ್ದರೆ, ಇನ್ನೊಂದೆಡೆ ಕೆಳವರ್ಗ, ಕೆಳಜಾತಿಯ ಮಹಿಳೆಯರು ಬಂಡವಾಳಶಾಹಿಗಳ ಲಾಭದ ದುಡಿಮೆ ಯಂತ್ರಗಳಾಗಿ ಪರಿವರ್ತಿತವಾಗಿರುವುದನ್ನೂ ನಾವು ಕಾಣಬಹುದು. ಗಾರ್ಮೆಂಟ್ಸ್‌ನಲ್ಲಿ ದುಡಿಯುವ ಮಹಿಳೆಯರಿರಬಹುದು, ಮೀನುಗಾರ ಮಹಿಳೆಯರಾಗಿರಬಹುದು, ಬೀದಿಯಲ್ಲಿ ಕಸ ಗುಡಿಸುವ ಮಹಿಳೆಯರಿರಬಹುದು ತಮ್ಮ ಬದುಕಿನ ಅಸ್ತಿತ್ವಗಳ, ಔದ್ಯೋಗಿಕ ಬಂಡವಾಳಶಾಹಿಯ ವಿರುದ್ಧ ತಮ್ಮ ಅಸ್ತಿತ್ವದ ರಾಜಕಾರಣವನ್ನೇ ಕೇಂದ್ರಬಿಂದುವಾಗಿಟ್ಟುಕೊಂಡು ತಾವೇ ಹೋರಾಟ ನಡೆಸಬೇಕಾದ ಒತ್ತಡಗಳಲ್ಲಿ ಸಿಲುಕಿರುವ ಸ್ಥಿತಿಯೂ ಇಂದು ನಿರ್ಮಾಣವಾಗಿದೆ. ಹಾಗಾಗಿ ಭಿನ್ನ, ಭಿನ್ನ ಸ್ತರಗಳಲ್ಲಿ, ಭಿನ್ನ, ಭಿನ್ನ ತಾತ್ವಿಕತೆಗಳಲ್ಲಿ ಅಸ್ತಿತ್ವದ ರಾಜಕಾರಣವನ್ನೇ ಕೇಂದ್ರ ಬಿಂದುವಾಗಿರಿಸಿಕೊಂಡ ಹೋರಾಟಗಳು ಭಿನ್ನ ಭಿನ್ನ ಹಂತಗಳಲ್ಲಿ ನಡೆಯುತ್ತಿರುವುದು ಈ ಹೊತ್ತಿನ ರಾಜಕಾರಣವಾಗಿದೆ. ಅಸ್ತಿತ್ವ ರಾಜಕಾರಣ ವಿವಿಧ ಹಂತದ ಚಳವಳಿಗಳಲ್ಲಿ ಹಲವಾರು ಟೀಕೆಗಳನ್ನು, ಸವಾಲುಗಳನ್ನು ಎದುರಿಸುತ್ತಿದೆ. ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವಂತಹ ಚಳವಳಿಗಳು ವಿಭಿನ್ನ ಸಾಂಸ್ಕೃತಿಕ ವೈವಿಧ್ಯತೆಯನ್ನು, ಭಿನ್ನತೆಯಲ್ಲಿ ಐಕ್ಯತೆಯನ್ನು ಸಾಧಿಸುವ ಕಾಳಜಿ, ವಿಷನ್ ಹೊಂದಿರುವುದು ಅಗತ್ಯ. ಆದರೆ ಅಸ್ತಿತ್ವದ ರಾಜಕಾರಣದ ತಾತ್ವಿಕ ನಿಲುವುಗಳು, ಹಲವಾರು ಸಮಸ್ಯೆಗಳ ನಡುವಿನ ಒಟ್ಟು ಸಂಬಂಧವನ್ನು ಗುರುತಿಸಲು ಸಾಧ್ಯವಾಗದ ವೈಫಲ್ಯತೆ ತಮ್ಮ ಭಿನ್ನತೆಯನ್ನು ಎತ್ತಿ ಹಿಡಿಯುವ ರಾಜಕೀಯ ನಿಲುವುಗಳು, ತಮ್ಮ ಸಂಸ್ಕೃತಿಯನ್ನು ವಿಜೃಂಭಿಸುವ, ಆರಾಧಿಸುವ ಭಾವನೆಗಳು, ಚಳವಳಿಗಳ ಮಧ್ಯೆ ನಡೆಸಲಾಗದ ಸಂವಾದ, ತಮ್ಮ ಅಸ್ತಿತ್ವಕ್ಕೇ ಅಂಟಿಕೊಂಡು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ವಿಸ್ತೃತ ತಾತ್ವಿಕ ಚೌಕಟ್ಟಿಗೆ ವಿಸ್ತರಿಸಲಾಗದ ಕಠಿಣ ನಿಲುವುಗಳು – ಇಂತಹ ಹಲವಾರು ಸಮಸ್ಯೆಗಳನ್ನು ಅಸ್ತಿತ್ವದ ರಾಜಕಾರಣ ಎದುರಿಸುತ್ತಿದೆ. ಈ ನಿಟ್ಟಿನಲ್ಲಿ ಯೋಚಿಸುವ, ಚರ್ಚಿಸುವ ಹಾಗೂ ಸ್ಪಷ್ಟತೆಯನ್ನು ಹೊಂದುವ ಸವಾಲನ್ನು ಸ್ವಾಯತ್ತ ಮಹಿಳಾ ಚಳವಳಿ ಕೂಡಾ ಎದುರಿಸುತ್ತಿದೆ. ❑


ಬೆಂಬಲಿಗರೇ,

ಈ ಸಂಚಿಕೆಯನ್ನು ಹೊರತರುವಲ್ಲಿ ನಮ್ಮೊಟ್ಟಿಗೆ ಕೈಜೋಡಿಸಿರುವ ಪದ್ಮರೇಖಾ ಹಾಗೂ ಮಾನಸ ಬಳಗದವರಿಗೆ ಹಾಗೂ ಲೇಖನ, ಪತ್ರಗಳ ಮೂಲಕವೂ ನಮ್ಮ ಉತ್ಸಾಹವನ್ನು ಇಂಗದಂತೆ ನೋಡಿಕೊಳ್ಳುತ್ತಿರುವ ನಿಮ್ಮೆಲ್ಲರಿಗೂ ನಾವು ಸದಾ ಋಣಿ.

ವಿಷದ ಧನ್ಯತಾ ಭಾವಕ್ಕೆ...

ಬಿಡಗುಡುವ ಮರುಭೂಮಿಯ
ಬಿಸಿಗಾಳಿಯ ತಾಪಕ್ಕೆ
ತಂಪಾಗುತ್ತಿದೆ ದೇಹ
ಇಂಪು ಸೂಸುವ ಇಬ್ಬನಿಗಳು
ಇಣುಕಿ ನೋಡುತ್ತಿವೆ
ಕೆಂಡ ಕಾರುತ್ತಾ
ಅನುಮಾನದಿಂದ
ಅಲ್ಲಿ
ರಾಮ ರಹೀಮ ನಾನಕ್
ಬುದ್ಧ ಕ್ರಿಸ್ತ ಮಹಾವೀರ
ಲಗೋರಿ ಆಡುತ್ತಾರೆ
ಎದೆಯ ನೀರನು ಚೆಲ್ಲಿ
ಕನಸುಗಳ ಬಿತ್ತುತ್ತಾರೆ
ಕಣ್ಣಾ ಮುಚ್ಚಾಲೆ ಆಡುತ್ತಾ
ಕಣ್ಣ ಪರೆಯ ಸರಿಸಿ
ಸಂಬಂಧಗಳ ಬೆಸೆಯುತ್ತಾರೆ
ಅತ್ತು ಅತ್ತು ಸಾಕಾಗಿ ಭುವಿ
ಬಾಯಿ ಬಿಡುತ್ತಾ
ಮನಸ್ಸುಗಳ ಕತೆ ಹೇಳುತ್ತಾಳೆ....ಅವರನ್ನು
ಮಲಗಿಸುತ್ತಾಳೆ. ಜೋಗುಳ ಹಾಡುತ್ತಾಳೆ....
ಅವರು ಮಲಗುವುದೇ ಇಲ್ಲ
ಪ್ರಶ್ನೆ ಕೇಳುತ್ತಾರೆ
ಕತ್ತಲು ಬೆಳಕುಗಳನ್ನು ಹುಡುಕುತ್ತಾ....
ಮತ್ತೆ ಮತ್ತೆ
ದ್ರಾಕ್ಷಾರಸ ಹುಡುಕುತ್ತಾ ಹೊರಟ ನಮಗೆ
ವಿಷದ ಬಟ್ಟಲು ಸಿಕ್ಕಿದ್ದು ಹೇಗೆ
ಉತ್ತರ ಕೊಡಲಾಗದೇ ಒದ್ದಾಡುತ್ತಾಳೆ
ಅವಳು ಹೀಗೆ. . . .ಯೇ. . . .
ಎದುರುಸಿರು ಬಿಡುತ್ತಾ
ಆಕಾಶ ನೋಡುತ್ತಾಳೆ
ಎದೆ ದಿಕ್ಕು ತಪ್ಪುತ್ತದೆ
ಕತ್ತಲು ಬೆಳಕಿನ ಸಂಕರತೆಗೆ
ವಿಷದ ಒಳಗೂ ದ್ರಾಕ್ಷಾರಸ ಹನಿಗಳ
ಹುಡುಕುತ್ತಾಳೆ
ವಿಷವನ್ನೇ ದ್ರಾಕ್ಷಾರಸವಾಗಿಸುವ ತಂತ್ರ ಹೂಡುತ್ತಾಳೆ
ನಿರುಮ್ಮಳಳಾಗುತ್ತಾಳೆ
ಇಲ್ಲಗಳ ನಡುವೆ ಎಲ್ಲವುಗಳು ಇದ್ದು
ತಂಪು ಸೂಸುತ್ತಿರುವ
ವಿಷದ ಧನ್ಯತಾ ಭಾವಕ್ಕೆ

■ ನೇತ್ರಾವತಿ ಕೆ.ವಿ.



ತೆಂಡೂಲ್ಕರರ 'ಕಮಲಾ'ದಲ್ಲಿ ಹೆಣ್ಣಿನ ದಾಸ್ಯ ಶೃಂಖಲೆಯ ಅನಾವರಣ

■ ಡಾ. ಗೀತಾ ಶೆಣೈ

ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಮಾರಾಟ ಮಾಡುವುದು, ಅಡವಿಡುವುದು, ಹಸ್ತಾಂತರಿಸುವುದು, ಬಳಸಿ ಬಿಸಾಡುವುದು ಇವೆಲ್ಲ ಶತಮಾನಗಳಿಂದ ಮುಂದುವರೆದು ಬಂದ ಕ್ರಮಗಳು. ಇದನ್ನು ಕೆಟ್ಟ ಚಾಳಿಯೆಂದೋ, ಕೆಟ್ಟ ಪದ್ಧತಿಯೆಂತಲೋ ಅಥವಾ ಲಾಭದಾಯಕ ದಂಧೆಯೆಂದೋ ಯಾವ ಹೆಸರನ್ನಿಟ್ಟು ಕರೆದರೂ ಅದರ ಸ್ವರೂಪ ಮಾತ್ರ ಒಂದೇ. ಪುರುಷ ಸಮಾಜ ಹೆಣ್ಣಿನ ಮೇಲೆ ನಡೆಸುತ್ತಿರುವ ಶೋಷಣೆಯ ಪ್ರತೀಕವದು. ನಾಗರಿಕ ಸಮಾಜದಲ್ಲಿ ಕಾನೂನು ರಕ್ಷಕರ ನೆರವಿನಿಂದ ಅವ್ಯಾಹತವಾಗಿ ನಡೆಯುತ್ತಿರುವ ಹೆಣ್ಣಿನ ಮಾರಾಟವನ್ನು ಆಧರಿಸಿದ ನಾಟಕ ತೆಂಡೂಲ್ಕರರ 'ಕಮಲ'. ಹೆಣ್ಣನ್ನು ವಸ್ತುವಿನಂತೆ ಬಳಸಿಕೊಳ್ಳುವುದು ಸಾರ್ವಜನಿಕ ಮಾರುಕಟ್ಟೆಯಲ್ಲಿ ಮಾತ್ರವೇ ಅಲ್ಲ ಗೌರವಯುತ ಕುಟುಂಬದ ಖಾಸಗಿ ವಲಯದಲ್ಲಿ ಕೂಡ ಅದು ನಡೆಯುವಂತಹದ್ದು ಎಂಬ ಸತ್ಯವನ್ನು ಈ ನಾಟಕ ಚಿತ್ರಿಸುತ್ತದೆ.


ಮರಾಠಿ ರಂಗಭೂಮಿಯ ಪ್ರಸಿದ್ಧ ನಾಟಕಕಾರ, ನಿರ್ದೇಶಕ ವಿಜಯ್ ತೆಂಡೂಲ್ಕರರ 'ಕಮಲ' ನಾಟಕ ಹೆಣ್ಣಿನ ದಾಸ್ಯ ಶೃಂಖಲೆಯನ್ನು ಅನಾವರಣಗೊಳಿಸಿದ ಬಹುಚರ್ಚಿತ ಕೃತಿ. ಈಗಾಗಲೇ ಏಳು ಭಾಷೆಗಳಲ್ಲಿ ನೂರಾರು ಪ್ರದರ್ಶನಗಳನ್ನು ಕಂಡಿರುವ ಈ ಎರಡು ಅಂಕಗಳ ನಾಟಕ ಇದೀಗ ಶಾ.ಮಂ. ಕೃಷ್ಣರಾಯರಿಂದ ಕನ್ನಡಕ್ಕೆ ಅನುವಾದಗೊಂಡು ಬೆಂಗಳೂರಿನ ಪ್ರಸಿದ್ಧ ರಂಗಸಂಸ್ಥೆ 'ಕಲಾಗಂಗೋತ್ರಿ' ವತಿಯಿಂದ ಕಳೆದ ಜೂನ್ 3ರಂದು ನ್ಯಾಷನಲ್ ಕಾಲೇಜಿನ ಸಭಾಂಗಣದಲ್ಲಿ ಮೊದಲ ಪ್ರಯೋಗವನ್ನು, ನಂತರ ರವೀಂದ್ರ ಕಲಾಕ್ಷೇತ್ರ ಮತ್ತು ರಂಗಶಂಕರದಲ್ಲಿ ಮರು ಪ್ರಯೋಗಗಳನ್ನು ಕಂಡಿದೆ.

ತೆಂಡೂಲ್ಕರರ 'ಕಮಲ' ಸ್ತ್ರೀ ಅಸ್ಮಿತೆಯ ಹುಡುಕಾಟದ ಚಿತ್ರಣವಿರುವ ನಾಟಕ. ತನ್ನ ಬದುಕಿನಲ್ಲಿ ಅನಿರೀಕ್ಷಿತವಾಗಿ ನಡೆದಂತಹ ನಾಟಕೀಯ ಘಟನೆಗಳಿಂದಾಗಿ ಓರ್ವ ಹೆಣ್ಣಿನಲ್ಲಿ ಹುಟ್ಟಿಕೊಂಡ ತನ್ನತನದ ಅರಿವನ್ನು ಇದು ಎತ್ತಿ ಹಿಡಿಯುತ್ತದೆ. ಜೊತೆಗೆ ಪತ್ರಿಕೋದ್ಯಮದ ಇಂದಿನ ಅಬ್ಬರದ ಬೆಳವಣಿಗೆಯ ಸ್ವರೂಪವನ್ನು ಹಿಂದಿನ ಮೌಲ್ಯಭರಿತ ಪತ್ರಿಕಾವ್ಯವಸಾಯದೊಂದಿಗೆ ಹೋಲಿಸುವ ಮತ್ತು ಸಮಾಜಘಾತಕ ಶಕ್ತಿಗಳ ಮೇಲೆ ಬೆಳಕು ಚೆಲ್ಲುವ ಕಾರ್ಯವನ್ನು ಕೂಡ ಈ ನಾಟಕ ನಡೆಸುವುದರಿಂದ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ದೊರೆತಿದೆ. ಮೌಲ್ಯಗಳು ಅರ್ಥ ಕಳೆದುಕೊಂಡ ಸಂದರ್ಭದಲ್ಲಿ ಐಷಾರಾಮದ ಬದುಕಿಗೆ ಪ್ರಾಮುಖ್ಯತೆ ದೊರೆತು ಪತ್ರಿಕಾ ಧರ್ಮವೆನ್ನುವುದು ಯಾವ ಮಟ್ಟವನ್ನು ತಲುಪಬಲ್ಲದು ಎಂಬುದನ್ನು ಚಿತ್ರಿಸುವ ಮೂಲಕ ನಾಟಕಕಾರ ಓದುಗರನ್ನು ಮತ್ತು ಪ್ರೇಕ್ಷಕರನ್ನು ಗಂಭೀರ ಚಿಂತನೆಗೆ ಒಳಪಡಿಸುತ್ತಾರೆ. ಜೊತೆಗೆ ಅನುಭೋಗದ ಮಾರುಕಟ್ಟೆಯಲ್ಲಿ ಹೆಣ್ಣು ಹೇಗೆ ಸರಕಿನ ರೂಪದಲ್ಲಿ ಬಿಕರಿಯಾಗುತ್ತಾಳೆ ಮತ್ತು ಬಳಕೆಯಾಗುತ್ತಾಳೆ ಎನ್ನುವ ಕಟುಸತ್ಯವನ್ನು ಒಬ್ಬ ಗೃಹಿಣಿ ಮತ್ತು ಇನ್ನೊಬ್ಬ ಬುಡಕಟ್ಟು ಮಹಿಳೆಯ ಬದುಕಿನ ವಿವರಗಳ ಮೂಲಕ ಅವರು ಕಟ್ಟಿಕೊಡುತ್ತಾರೆ.

ಹೆಣ್ಣಿನ ಅಕ್ರಮ ವಿಕ್ರಯವನ್ನು ಕೇಂದ್ರ ವಸ್ತುವಾಗಿಸಿರುವ ಈ ನಾಟಕ ಸತ್ಯ ಘಟನೆಯೊಂದನ್ನು ಆಧರಿಸಿದೆ. ಮಧ್ಯಪ್ರದೇಶದ ಶಿವಪುರಿ ಗ್ರಾಮದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಹೆಣ್ಣುಮಕ್ಕಳನ್ನು ಮಾರಾಟ ಮಾಡುವ

ಕಾನೂನುಬಾಹಿರ ದಂಧೆ ಮತ್ತು ತೆರೆಮರೆಯಲ್ಲಿದ್ದು ಇದರಲ್ಲಿ ಪಾಲ್ಗೊಳ್ಳುತ್ತಿರುವ ರಾಜಕಾರಣಿಗಳನ್ನು, ಪೊಲೀಸ್ ಇಲಾಖೆಯ ವರಿಷ್ಠರನ್ನು ಬಯಲಿಗೆಳೆಯುವ ಸಾಹಸಕ್ಕಿಳಿದ ಪತ್ರಕರ್ತ ಅಶ್ವಿನ್ ಸರೀನ್ 1981ರಲ್ಲಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲ್ಲಿ ತನ್ನ ಕ್ಷೇತ್ರಕಾರ್ಯದ ವರದಿಯನ್ನು ಪ್ರಕಟಿಸುವ ಧೈರ್ಯ ತಳೆದದ್ದಲ್ಲದೆ, ತನ್ನ ಶೋಧನೆಗೆ ಜೀವಂತ ಸಾಕ್ಷಿಯನ್ನು ಒದಗಿಸಲು ಬುಡಕಟ್ಟು ಮಹಿಳೆಯೊಬ್ಬಳನ್ನು 2,300 ರೂಪಾಯಿಗಳಿಗೆ ಖರೀದಿ ಮಾಡಿದ ಘಟನೆ ತೆಂಡೂಲ್ಕರರ ಈ ನಾಟಕಕ್ಕೆ ಸ್ಫೂರ್ತಿಯಾಗಿದೆ.

'ಕಮಲಾ' ನಾಟಕದ ಹೀರೋ ಜಯಸಿಂಗ್ ಜಾಧವ್ ವೃತ್ತಿಯಲ್ಲಿ ಇಂಗ್ಲಿಷ್ ದಿನಪತ್ರಿಕೆಯೊಂದರ ಸಹಸಂಪಾದಕ. ಓಡಾಟದ ಜರ್ನಲಿಸಂನ ಪ್ರತಿನಿಧಿ ಅವನು. ಏನು ನಡೆಯಿತು ಎನ್ನುವುದನ್ನು ಬರೆಯುವುದಕ್ಕಿಂತ ಘಟನೆಗಳು ನಡೆಯುವ ಸ್ಥಳದಲ್ಲಿ ಹಾಜರಿರುವುದು ಮುಖ್ಯವೆನ್ನುವವರ ಪೈಕಿ ಅವನು. 'ಸ್ಕೂಪ್'ನ್ನು ಅರಸಿ 'ಮಿಶನ್' ಹಿಡಿದು ಸಾಗಿದನೆಂದರೆ ಯಶಸ್ಸು ಅವನಿಗೆ ಖಚಿತ. ಅವನಿಗೆ ತನ್ನ ಹೆಸರು ಪ್ರಕಟವಾಗುವುದು ಮುಖ್ಯ. ಜೊತೆಗೇ ಅದರಿಂದ ಬರುವ ಫಾಯಿದೆ ಕೂಡ. ಹೀಗಾಗಿ ಐದು ವರ್ಷಗಳ ಹಿಂದೆ ಒಂದು ಪುಟ್ಟ ಔಟ್‌ಹೌಸಿನಲ್ಲಿ ವಾಸವಾಗಿದ್ದ ಅವನೀಗ ಒಳ್ಳೇ ಜಾಗದಲ್ಲಿ ಸ್ವತಂತ್ರ ಬಂಗ್ಲೆಯೊಂದನ್ನು ಕಟ್ಟಿಕೊಂಡು, ನೌಕರ ಚಾಕರರನ್ನು ಇಟ್ಟು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾನೆ. 'ದೇಶದ ಒಟ್ಟು ನೈತಿಕ ಅಧಃಪತನದಲ್ಲಿ ನಿಂತು ನೈತಿಕ ನಿಯಮಗಳನ್ನು, ನೈತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಕಾರ್ಯವನ್ನು ನಡೆಸಬೇಕು, ಸಮಾಜದ ದುರ್ಬಲ, ಹಿಂದುಳಿದ ವರ್ಗದ ಮೇಲೆ ನಡೆಯುವ ಆಕ್ರಮಣದ ವಿರುದ್ಧ ಧ್ವನಿ ಎತ್ತಬೇಕು, ಭ್ರಮೆಯಲ್ಲಿ ಬದುಕುತ್ತಿರುವ ಸಾಮಾನ್ಯ ಮನುಷ್ಯನನ್ನು ಬಡಿದೆಬ್ಬಿಸಿ ಸಾಮಾಜಿಕ ಮತ್ತು ರಾಜಕೀಯ ಹೋರಾಟಕ್ಕೆ ಅವನನ್ನು ತಯಾರು ಮಾಡಬೇಕು' ಎನ್ನುವುದು ಅವನ ಮತ್ತು ಅವನಂತಹ ಪತ್ರಕರ್ತರ ಉದ್ದೇಶವಾಗಿರುತ್ತದೆ. ಆದರೆ ಪುಟ್ಟ ಜಿಲ್ಲೆಯೊಂದರಲ್ಲಿ ಸ್ಥಳೀಯ ಭಾಷಾ ಪತ್ರಿಕೆಯೊಂದನ್ನು ನಡೆಸುತ್ತ, ಸುತ್ತಮುತ್ತ ನಡೆಯುವ ಘಟನೆಗಳನ್ನು ಅದು ಇರುವ ಹಾಗೆ ವರದಿ ಮಾಡುತ್ತಿರುವ ಅವನ ಪತ್ನಿಯ ಚಿಕ್ಕಪ್ಪ ಕಾಕಾ ಸಾಹೇಬರಂತಹ ಹಿಂದಿನ ಕಾಲದ ನಿಷ್ಠಾವಂತ ಪತ್ರಿಕೋದ್ಯಮಿಗೆ ಇಂಗ್ಲಿಷ್ ಬಲ್ಲ ಬೆರಳೆಣಿಕೆಯ ಓದುಗರಿಂದ ದೇಶದ ಸಾಮಾಜಿಕ, ರಾಜಕೀಯ ಬದಲಾವಣೆಯನ್ನು ನಿರೀಕ್ಷಿಸುವ ಜಯಸಿಂಹನ ಪತ್ರಿಕಾ ಕಾರ್ಯ ಹಣ ಸಂಪಾದನೆಯ ಸಾಧನ ಅಥವಾ ವ್ಯರ್ಥ ಸಾಹಸವಷ್ಟೇ ಆಗಿದೆ. ಅದನ್ನು ಅವರು 'ಹುಲಿಯ ಬೆನ್ನ ಮೇಲಿನ ಸವಾರಿ' ಎಂದು ಕರೆಯುತ್ತಾರೆ. 'ಮೊದಲು




ಜನಸಾಮಾನ್ಯರ ಭಾಷೆಯಲ್ಲಿ ಮಾತನಾಡಿ ಬರೆಯಿರಿ. ಆಮೇಲೆ ಹೇಳಿ' ಎನ್ನುವ ಕಾಕಾ ಸಾಹೇಬರಿಗೆ, 'ಸ್ಕೂಪ್' ಹುಡುಕಾಟದಲ್ಲಿ ಜೀವ ಕೈಯಲ್ಲಿಟ್ಟು ಓಡಾಡುವ ಜಯಸಿಂಗ್‌ನ ಸಾಹಸದಿಂದ ಮಗಳ ಭವಿಷ್ಯದ ಕುರಿತು ಆತಂಕ ಮೂಡುತ್ತದೆ.

ನಾಟಕದ ಪ್ರಾರಂಭದಲ್ಲಿ ನ್ಯೂಸ್ ಪ್ರಿಂಟ್‌ಗಾಗಿ ದೆಹಲಿಗೆ ಬಂದು ಮಗಳ ಮನೆಯಲ್ಲಿರುವ ಕಾಕಾ ಸಾಹೇಬರಿಗೆ ಜಯಸಿಂಗ್‌ನ ಭೇಟಿಯಾಗುವುದಿಲ್ಲ. ಅವನು ಎಂದಿನಂತೇ ರೋಚಕ ಸುದ್ದಿಯನ್ನು ಬೆನ್ನಟ್ಟಿ ಯಾರಿಗೂ ಸುಳಿವು ನೀಡದೆ ಎಲ್ಲಿಗೋ ಹೋಗಿರುತ್ತಾನೆ. ಅವನಿಗಾಗಿ ಬರುವ ಕರೆಗಳನ್ನೆಲ್ಲ ಬರೆದಿಟ್ಟುಕೊಳ್ಳುತ್ತ ಸಮಯ ಕಳೆಯುವ ಅವನ ಪತ್ನಿ ಸರಿತಾಳ ಮೇಲೆ ಕಾಕಾ ಸಾಹೇಬರಿಗೆ ಮರುಕ ಹುಟ್ಟುತ್ತದೆ. ಕೊನೆಗೊಮ್ಮೆ 'ಮನುಷ್ಯರ ಮಾರಾಟ' ಈಗಲೂ ನಡೆಯುತ್ತಿದೆ ಎನ್ನುವುದನ್ನು ಸಾಬೀತು ಪಡಿಸಲು ಬಿಹಾರ್‌ದ ರಾಂಚಿಯ ಬಳಿ ಇರುವ ಲುಹಾರ್ ಡಾಗಿನ ಸಂತೆಪೇಟೆಗೆ ಹೋಗಿರುವ ಜಯಸಿಂಗ ಅಲ್ಲಿಂದ ಮರಳಿ ಬರುವಾಗ ತಾನು ಇನ್ನೂರೈವತ್ತು ರೂಪಾಯಿಗಳಿಗೆ ಖರೀದಿ ಮಾಡಿದ 'ಕಮಲ' ಎಂಬ ಹೆಸರಿನ ಒಬ್ಬ ಬುಡಕಟ್ಟು ಹೆಣ್ಣನ್ನು ಗುಟ್ಟಾಗಿ ಮನೆಗೆ ಕರೆತರುತ್ತಾನೆ. ಮರುದಿನ ಪ್ರೆಸ್ ಕ್ಲಬ್‌ನಲ್ಲಿ ನಡೆಯುವ ಪತ್ರಕರ್ತರ ಸಭೆಯಲ್ಲಿ ಅವಳನ್ನು ಹಾಜರು ಪಡಿಸಿ ಎಲ್ಲರಲ್ಲಿಯೂ ಅಚ್ಚರಿಯನ್ನು ಉಂಟುಮಾಡುವುದು ಅವನ ಉದ್ದೇಶ. ಇದಕ್ಕೆ ಅವನ ಸಂಪಾದಕನ ಬೆಂಬಲ ಕೂಡ ಇರುತ್ತದೆ. ಕಮಲಾಳ ಅನಿರೀಕ್ಷಿತ ಪ್ರವೇಶ ಮತ್ತು ಜಯಸಿಂಗ್‌ನ ಪತ್ನಿ ಸರಿತಾಳೊಂದಿಗಿನ ಅವಳ ಮಾತುಕತೆಯಿಂದ ನಾಟಕದ ನಿಜವಾದ ಕ್ರಿಯೆ ಪ್ರಾರಂಭಗೊಳ್ಳುತ್ತದೆ.

ಸರಿತ, ಜಯಸಿಂಗ್ ಜಾಧವನಿಗೆ ಅನುಕೂಲೆಯಾಗಿ ಸಂಸಾರ ಮಾಡಿಕೊಂಡಿರುವ ಸಂತೃಪ್ತ ಗೃಹಿಣಿ. ಅವಳು ಗಂಡನಿಗೆ ಬರುವ ಕರೆಗಳನ್ನು ಸ್ವೀಕರಿಸುತ್ತ, ಮನೆಗೆ ಬರುವ ಅತಿಥಿಗಳಿಗೆ ಚಾ ಸತ್ಕಾರ ನೀಡುತ್ತ, ಆಳುಕಾಳುಗಳನ್ನು ಸಂಭಾಳಿಸುತ್ತ ನೆಮ್ಮದಿಯಲ್ಲಿರುವ ಹೆಣ್ಣುಮಗಳು. ಕಮಲಾಳ ಬರುವಿಕೆಯ ಹಿನ್ನೆಲೆಯನ್ನು ಗಂಡನಿಂದ ಮೊದಲೇ ತಿಳಿದುಕೊಂಡಿದ್ದ ಅವಳಿಗೆ ಕಮಲಾಳಲ್ಲಿ ಮರುಕದ ಭಾವನೆಯಷ್ಟೆ ಇರುತ್ತದೆ. ಆದರೆ ಕಮಲಾ ತನ್ನ ಮುಗ್ಧತೆಯಲ್ಲಿ, 'ಸಾಹೇಬರು ನಿಮ್ಮನ್ನು ಎಷ್ಟಕ್ಕೆ ಕೊಂಡುಕೊಂಡರು' (ತುಮ್ಹೆ ಕಿತ್ತೆ ಮೇ ಖರೀದಾ?) ಎಂಬ ಪ್ರಶ್ನೆಯನ್ನು ಕೇಳುವ ಮೂಲಕ ಅವಳ ಇಡೀ ವ್ಯಕ್ತಿತ್ವವನ್ನೇ ಅಲ್ಲಾಡಿಸಿಬಿಡುತ್ತಾಳೆ. ಅದುವರೆಗೆ ಅವಳು ತನ್ನನ್ನು, ತನ್ನ ಗಂಡನನ್ನು, ತನ್ನ ಸುತ್ತಲಿನವರನ್ನು ಅರ್ಥೈಸಿಕೊಂಡ ರೀತಿ ಆ ಕ್ಷಣದಿಂದ ಸಂಪೂರ್ಣವಾಗಿ ಬದಲಾಗಿಬಿಡುತ್ತದೆ. ಸಂತೆಯಲ್ಲಿ ಹಣಕೊಟ್ಟು ಖರೀದಿಸಿದ ವ್ಯಕ್ತಿಯನ್ನು ಮಾಲೀಕನೆಂದು ಒಪ್ಪಿಕೊಂಡು ಅವನಿಗೆ ನಿಷ್ಠೆಯಿಂದ ಲೈಂಗಿಕ ಸೇವೆ ಸಲ್ಲಿಸಿ ಮಕ್ಕಳನ್ನು ಹೆತ್ತು ಕೊಡುವುದು ತನ್ನ ಕರ್ತವ್ಯವೆಂದು ತಿಳಿಯುವುದು ಕಮಲಾಳಿಗೆ ಅತ್ಯಂತ ಸಹಜವಾಗುತ್ತದೆ. ಅವಳು ಸರಿತಾಳಲ್ಲಿ ಒಂದು ಒಪ್ಪಂದಕ್ಕೆ ಬರುತ್ತಾಳೆ, ಮಾಲೀಕ್ ನೇ ತುಮ್ಹೆ ಖರೀದಾ, ಹಮೇ ಭೀ ಖರೀದಾ.... ದೋಈ ಭೈನ್ ಹೋಯೆಂ ಐಸೆ, ಮಾಲಿಕ್ ಕೊ ಖುಸ್ ರಖೆಂಗೆ. ಮೈ ಮೈನತ್ ಕರುಂಗಿ. ಬಚ್ಚೆ ನಿಕಾಲೂಂಗಿ – ತು ಲಿಖಾ ಪಡಿ ಜಾನತೊ ತೂ ಘರ ಕಾ ಹಿಸಾಬ್ ಕಿತಾಬ್ ರಖನಾ.... ಮಇನೆಮೆ ಪಂದರಾ ರಾತ್ ತುಮ್

ಮಾಲಿಕ್ ಕೆ ಸಂಗ ಸೋನಾ, ಪಂದರಾ ರಾತ್ ಹಮ್ ಸೋಎಂಗಾ. ಹೈ ಮಂಜೂರ್ (ಯಜಮಾನ ನಿನ್ನನ್ನು ಖರೀದಿಸಿದ್ದಾನೆ, ನನ್ನನ್ನೂ ಖರೀದಿಸಿದ್ದಾನೆ. ಹೀಗಾಗಿ ನಾವಿಬ್ಬರೂ ಸಹೋದರಿಯರಾದೆವು. ಯಜಮಾನನನ್ನು ಸಂತೋಷವಾಗಿ ಇಟ್ಟುಕೊಳ್ಳೋಣ. ನಾನು ಕಷ್ಟ ಪಡುವೆ, ಮಕ್ಕಳನ್ನು ಹುಟ್ಟಿಸುವೆ. ನೀನು ಓದು ಬರಹ ತಿಳಿದವಳು. ಮನೆಯ ಖರ್ಚು ವೆಚ್ಚದ ಲೆಕ್ಕ ಇಟ್ಟುಕೋ. ತಿಂಗಳಲ್ಲಿ ಹದಿನೈದು ರಾತ್ರಿ ನೀನು ಯಜಮಾನನೊಂದಿಗೆ ಮಲಗು, ಹದಿನೈದು ರಾತ್ರಿ ನಾನು ಮಲಗುವೆ. ಒಪ್ಪಿಗೆ ಇದೆಯಾ??) ಕಮಲಾಳ ಮಾತಿನಿಂದ ದೊಡ್ಡ ಮೊತ್ತದ ವರದಕ್ಷಿಣೆಯೊಂದಿಗೆ ಪತಿಗೃಹ ಪ್ರವೇಶಿಸಿದ ಸರಿತಾಗೆ ತಾನು ಇದುವರೆಗೆ ಗಂಡನಿಗಾಗಿ ನಡೆಸಿದ ಎಲ್ಲ ಕಾರ್ಯಗಳು ದಾಸ್ಯತ್ವದ ಪ್ರತೀಕವಾಗಿ ಕಾಣಲಾರಂಭಿಸುತ್ತದೆ. ಜಾಧವನ ಗೆಳೆಯ ಜೈನ್‌ನ ನಗೆಚಾಟಿಕೆಯಲ್ಲಿ ಕೂಡ, 'ಸರದಾರ ಮನೆತನದ ಹುಡುಗಿ ದೇಶದ ಶೋಷಣೆಯ ವಿರುದ್ಧ ಹೋರಾಟ ನಡೆಸುತ್ತಿರುವ ವ್ಯಕ್ತಿಯ ಗುಲಾಮಳಾಗಿರುವುದನ್ನು ಜಗತ್ತಿಗೆ ಕಾಣಿಸಬೇಕಾದ 'ಸ್ಕೂಪ್' ಗೋಚರವಾಗುತ್ತದೆ. ಹೀಗೆ ತನ್ನತನದ ಅರಿವನ್ನು ಬೆಳೆಸಿಕೊಂಡ ಬಳಿಕ ಸರಿತ ಕ್ರಮೇಣ ಗಂಡನನ್ನು ಪ್ರತಿಭಟಿಸುವ ಧೈರ್ಯ ತಾಳುತ್ತಾಳೆ. ಅವನು ಕ್ಲಬ್‌ಗೆ ಕರೆದಾಗ ಹಾಸಿಗೆಗೆ ಕರೆದಾಗ ಪ್ರದರ್ಶನ ವಸ್ತು ವಾಗಲಾರೆ, ಬಳಕೆಯ ವಸ್ತುವಾಗಲಾರೆ ಎಂದುಕೊಂಡು ಅವಳು ನಿರಾಕರಿಸುತ್ತಾಳೆ. ಈ ದೇಶದಲ್ಲಿ ಮನುಷ್ಯರ ಹರಾಜೂ ನಡೆಯುತ್ತದೆ ಎನ್ನುವುದನ್ನು ಸಿದ್ಧ ಪಡಿಸುವುದು ಜಯಸಿಂಗ್ ನಿಗೆ ಎಷ್ಟು ಮುಖ್ಯವೋ, ತನ್ನನ್ನು ವಸ್ತುವಿನಂತೆ ಬಳಸಿಕೊಳ್ಳುತ್ತಿರುವ ವಿವಾಹ ಮತ್ತು ಕುಟುಂಬ ವ್ಯವಸ್ಥೆಯನ್ನು ಬಯಲಿಗೆಳೆಯುವುದು ಕೂಡ ಅಷ್ಟೇ ಮುಖ್ಯವಾಗುತ್ತದೆ ಸರಿತಾಳಿಗೆ. ತಾನು ಮನೆಯಲ್ಲಿಯೇ ಪ್ರೆಸ್ ಕಾನ್ಫರೆನ್ಸ್‌ಗೆ ಕರೆದು 'ವ್ಯಕ್ತಿಯನ್ನು ಉಪಯೋಗದ ವಸ್ತುವಾಗಿ ಬಳಸಿ ಬಿಸಾಡುವ ಜಯಸಿಂಗ್ ಜಾಧವನನ್ನು ಸಾದರ ಪಡಿಸುತ್ತೇನೆ' ಎಂದು ಅವಳು ಘೋಷಿಸುತ್ತಾಳೆ. ತನ್ನ ಮನೆಯಲ್ಲಿ ತಾನು ಅಪರಿಚಿತಳೆಂಬ ಭಾವನೆ ಅವಳನ್ನು ಕಾಡತೊಡಗುತ್ತದೆ. ಸ್ವಂತ ಪರಿಶ್ರಮದಿಂದ ಬೆಳೆದ ಜಯಸಿಂಗ್ ಮನುಷ್ಯ ನಾಗಿರುವುದನ್ನು ಬಿಟ್ಟು 'ಮಾಲೀಕ'ನಾದುದು ಯಾಕೆ ಎನ್ನುವ ಪ್ರಶ್ನೆ ಅವಳಲ್ಲಿ ಹುಟ್ಟಿಕೊಳ್ಳುತ್ತದೆ. ತನ್ನನ್ನು ಕಮಲಾಳನ್ನು ವಸ್ತುವಿನಂತೆ ಬಳಸಿಕೊಳ್ಳಲು ಅವನಿಗೆ ಅಧಿಕಾರವನ್ನು ಕೊಟ್ಟವರು ಯಾರು? ಮುಂದೆ ಕಮಲಾಳನ್ನು ಮನೆಯಲ್ಲಿಟ್ಟುಕೊಳ್ಳುವುದು ಅಪರಾಧವಾಗಿದ್ದರೆ ಅವಳನ್ನು ಖರೀದಿಸಿ ಕರೆತಂದದ್ದು ಸ್ವಾರ್ಥ ಸಾಧನೆಗೆ ಮಾತ್ರವೇ? ವೃತ್ತಿಯಲ್ಲಿ ಉನ್ನತಿ ಸಾಧಿಸಲು ವ್ಯಕ್ತಿ ಆರಿಸಿಕೊಳ್ಳುವ ಈ ಒಳದಾರಿಗಳು ಅವಳಿಗೆ ಒಗಟೆನಿಸುತ್ತವೆ. ಕೊನೆಗೆ ತಾನು ಇರುವುದು ದಾಸ್ಯ ಶೃಂಖಲೆಯೊಳಗೆ ಅದರಿಂದ ಮುಕ್ತಿಯನ್ನು ಪಡೆಯಬೇಕೆನ್ನುವುದಷ್ಟೇ ಅವಳಿಗೆ ಮುಖ್ಯ ವಾಗುತ್ತದೆ. ಅವಳ ಆಲೋಚನೆಯನ್ನು ಅರ್ಥಮಾಡಿಕೊಂಡರೂ ಕಾಕಾ ಸಾಹೇಬರು ಅವಳಿಗೆ ವಾಸ್ತವತೆಯನ್ನು ತಿಳಿಸುವ ಪ್ರಯತ್ನವನ್ನು ನಡೆಸುತ್ತಾರೆ. ಇದು ಪರಂಪರೆಯಿಂದ ಮುಂದುವರೆದು ಬಂದಿರುವ ಪದ್ಧತಿ. ಜಯಸಿಂಗನೊಬ್ಬನೇ ಏಕೆ, ತಾನು ಕೂಡ ಇದರಿಂದ ಬೇರೆಯಲ್ಲವೆಂದು ಅವರು ತಿಳಿಸುತ್ತಾರೆ. ಅಂತ್ಯದಲ್ಲಿ ಸರಿತಾಳ ವೈಚಾರಿಕ ಬೆಳವಣಿಗೆಗೆ ಜಯಸಿಂಗ ಆಕಸ್ಮಿಕವಾಗಿ ನೌಕರಿಯನ್ನು ಕಳೆದುಕೊಳ್ಳಬೇಕಾಗಿ ಬಂದ ಪ್ರಸಂಗ ತಾತ್ಕಾಲಿಕ ತಡೆಯನ್ನು ಉಂಟು ಮಾಡುತ್ತದೆ. ಆದರೆ ತನ್ನನ್ನು ತಾನು ಸ್ಥಾಪಿಸಿಕೊಳ್ಳುವ ದಿನದ ನಿರೀಕ್ಷೆಯಲ್ಲಿ ಅವಳು ಇರುತ್ತಾಳೆ: 'ಆಗ ನಾನು ತಿಂದುಂಡು ಬೀಸಿ ಒಗೆಯುವ ವಸ್ತುವಾಗಿ ಇರುವುದಿಲ್ಲ. ನಾನು ನನ್ನ ಇಚ್ಛೆಯಂತೆ ಬದುಕಿ ತೋರಿಸ್ತೀನಿ. ಆಗ ಯಾರೂ ನನ್ನ ಮೇಲೆ ಅಧಿಕಾರ ಚಲಾಯಿಸಲಾರರು. ಆ ದಿನ ಖಂಡಿತವಾಗಿಯೂ




ಬಂದೇ ಬರುತ್ತದೆ...' ತನ್ನ ಕಾರ್ಯಸಿದ್ಧಿಗಾಗಿ ಕಮಲಾಳನ್ನು ಖರೀದಿಸಿ ಮನೆಗೆ ಕರೆತಂದ ವ್ಯಕ್ತಿ ಅವಳ ಭವಿಷ್ಯದ ಕುರಿತು ಕಿಂಚಿತ್ತೂ ಗಮನವನ್ನು ಹರಿಸದೇ ಇರುವುದು ಕೂಡಾ ಸವಿತಾಳ ನೋವಿನ ಅಭಿವ್ಯಕ್ತಿಗೆ ಸಹಕಾರಿಯಾಗುತ್ತದೆ.

ಜಯಸಿಂಗನಿಗೆ ಮತ್ತೊಂದು ನೌಕರಿಯನ್ನು ಪಡೆಯುವ ಮತ್ತು ಸರಿತಾಳ ಬಂಡಾಯಕ್ಕೆ ಸರಿಯಾದ ಸಮಯ ಒದಗಿಬರುವ ನಿರೀಕ್ಷೆಯೊಂದಿಗೆ ನಾಟಕ ಅಂತ್ಯಗೊಳ್ಳುತ್ತದೆ. ಅನಗತ್ಯ ವಿವರಗಳು ಮತ್ತು ಗೊಂದಲಗಳಿಗೆ ಅವಕಾಶವಿಲ್ಲದೆ, ಚುರುಕಾದ ಸಂಭಾಷಣೆ, ಅನಿರೀಕ್ಷಿತ ತಿರುವುಗಳು ಮತ್ತು ಅದ್ಭುತವೆನಿಸುವ ಪಾತ್ರ ಪೋಷಣೆ ಯಿಂದಾಗಿ 'ಕಮಲಾ' ನಾಟಕ ಗಮನ ಸೆಳೆಯುತ್ತದೆ.

ಪ್ರೇಕ್ಷಕರಿಗೆ (ಆ ಮೂಲಕ ಸಮಾಜಕ್ಕೆ) ತಾನು ನೀಡ ಬೇಕೆಂದಿರುವ ಸಂದೇಶವನ್ನು ಕರಾರುವಾಕ್ಕಾಗಿ ತಲುಪಿಸುವುದು ತೆಂಡೂಲ್ಕರ್ ಅವರಂತಹ ನಾಟಕಕಾರರಿಗೆ ಕಷ್ಟದ ಕೆಲಸವೇನಲ್ಲ. ಅವರು ಇದನ್ನು ಎರಡೆರಡು ವಿಭಿನ್ನ ನೆಲೆಯ ಪಾತ್ರಗಳ ಮುಖಾಮುಖಿಯ ಮೂಲಕ, ಉದಾಹರಣೆಗೆ ಹಿಂದಿನ ತಲೆಮಾರಿನ ಪತ್ರಕರ್ತ ಕಾಕಾಸಾಹೇಬ ಮತ್ತು ಇಂದಿನ ವಿದ್ಯುನ್ಮಾನ ಯುಗದ ಪತ್ರಕರ್ತ ಜಯಸಿಂಗ್ ಜಾಧವ್, ಹಾಗೂ ದೆಹಲಿಯ ಹಿರಿ ಮಧ್ಯಮವರ್ಗದ ಸುಶಿಕ್ಷಿತ ತರುಣಿ ಸರಿತಾ ಮತ್ತು ಹರಿದ ಬಟ್ಟೆ ತೊಟ್ಟ ಬುಡಕಟ್ಟು ಹೆಣ್ಣು ಕಮಲಾಳ ಮೂಲಕ ಸಾಧಿಸಿದ್ದಾರೆ.

ಕಲಾಗಂಗೋತ್ರಿ ರಂಗತಂಡದ ಪ್ರತಿಭಾವಂತ ಕಲಾವಿದರು ಈ ನಾಟಕದ ಯಶಸ್ಸಿಗೆ ಕಾರಣರಾಗಿದ್ದಾರೆ.ಅದರಲ್ಲಿಯೂ ಮುಖ್ಯ ಪಾತ್ರಗಳಾದ ಜಯಸಿಂಹ ಜಾಧವ್ (ಸಿದ್ಧಾರ್ಥ ಭಟ್) ಮತ್ತು ಕಾಕಾ ಸಾಹೇಬರ (ಶ್ರೀನಿವಾಸ್ ಮೇಷ್ಟ್ರು)ಸಹಜ ಅಭಿನಯ, ಭಾವಾಭಿವ್ಯಕ್ತಿ ಮತ್ತು ಏರಿಳಿತದ ಮಾತಿನ ಧಾಟಿ ಉಲ್ಲೇಖನೀಯ. ಸರಿತ(ಸೌಮ್ಯ) ಮತ್ತು ಕಮಲ (ಸುಷ್ಮಾ) ಈ ನಾಟಕದ ಮುಖ್ಯ ಜೀವನಾಡಿಗಳು. ಜೈನ (ಶ್ರೀನಿವಾಸ್ ಕೈವಾರ) ಮತ್ತು ಕಮಲಮ್ಮ (ಜಯಶೀಲಾ) ಅಲ್ಪಾವಧಿಯ ಪುಟ್ಟ ಪಾತ್ರಗಳಾಗಿದ್ದರೂ ಅವರ ಲವಲವಿಕೆಯ ಅಭಿನಯ ಚೇತೋಹಾರಿಯಾಗಿದೆ. ನಾಟಕದ ಒಟ್ಟು ಯಶಸ್ಸಿಗೆ ಕಾರಣರಾದ ನಿರ್ದೇಶಕ ಪ್ರದೀಪ್ ಕುಮಾರ್ ಮತ್ತು ಇದರ ರುವಾರಿ ಡಾ. ಬಿ.ವಿ.ರಾಜಾರಾಮ್ ಅಭಿನಂದನಾರ್ಹರು.

❑



ಅಪೂರ್ವ ಮಹಿಳಾ ಆತ್ಮಕಥೆ 'ನಾಳೀನ ಚಿಂತ್ಯಾಕ'

■ ಶೈಲಜ. ಕೆ

ಮಹಿಳೆಯರ 'ನಿಜ'ದ ಬದುಕಿನ ಕಥೆಯನ್ನು ಹೇಳುವ 'ಮಹಿಳಾ ಆತ್ಮಕಥೆ'ಗಳು ಮಹಿಳೆಯರಿಗೆ ತುಂಬಾ ಹತ್ತಿರವಾಗುತ್ತಿವೆ, ಬಹು ಪ್ರಿಯವಾಗುತ್ತಿವೆ. ಈ 'ಆತ್ಮಕಥೆ'ಯ ಪ್ರಕಾರ ಭಾರತೀಯ ನೆಲಕ್ಕೆ ಹೊಸತು. ಆದರೆ ಅದು ಕೊಟ್ಟ ನೆಲೆ, ಪ್ರಭಾವ ಮಾತ್ರ ಅತ್ಯದ್ಭುತ. ನಮ್ಮ ಕಥೆಯನ್ನು ನಾವೇ ಹೇಳುವುದು, ಬರೆಯುವುದು, ಇನ್ನೊಬ್ಬರ ಕಥೆಯನ್ನು ಆಲಿಸುವುದು, ಓದುವುದು, ಪ್ರತಿಕ್ರಿಯಿಸುವುದು, ವಿಮರ್ಶಿಸುವುದು – ಈ ಎಲ್ಲಾ ವಿಚಾರಗಳೂ ಕುತೂಹಲಕರವಾದುದೂ ಆಸಕ್ತಿದಾಯಕವೂ ಆಗಿರುತ್ತದೆ. ಅದರ ಜತೆಗೆ ನಮ್ಮನ್ನು ಪರಿವರ್ತಿಸುವ, ನಮ್ಮೊಳಗನ್ನು ನಾವು ಶೋಧಿಸುವ ಕೆಲಸವನ್ನೂ ಇವು ಮಾಡುತ್ತವೆ. ಅದರಲ್ಲೂ ಮಹಿಳಾ ಸಂದರ್ಭಕ್ಕೆ ಬಂದಾಗ, ಮಹಿಳೆಯ ವಾಸ್ತವ ಜೀವನದ ನೆಲೆಗಟ್ಟುಗಳನ್ನು ಅರ್ಥ ಮಾಡಿಕೊಳ್ಳಬೇಕಾಗುವ ಹೊತ್ತಿನಲ್ಲಿ ನಾವು ಮಹಿಳಾ ಅನುಭವಗಳನ್ನು ಹೇಳುವ ಮಹಿಳಾ ಆತ್ಮಕಥೆಗಳನ್ನೇ ಆಶ್ರಯಿಸಬೇಕಾಗುತ್ತದೆ. ಮಹಿಳೆಯ ಬದುಕು ವಾಸ್ತವವಾಗಿ ಹೇಗಿದೆ? ಆಕೆ ಬದುಕನ್ನು ಎದುರಿಸಿದ ಬಗೆ, ಬದುಕಿಗೆ ಉತ್ತರಿಸಲು ಆಕೆಗಿದ್ದ ಎಡರುತೊಡರುಗಳೇನು, ಆಕೆಗೆ ಎದುರಾದ ಜೀವನದ ಸವಾಲುಗಳು ಎಂತೆಂತಹದ್ದು? ಜೀವನದ ಸಂದರ್ಭವನ್ನು ದಾಟುವ ಸಂದರ್ಭದಲ್ಲಿ ಆಕೆಯಲ್ಲಿ ಅಡಗಿರುವ ಮೂಲ ಶಕ್ತಿಗಳು ಯಾವ್ಯಾವುವು? ಎಂಬುದಕ್ಕೆಲ್ಲಾ ವಿವರಗಳು ನಮಗೆ ಮಹಿಳಾ ಆತ್ಮಕಥೆಗಳ ಮೂಲಕ ಲಭ್ಯವಾಗುತ್ತವೆ. ಮಹಿಳಾ ಆತ್ಮಕಥೆಗಳಿಂದ ಮಹಿಳೆಯರು ಮಾತ್ರವಲ್ಲದೆ ನಮ್ಮ ಸಮಾಜ ಕಲಿಯುವಂತಹ ವಿಚಾರಗಳು ಎಷ್ಟೋ ಇವೆ. ಮಹಿಳೆಯ ಏಳು ಬೀಳಿನ ಹಾದಿಯನ್ನು, ಜೀವನದ ಹೋರಾಟವನ್ನು, ಶೋಷಣೆಯ ವಿವಿಧ ಸ್ವರೂಪಗಳನ್ನು ಚಿತ್ರಿಸುವ ಈ ಆತ್ಮಕಥೆಗಳು ಕೆಲವೊಮ್ಮೆ ಮಹಿಳೆಯರ ಬಾಳಿಗೆ ದಾರಿದೀಪವಾಗಬಲ್ಲುದು, ಮಾರ್ಗದರ್ಶಕವಾಗಬಲ್ಲುದು, ಅಂತಃಶಕ್ತಿಯನ್ನೀಯಬಲ್ಲುದು. ಅಂತಹ ಒಂದು ಅಪೂರ್ವ ಆತ್ಮಕಥೆಯೇ ಶಾಂತಾ ಹುಬಳೀಕರ ಅವರ 'ನಾಳೀನ ಚಿಂತ್ಯಾಕ'. ಮೂಲ ಮರಾಠಿ ಭಾಷೆಯಲ್ಲಿರುವ ಈ ಆತ್ಮಕಥೆ ('ಕಶಾಲಾ ಉದ್ಯಾಚಿ ಬಾತ')ಯನ್ನು ಮರಾಠಿಯಲ್ಲಿ ಡಿ.ಡಿ.ಕುಲಕರ್ಣಿಯವರು (1990) ನಿರೂಪಿಸಿದರು. ಇದನ್ನು ಕನ್ನಡದಲ್ಲಿ ಕೆ. ಎಸ್. ಕುಲಕರ್ಣಿಯವರು ಅನುವಾದಿಸಿದ್ದು, 1995ರಲ್ಲಿ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿಯಿಂದ ಪ್ರಸಾರವಾಗಿದೆ.

ಶಾಂತಾ ಹುಬಳೀಕರ ಅವರ 'ನಾಳೀನ ಚಿಂತ್ಯಾಕ' ಮಹಿಳಾ ಬದುಕಿನ ಹೋರಾಟದ ಅನನ್ಯತೆಯನ್ನು ದಾಖಲಿಸುವ ಫ್ಲ್ಯಾಶ್ ಬ್ಯಾಕ್ ತಂತ್ರದಲ್ಲಿ ರಚಿತವಾದ ಒಂದು ವಿಶಿಷ್ಟ ಆತ್ಮಕಥನ. ಶಾಂತಾ ಹುಬಳೀಕರ ಅವರು ಮರಾಠಿ, ಹಿಂದಿ ಮತ್ತು ಕನ್ನಡ ಚಲನಚಿತ್ರ ರಂಗದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ ದಿಟ್ಟ ಕನ್ನಡತಿ. 'ಜೀವನ ನಾಟಕ' ಎಂಬ ಕನ್ನಡ ಚಲನಚಿತ್ರ, 'ಮಾಝೂ ಮುಲಗಾ', 'ಘರಕಿ ಲಾಜ', 'ಮಾಲನ', 'ಮಾಣೂಸ' ಮೊದಲಾದ ಮರಾಠಿ ಚಲನಚಿತ್ರ, 'ಆದಮಿ', 'ಮೇರಾ ಲಡಕಾ' ಮೊದಲಾದ ಹಿಂದಿ ಚಲನಚಿತ್ರ, ಹಾಗೂ ಕನ್ನಡ, ಮರಾಠಿ ರಂಗಭೂಮಿಯಲ್ಲಿ ಪ್ರಸಿದ್ಧ ನಟಿಯಾಗಿದ್ದ 'ಶಾಂತ' ತಾನು ನಂಬಿದ ಪತಿಯಿಂದ, ಮಗನಿಂದ ಮೋಸಹೋಗಿ ತನ್ನ ಜೀವಿತದ ಕೊನೆಯ ಘಟ್ಟದಲ್ಲಿ ಸಾಕಷ್ಟು ನೊಂದು ಬೆಂದು ಮಾನವ ಲೋಕಕ್ಕೆ ಕಣ್ಮರೆಯಾಗಿ, ವಸಯಿಯ ಶ್ರದ್ಧಾನಂದ ಆಶ್ರಮದಲ್ಲಿ ಒಬ್ಬ ಅನಾಥಳಂತೆ ಜೀವಿಸುತ್ತಿದ್ದರು. ಅಂತಹ ದಿನಗಳಲ್ಲಿ 'ಲೋಕಸತ್ತಾ' ಪತ್ರಿಕೆಯ ಸಂಪಾದಕ ಶ್ರೀ ಮಾಧವರಾವ ಗಡಕರಿ ಇವರು 'ಶಾಂತ ಹುಬಳೀಕರ' ಅವರನ್ನು ಪುನಃ ಮಾನವ ಲೋಕದತ್ತ ಎಳೆತಂದರು. ಈ ಸಂದರ್ಭದಲ್ಲಿ ಹುಟ್ಟಿಕೊಂಡ ಪ್ರೇರಣೆಯಿಂದ ಶಾಂತ ಹುಬಳೀಕರ ತಮ್ಮ ಆತ್ಮಕಥೆ ಬರೆಯಲು ಮನಸ್ಸು ಮಾಡಿದರು. ತಮ್ಮ ಕೃತಿಯ ಆರಂಭದ 'ಮನೋಗತ'ದಲ್ಲಿ ತಾನು ಯಾಕಾಗಿ ಆತ್ಮಕಥೆ ಬರೆದೆ ಎನ್ನುವುದಕ್ಕೆ ಕಾರಣವನ್ನು ಹೀಗೆ – "ನನ್ನ ಆತ್ಮಚರಿತ್ರೆಯನ್ನು ಬರೆಯಲು ನನಗೆ ಅನೇಕರು ಸೂಚಿಸಿದ್ದರು. ನನಗೆ ಅನಿಸುತ್ತಿತ್ತು, ನಾನು ಏನು ಬರೆಯಬೇಕು ನನ್ನ ಆತ್ಮಚರಿತ್ರೆಯಲ್ಲಿ – ನನ್ನ ಜೀವನದಲ್ಲಿಯ ಅಳುಬುರುಕತನವೇ ಅಲ್ಲವೆ? ಆದರೆ ಈಗ ನನ್ನ ವಯಸ್ಸಿನ 77ನೇ ವರ್ಷ ಹಿಂದಿನ ಸ್ಮೃತಿಗಳ ಸುರುಳಿ ಬಿಚ್ಚಿ ನೋಡುವಾಗ, ನನ್ನ ಜೀವನವು ಅತೀ ಸಾಮಾನ್ಯವೇನೂ ಅಲ್ಲ ಎಂದೆನಿಸುತ್ತದೆ. ಸಾದಾ ರೀತಿಯಿಂದ ಜೀವಿಸುವುದೂ ಕೂಡ 'ನೇರವಾಗಿ ಸಾದಾ' ಇಲ್ಲ. ಯಾರ ಆಧಾರವೂ ಇಲ್ಲ. ಸಹಾಯವೂ ಇಲ್ಲ. ಹೇಗೆ ನಾನು ಜೀವಿಸಿದೆ? ದುಃಖದ ಎಷ್ಟು ತಿರುವನ್ನು ಅನುಭೋಗಿಸಿದ್ದೇನೆ. ನನ್ನ ಈ ಪರಿಸ್ಥಿತಿಗೆ ಕಾರಣ ಯಾರು ಅನ್ನುವುದನ್ನು ಜಗತ್ತು ತಿಳಿಯಬೇಕು" ಎಂದು ಹೇಳುತ್ತಾರೆ.

ಶಾಂತ ಹುಬಳೀಕರ ಅವರ ಹುಟ್ಟು (1914) ಹುಬ್ಬಳ್ಳಿಯ ಬಳಿ ಇದ್ದ ಅದರಗುಂಚಿಯ ಒಕ್ಕಲಿಗರ ಕುಟುಂಬದಲ್ಲಿ. ಹುಟ್ಟಿದ ಸಂದರ್ಭದಲ್ಲಿ ಇವರಿಗೆ ತಾಯ್ತಂದೆಯರು ಇಟ್ಟ ಹೆಸರು ರಾಜಮ್ಮ. ನಂತರ ಇವರ ಅಜ್ಜಿ 'ರಾಜಮ್ಮ' ಎಂಬ ಹೆಸರನ್ನು 'ಶಾಂತ'

ಎಂದು ಹೆಸರು ಬದಲಾಯಿಸಿದರು. ಹುಟ್ಟಿನಿಂದಲೇ ದುರದೃಷ್ಟ ಶಾಂತ ಅವರನ್ನು ಹಿಂಬಾಲಿಸಿಕೊಂಡು ಬಂದಿತ್ತು. ಮೂರು ವರ್ಷದ ಮಗುವಾಗಿರು ವಾಗಲೇ ತಾಯ್ತಂದೆಯರನ್ನು ಕಳೆದುಕೊಂಡು ಅನಾಥರಾದರು ಶಾಂತ ಮತ್ತು ಆಕೆಯ ತಂಗಿ ಶಾರದ. ಆ ಸಂದರ್ಭದಲ್ಲಿ ಈ ಇಬ್ಬರು ಮಕ್ಕಳನ್ನು ಅಜ್ಜಿ ಸಾಕಿ ಸಲಹಿದಳು. ಆದರೆ ಬರಗಾಲದ ಬವಣೆಯಿಂದ ಅಜ್ಜಿಗೂ ಈ ಇಬ್ಬರು ಮಕ್ಕಳನ್ನು ಸಾಕಲು ತುಂಬಾ ಕಷ್ಟವಾಯಿತು. 'ಹುಟ್ಟಿದ ಕೂಡಲೇ ತಾಯ್ತಂದೆಯರನ್ನು ತಿಂದ ಮಕ್ಕಳು' ಎಂಬ ಅಪವಾದವನ್ನು ಹೊತ್ತುಕೊಂಡುದರಿಂದ ಸಂಬಂಧಿಕರಿಗೂ ಈ ಮಕ್ಕಳು ಬೇಡ ವಾಯಿತು. ಆದ್ದರಿಂದ ಅಜ್ಜಿ ಈ ಇಬ್ಬರು ಮಕ್ಕಳನ್ನು ಹುಬ್ಬಳ್ಳಿಯ ಶ್ರೀಮಂತಳಾದ ಸಾವಿತ್ರಕ್ಕನ ಬಳಿ ಕರೆತಂದಳು. ಸಾವಿತ್ರಕ್ಕ ವೃದ್ಧಳಾದುದರಿಂದ ಆಕೆಯ ಸಾಕುಮಗಳು ಚಂದ್ರಕ್ಕನ ಬಳಿ ಈ ಮಕ್ಕಳು ಮುಂದಿನ ದಿನಗಳನ್ನು ಕಳೆಯುವಂತಾಯಿತು.

ಅಂದಿನ ಕಾಲದ ಮಹಿಳಾ ವಿದ್ಯಾಭ್ಯಾಸದ ಕುರಿತು ಸಮಾಜದಲ್ಲಿ ನೆಲೆಸಿದ್ದ ತಿಳುವಳಿಕೆಯ ಬಗ್ಗೆ ಶಾಂತ 'ಆ ಕಾಲದಲ್ಲಿ ಹುಡುಗಿಯರಿಗೆ ಶಾಲೆ ಶಿಕ್ಷಣಕ್ಕಿಂತ ಮನೆಗೆಲಸದಲ್ಲಿ ಪ್ರಾಧಾನ್ಯತೆ ಇತ್ತು. ನನಗೆ ಅದನ್ನು ಕಲಿಸಲಾಗಿತ್ತು. ಬೆಳಿಗ್ಗೆ ಎದ್ದೊಡನೆ ಕಸ ಬಳಿಯುವುದು, ಥಳಿ ಹೊಡೆದು, ರಂಗವಲ್ಲಿ ಹಾಕುವುದು, ದನದ ಹಟ್ಟಿಯನ್ನು ಸ್ವಚ್ಛ ಮಾಡುವುದು, ಹಾಲು ಕರೆಯುವುದು, ಹಾಲು ಕಾಸುವುದು – ಈ ಎಲ್ಲ ಕೆಲಸಗಳಲ್ಲದೆ ಅಡಿಗೆ ಮಾಡುವುದನ್ನು ಸಹ ನನಗೆ ಕಲಿಸಿದ್ದರು.'(ಪು.13) ಸಾಕು ತಾಯಿ ಚಂದ್ರಕ್ಕ ಶಾಂತಾಳಿಗೆ ವಿದ್ಯಾಭ್ಯಾಸ ಕೊಡುವ ಉದ್ದೇಶದಿಂದ ಮುನಸೀಪಾಲಿಟಿಯ ಶಾಲೆಗೆ ಸೇರಿಸಿದಳು. ಶಾಲೆ ಕಲಿಯುತ್ತಿರುವಾಗಲೇ ಶಾಂತಾಳಿಗೆ ವರ ಹುಡುಕಲು ಆರಂಭವಾಗಿತ್ತು. ಯಾಕೆಂದರೆ 'ಅಂದು ಲಗ್ನದ ಮಾರ್ಕೆಟ್ಟಿನಲ್ಲಿ ಹುಡುಗಿಯರ ಶಿಕ್ಷಣದ ಬೆಲೆ ಆಗ ಶೂನ್ಯ ವಾಗಿತ್ತು. ಡಾಕ್ಟರ, ವಕೀಲರಿಗೂ ಕೂಡ ಶಾಲೆ ಕಲಿಯದ ಮಡ್ಡ ಹೆಂಡತಿ ಸಿಗುತ್ತಿದ್ದರು. ಆದುದರಿಂದ ಕಲಿತ ಹುಡುಗಿಯರ ಲಗ್ನ ವಾಗುವುದು ದುಸ್ತರವಾಗಿತ್ತು.' (ಪು.14) ಎನ್ನುತ್ತಾರೆ.

ಆಗ 8/10 ವರ್ಷಕ್ಕೆಲ್ಲಾ ಹೆಣ್ಣುಮಕ್ಕಳ ಮದುವೆ ಆಗುತ್ತಿತ್ತು. ಅದು ಮಾತ್ರವಲ್ಲದೆ ಆಗಿನ ಕಾಲದಲ್ಲಿ ಹೆಣ್ಣುಮಕ್ಕಳ ಮದುವೆಯೆಂದರೆ ಮನೆತನಕ್ಕೆ ಒಂದು ದೊಡ್ಡ ಸಮಸ್ಯೆಯಾಗಿತ್ತು. ಲಗ್ನಕ್ಕಿಂತ ಮೊದಲು ಮೈನೆರೆದರೆ ಹುಡುಗಿಯರಿಗೆ ಅದು ದೊಡ್ಡ ಕುಂದೆಂದು ಭಾವಿಸ ಲಾಗುತ್ತಿತ್ತು. ಶಾಂತಾಳ ಸಂದರ್ಭದಲ್ಲಂತೂ ಲಗ್ನಕ್ಕಿಂತ ಮೊದಲು ಮೈನೆರೆತದ್ದು ಒಂದು ಕಾರಣವಾದರೆ, ಬಡತನ ಇನ್ನೊಂದು ಮುಖ್ಯ ಕಾರಣವಾಗಿ ಮದುವೆ ನಿಧಾನವಾಯಿತು. ಅಂದಿನ ಕಾಲದ ಮಹಿಳಾ ಶೋಷಣೆಯ ಬಗ್ಗೆ ತನ್ನ ಕೃತಿಯ ಅಲ್ಲಲ್ಲಿ ಹೇಳುವ ಶಾಂತಾ 'ಹೆಣ್ಣುಮಕ್ಕಳೆಡೆ ಜನರು ನೋಡುವ ದೃಷ್ಟಿ ಆಗ ಚೆನ್ನಾಗಿರಲಿಲ್ಲ. ಬಾಲ್ಯವಿವಾಹ ಪದ್ಧತಿ ಇತ್ತು. ಆರುತಿಂಗಳ ತೊಟ್ಟಿಲಲ್ಲಿಯ ಹೆಣ್ಣುಮಗುವಿನ ವಿವಾಹ ಮೂರುವರ್ಷ ನಾಲ್ಕುವರ್ಷದ ಬಾಲಕ ರೊಡನೆ ಜರುಗುತ್ತಿತ್ತು. ಆ ಹುಡುಗ ತೀರಿಕೊಂಡರೆ, ಹೊಟ್ಟೆ ಹೊಸೆಯುವ ಹೆಣ್ಣುಕೂಸು ವಿಧವೆಯಾಗುತ್ತಿತ್ತು. ಅವಳ ಲಗ್ನ ಪುನಃ ಆಗುತ್ತಿರಲಿಲ್ಲ. ಇಂತಹ ಅಸಹಾಯಕ ಹುಡುಗಿಯರಿಗೆ ಮನೆ ಯಲ್ಲಿರುವವರೇ ಮೋಸಮಾಡಿ, ಅವಳು ಬಸುರಿಯಾದರೆ, ಕೆಟ್ಟ ನಡೆತೆಯುಳ್ಳವಳೆಂದು ಬಾವಿಯಲ್ಲಿ ನೂಕಿ, ಕಾಲು ತಪ್ಪಿ ಬಾವಿಯಲ್ಲಿ ಬಿದ್ದಳೆಂದು ಸುದ್ದಿ ಹಬ್ಬಿಸಿ ಅಳುವ ಸೋಗು ಮಾಡುತ್ತಿದ್ದರು.' (ಪು.15) ಎಂದು ನೋವನ್ನು ವ್ಯಕ್ತ ಪಡಿಸಿದುದನ್ನು ಕಾಣಬಹುದು.

ಶಾಂತಾಳಿಗೆ 16 ವರ್ಷವಾದಾಗ ಆಕೆಯ ಸಾಕುತಾಯಿ ಶಾಂತಾಳ ಮದುವೆಯನ್ನು 75 ವರ್ಷದ ಮುದುಕನೊಂದಿಗೆ ತೀರ್ಮಾನಿಸಿದರು. 'ನಾಳೆಯೇ ಮದುವೆ' ಎನ್ನುವ ಸಂದರ್ಭದಲ್ಲಿ ಶಾಂತ 'ತನ್ನ ಬದುಕು ತನ್ನದು', ತಾನೇ ಅದನ್ನು ರೂಪಿಸಿಕೊಳ್ಳಬೇಕೆಂದು ತನ್ನ ಭವಿಷ್ಯದ ಬಗ್ಗೆ ತಾನೇ ದೃಢ ನಿಶ್ಚಯಿಸಿಕೊಂಡು ಮನೆಯಲ್ಲಿ ಯಾರಿಗೂ ಸುಳಿವು ಕೊಡದೆ ಮನೆಯಿಂದ ಹೊರ ಬಂದಳು. ತನ್ನ ಗೆಳತಿಯ ಗಂಡನ ಸಹಾಯದಿಂದ ಮನೆಯನ್ನೂ ಊರನ್ನೂ ತೊರೆದು ಗದಗಿನಲ್ಲಿ ಮೊಕ್ಕಾಂ ಹೂಡಿದ್ದ ಗುಬ್ಬಿ ಕಂಪೆನಿಗೆ ಕೆಲಸಕ್ಕೆ ಸೇರಿಕೊಂಡಳು. ಇದು ಶಾಂತಾ ತನ್ನ ಜೀವನದ ಏಳ್ಗೆಯ ದಾರಿಯತ್ತ ಸಾಗುವಲ್ಲಿ ಆಕೆ ಇರಿಸಿದ ಮೊದಲ ಗಮನಾರ್ಹ ಹೆಜ್ಜೆ ಎನ್ನಬಹುದು.

ಗುಬ್ಬಿ ಕಂಪೆನಿಗೆ ಸೇರಿದ ಶಾಂತ ಹಂತಹಂತವಾಗಿ ಹೆಸರು ಗಳಿಸುತ್ತಾ ಮುಂದೆ ಸಾಗಿದಳು. ಆದರೆ 'ನಾಟಕ' ಕಂಪೆನಿಯಲ್ಲಿ ಹೆಚ್ಚಿನ ಪ್ರಗತಿಗೆ ಅವಕಾಶವಿಲ್ಲದ್ದನ್ನು ಗಮನಿಸಿದ ಶಾಂತ ಮುಂದಕ್ಕೆ ಚಲನಚಿತ್ರರಂಗದಲ್ಲಿ ಪ್ರವೇಶ ಪಡೆದರು. ಮರಾಠಿ ಮತ್ತು ಹಿಂದಿ ಚಲನಚಿತ್ರರಂಗದಲ್ಲಿ ನಟನೆಯ ಜತೆಗೆ ಹಿನ್ನೆಲೆ ಗಾಯಕಿಯಾಗಿಯೂ ಶಾಂತ ದುಡಿಯತೊಡಗಿದ್ದುದರಿಂದ, ಹಣ ಸಂಪಾದನೆಯ ಜತೆಗೆ ಲೋಕಪ್ರಿಯತೆಯನ್ನೂ ಶಾಂತಾಗೆ ತಂದುಕೊಟ್ಟವು. 'ಮಾಣೂಸ' ಚಲನಚಿತ್ರವು ಶಾಂತ ಅವರ ಬದುಕಿಗೆ ಹೊಸ ತಿರುವನ್ನು ತಂದುಕೊಟ್ಟಿತು. ಈ ಸಂದರ್ಭದಲ್ಲಿ ಅಭಿಮಾನಿಗಳಿಂದ ಹಲವು ತರದ ಪತ್ರಗಳು ಬರುತ್ತಿದ್ದವು. ಈ ಪತ್ರಗಳ ಕುರಿತಾಗಿ ಶಾಂತ – 'ಬಹುತೇಕ ಪತ್ರ ಲೇಖಕರಿಗೆ ನಾನು ಹೆಂಡತಿಯಾಗಿ ಬೇಕಾಗಿತ್ತು. 'ನೀನು ನನಗೆ ಬಹಳ ಬೇಕಾದವಳು'. 'ನಿನ್ನ ಫೋಟೋ ನಾನು ಬೆಡ್‌ರೂಮಿನಲ್ಲಿ ಹಚ್ಚಿದ್ದೇನೆ. ಮಲಗುವ ಮುನ್ನ ನಿನ್ನ ಹಾಡು ನಾನು ಕೇಳುತ್ತಿದ್ದೇನೆ'. 'ಸ್ನಾನ ಮಾಡುವಾಗ ನಿನ್ನ ಫೋಟೋ ಎದುರಿಗೆ ಇಟ್ಟುಕೊಳ್ಳುತ್ತೇನೆ'. ಒಂದೇ? ಎರಡೇ? ಅನೇಕ ಕಲ್ಪನೆ. ಈ ಪತ್ರಗಳೆಂದರೆ ಕೇವಲ ಮನರಂಜನೆ' ಎನ್ನುತ್ತಾರೆ.

ಇಷ್ಟರ ತನಕ ಒಂಟಿಯಾಗಿ ಬದುಕು ಸಾಗಿಸುತ್ತಿದ್ದ ಶಾಂತರಿಗೆ ಅವರ ಆರ್ಥಿಕ ಸ್ವಾವಲಂಬನೆ ದೃಢವಾಗುತ್ತಾ ಹೋದಂತೆ, ಅಭಿಮಾನಿ ಬಳಗ ಹೆಚ್ಚುತ್ತಾ ಹೋದಂತೆ ತಾನೊಬ್ಬಳೇ ಎಲ್ಲವನ್ನೂ ನೋಡಿ ಕೊಳ್ಳುವುದು ಅಸಾಧ್ಯವೆನ್ನುವಂತಾಯಿತು. ಹೀಗೆ ಎಲ್ಲವುಗಳಿಂದ





ಪಾರಾಗಲು ಪುರುಷನೊಬ್ಬನ ಆಧಾರದ ಆವಶ್ಯಕತೆ ಬೇಕೆಂದು ಅನ್ನಿಸತೊಡಗಿತು. ಇದೇ ಸಂದರ್ಭದಲ್ಲಿ 'ಡೆಕ್ಕನ್' ಎಂಪೋರಿಯಂ ನಲ್ಲಿರುವ ಪ್ರಸಿದ್ಧ ಬಟ್ಟೆಯಂಗಡಿ ಮಾಲಕ ಶ್ರೀಗಿತೆಯವರ ಪರಿಚಯವಾಯಿತು. ಪರಿಚಯ ದಟ್ಟವಾದಾಗ ಗಿತೆಯವರು ಶಾಂತ ಅವರನ್ನು ವಿವಾಹವಾಗ ಬಯಸಿದರು. ಗಿತೆಗೆ ಈಗಾಗಲೇ ಎರಡು ಮದುವೆಯಾಗಿತ್ತು. ಮೊದಲನೇ ಹೆಂಡತಿ ತೀರಿಕೊಂಡಿದ್ದರು. ಎರಡನೇ ಹೆಂಡತಿ ಮತ್ತು ಮಕ್ಕಳಿದ್ದರು. ಗಿತೆ ಮತ್ತು ಶಾಂತ ಅವರ ವಿವಾಹವಾದ ಮೇಲೆ ವಿಷಯ ಗೊತ್ತಾಗಿ ಅವರ ಮೊದಲನೆಯ (ಎರಡನೇ) ಹೆಂಡತಿ ಅಂಗಡಿಗೇ ಬಂದು ಗಲಾಟೆ ಮಾಡಿದರು. ಆಗ ಗಿತೆ ಅವರಿಂದ ಆಶ್ವಾಸನೆ ಆ ಪತ್ನಿಗೆ ದೊರೆತಿತು.

ಇದೇ ಸಮಯದಲ್ಲಿ ತಾವು ನಂಬಿಕೊಂಡಿದ್ದ 'ಪ್ರಭಾತ' ಸಿನೆಮಾ ಕಂಪೆನಿಯಿಂದ ಶಾಂತಾ ಹೊರ ಬರಬೇಕಾಯಿತು. ಇದು ತನ್ನ ವೃತ್ತಿಗೆ ಮತ್ತು ಆರ್ಥಿಕ ಸ್ಥಿತಿಗೆ ಹೊಡೆತ ಕೊಡಬಹುದೆಂದು ಯೋಚಿಸಿ ಈ ವಿಚಾರವನ್ನು ತಮ್ಮ ಗಂಡನ ಜತೆ ಹೇಳುತ್ತಾರೆ. ಆ ಸಂದರ್ಭದಲ್ಲಿ ಗಂಡನ ವರ್ತನೆಯಲ್ಲಾದ ಬದಲಾವಣೆಯನ್ನು ಶಾಂತ ಗಮನಕ್ಕೆ ಬಂದಿತು. ಗಿತೆ ತನ್ನನ್ನು ವಿವಾಹವಾದ ಉದ್ದೇಶದ ಬಗ್ಗೆ ಶಾಂತ ಸಂಶಯವನ್ನು ತಾಳುವಂತಾಯಿತು. ಮುಂದಿನ ದಿನಗಳಲ್ಲೂ ಗಿತೆಯವರ ವರ್ತನೆಯನ್ನು ಶಾಂತ ಸೂಕ್ಷ್ಮವಾಗಿ ಪರಿಶೀಲಿಸತೊಡಗಿದಂತೆ ಗಿತೆಯವರ ವ್ಯಕ್ತಿತ್ವದ ಸ್ವರೂಪ, ಸ್ವಭಾವಗಳು ಏನೇನು ಎಂಬುದರ ಸ್ಪಷ್ಟ ಅರಿವು ಶಾಂತಾರಿಗಾಯಿತು. ಮದುವೆಯ ನಂತರ ಶಾಂತ ಎಲ್ಲಿಗೇ ಹೋಗಲಿ ಜತೆಗೆ ಗಿತೆ ಇದ್ದೇ ಇರುತ್ತಿದ್ದರು. ಈ ಬಗ್ಗೆ ಶಾಂತ 'ಪುಣೆಯಲ್ಲಿಯ ತಮ್ಮ ಅಂಗಡಿಯ ಬಗ್ಗೆ ಕಾಳಜಿ ಇವರಿಗೆ ಹೇಗೆ ಅನಿಸುವುದಿಲ್ಲವೆಂಬುದೇ ನನಗೆ ತಿಳಿಯದಂತಾಗಿತ್ತು.... ಮೆಲ್ಲಮೆಲ್ಲನೆ ನನಗೆ ತಿಳಿಯಹತ್ತಿತು. ಇವರಿಗೆ ನನ್ನ ಮೇಲೆ ವಿಶ್ವಾಸವಿಲ್ಲವೆಂಬುದು. ಸಿನೇಮಾ ನಟಿಯೊಡನೆ ಲಗ್ನ ಮಾಡಿಕೊಂಡ 'ಧಾಡಸಿ' ಪುರುಷನಿವನು ಎಷ್ಟು ಸಂಶಯ ಪ್ರವೃತ್ತಿಯವನಿದ್ದಾನೆಂಬುದು ಹೊಳೆಯಹತ್ತಿತು. ಆದ್ದರಿಂದ ಅವರು ಪುಣೆಗೆ ಹೋಗುತ್ತಿರಲಿಲ್ಲ. ಸ್ಟುಡಿಯೋ, ಪೇಟೆ ಹಾಗೂ ಇತರೆಡೆಗೂ ನನ್ನೊಡನೇ ಇವರು ಬಂದೇ ಬರುತ್ತಿದ್ದರು...' (ಪು.50) ಎನ್ನುತ್ತಾರೆ.

ಗಿತೆ ತುಂಬಾ ಸುಖಜೀವಿ ಹಾಗೂ ಸ್ವಾರ್ಥಿ ಎಂಬುದರ ಬಗ್ಗೆ ಶಾಂತ 'ನನ್ನ ಮೇಲೆ ಪ್ರೇಮ ವ್ಯಕ್ತಪಡಿಸಿ ನನ್ನನ್ನು ಲಗ್ನ ಮಾಡಿಕೊಂಡರೂ ನನ್ನ ಸಲುವಾಗಿ ಒಂದು ದಮಡಿಯನ್ನೂ ಕೂಡ ಖರ್ಚು ಮಾಡಲು ಅವರು ತಯಾರಿರಲಿಲ್ಲ. ಪುಣೆಯಲ್ಲೂ, ಮುಂಬೈಯಲ್ಲೂ ನನ್ನ ಮನೆಯ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಅವರು ನನ್ನ ಮನೆಯಲ್ಲಿ ಆರಾಮಶೀರ ಇರುತ್ತಿದ್ದರು. ಮೊದಲನೇ ಹೆಂಡತಿಯ ಸಂಸಾರ ಹೇಗೆ ನಡೆಯುತ್ತಿತ್ತೆಂಬುದನ್ನು ನಾನು ನೋಡಿದ್ದೆ. ಎಣ್ಣೆ ಇದ್ದರೆ ಸಾಸಿವೆ ಕಾಳಿಲ್ಲ, ಹಿಟ್ಟಿದ್ದರೆ ಉಪ್ಪಿಲ್ಲ. ಇದು ಅಲ್ಲಿ ಕಾಯಂ ಆಗಿ ಇದ್ದ ಪರಿಸ್ಥಿತಿ. ಸಕಲ ಪದಾರ್ಥಗಳ ಅಡಿಗೆ ಎಂದೂ ಆಗುತ್ತಿರಲಿಲ್ಲ. ಅವಳಾದರೂ ಏನು ಮಾಡಿಯಾಳು? ಗಂಡನು ತಂದು ಹಾಕಿದರೆ ಅವಳು ಮಾಡಿಯಾಳು. ಹಬ್ಬ ಹುಣ್ಣಿಮೆಗೆ ಕೂಡ ಮಕ್ಕಳಿಗೆ ಒಳ್ಳೇ ಊಟ ಸಿಗುತ್ತಿರಲಿಲ್ಲ... ಅವರು ತಮ್ಮ ಆ ಸಂಸಾರದಲ್ಲೂ ಕೂಡ ಖರ್ಚು ಮಾಡದೆ ಐಷಾರಾಮದಲ್ಲಿ ತಾವು ಇರಬೇಕೆಂದು ನನ್ನ ಲಗ್ನವಾದರು ಎಂದು ನನಗೆ ಕೊನೆಗೆ ಅನಿಸಹತ್ತಿತ್ತು. ಹಿಂದುಮುಂದಿನ ಯಾವುದೂ ವಿಚಾರ ಮಾಡದೆ ತಮ್ಮ ಸ್ವಾರ್ಥದೆಡೆಗೆ ಲಕ್ಷ್ಯ ಕೊಟ್ಟಿದ್ದರೆ ಹೊರತು ಬೇರೆ ಏನನ್ನೂ ಮಾಡಲಿಲ್ಲ.... 'ಗಿತೆಗೆ ದಿನಾಲು ಕುರಿಮಾಂಸ, ಕೋಳಿಮಾಂಸ, ಮೀನು, ಹಾಲು, ತುಪ್ಪ, ಬದಾಮು, ಪಿಸ್ತೆ ಬೇಕಾಗುತ್ತಿತ್ತು. ಮನುಷ್ಯನು ಬಡವನಿರಬಹುದು, ಸಾಲಗಾರನಿರಬಹುದು, ಆದರೆ ತನ್ನ ಹೊಟ್ಟೆಯ ಮಕ್ಕಳ ಬಗ್ಗೆ ಇಷ್ಟು ದುರ್ಲಕ್ಷ್ಯ ಮಾಡುವವನಿರಬಹುದೆಂಬ ಕಲ್ಪನೆ ನನಗೆ ಈ ಮೊದಲು ಸಾಧ್ಯವಾಗಿರಲಿಲ್ಲ... ಬಡತನದಲ್ಲಿ ತಂದೆತಾಯಿಗಳು ಇದ್ದುದರಲ್ಲಿ ಮೊದಲು ಮಕ್ಕಳಿಗೆ ಕೊಟ್ಟು, ಉಳಿದಿದ್ದನ್ನು ತಾವು ತಿನ್ನುವರು. ಆದರೆ ಇಲ್ಲಿ ಎಲ್ಲವೂ ವಿರುದ್ಧ ನಡೆದಿತ್ತು. ತನಗೆ ಒಳ್ಳೇ ಒಳ್ಳೇದು ಸಿಕ್ಕರೆ ಸಾಕು. ಅಲ್ಲಿ ಮಕ್ಕಳದು ಏನು ಬೇಕಾದ್ದೂ ಆಗಲಿ. ಸ್ವಂತ ಮರಿಗಳನ್ನು ತಿನ್ನುವ ಬಾವುಗ ಬೆಕ್ಕಿನಂತಹರು ಇವರು. ಅವರ ಈ ವಸ್ತುಸ್ಥಿತಿ ಹೇಗೆ ನನ್ನ ಲಕ್ಷ್ಯದಲ್ಲಿ ಬರಹತ್ತಿತೋ ಹಾಗೆ ಇವರ ಬಗ್ಗೆ ನನಗೆ ತಿರಸ್ಕಾರವುಂಟಾಗಹತ್ತಿತು'. (ಪು.50–51) ಎಂದದ್ದನ್ನು ಗಮನಿಸಬೇಕು. ನಂತರದ ದಿನಗಳಲ್ಲಿ ಗಿತೆ ಇತರ ಹೆಂಗಸರ ಜತೆಗೆ ದೈಹಿಕ ಸಂಬಂಧವಿರಿಸಿಕೊಂಡುದರ ವಿಚಾರವೂ ಶಾಂತಾಗೆ ಗೊತ್ತಾಯಿತು. ಈ ವಿಚಾರದ ಕುರಿತು ಶಾಂತ ಸೂಕ್ಷ್ಮವಾಗಿ ಹೇಳಿ ನೋಡಿದರು. ಎಷ್ಟು ಹೇಳಿದರೂ ಗಿತೆಯ ಸ್ವಭಾವದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ.

ದಾಂಪತ್ಯ ಜೀವನದಲ್ಲಿನ ನೋವನ್ನು, ಒಡಕನ್ನು ಶಾಂತ ಚಲನಚಿತ್ರದ ನಟನೆಯಲ್ಲಿ ಮರೆಯಲು ಪ್ರಯತ್ನಿಸುತ್ತಿದ್ದರು. 'ಸಿನೆಮಾದಲ್ಲಿ ಕೊಟ್ಟ ಭೂಮಿಕೆ ನಟಿಸುತ್ತಿದ್ದಾಗ ಪ್ರತ್ಯೇಕ ಜೀವನದಲ್ಲಿಯ ಭೂಮಿಕೆಯನ್ನು ಮರೆಯಲು ಸಾಧ್ಯವಾಗುತ್ತಿತ್ತು. ಆದ್ದರಿಂದಲೇ ಪರದೆಯ ಮೇಲಿನ ನನ್ನ ಭೂಮಿಕೆಯು ಜನರಿಗೆ ಸೇರುತ್ತಿತ್ತು. ಅಂತೆಯೇ ನನಗೆ ಜೀವಿಸಲು ಸಾಧ್ಯವಾಯಿತು' (ಪು.55) ಎಂದು ಯೋಚಿಸಿದ ಆಕೆ ತನ್ನ ಹಾಗೂ ಗಂಡನ ಕುರಿತು ಹೇಳುವ ಮುಂದಿನ ಮಾತುಗಳನ್ನು ಗಮನಿಸಬೇಕು 'ಎಷ್ಟು ದೋಷ ಕಂಡರೂ, ಈ ಮನುಷ್ಯ ಮನೆಯಲ್ಲಿ ಎದುರಿಗೆ ಇರುವುದು ನನಗೆ ಸೇರದೇ ಇದ್ದರೂ, ನಾನು ಇವರೊಡನೆ ಲಗ್ನವಾಗಿರಲಿಲ್ಲವೇ? ಹಣ ಗಳಿಸುವ ಹೆಣ್ಣು, ಇವಳಿಂದ ತಾವು ಐಷಾರಾಮದಿಂದ ಇರುವುದನ್ನೇ ಅವರು ಯೋಚಿಸುತ್ತಿದ್ದರು. ಆದರೆ ಇವರು ನನಗೆ ಆಧಾರ ಕೊಡುವ ಪುರುಷರೆಂದು ನಾನು ಅವರೆಡೆ ನೋಡುತ್ತಿದ್ದೆ. ನನ್ನ ಅಂದಾಜು ತಪ್ಪಿತ್ತು. ಅಪೇಕ್ಷೆಯ ಭಂಗವಾಗಿತ್ತು. ಆದರೆ ಅವರ ಅಪೇಕ್ಷೆ ಮಾತ್ರ ಪೂರ್ಣ ವಾಗಿತ್ತು.' (ಪು.56) ಪುರುಷ ಸಮಾಜದ ದೃಷ್ಟಿಕೋನವೇ ಇದು. ಹೆಣ್ಣಿನ ವ್ಯಕ್ತಿತ್ವಕ್ಕೆ, ಆಸೆ ಆಕಾಂಕ್ಷೆಗಳಿಗೆ ಯಾವ ಬೆಲೆಯೂ ಇಲ್ಲದ ಸಮಾಜ ವ್ಯವಸ್ಥೆಯ ಕುರಿತು ಗಂಭೀರವಾಗಿ ಯೋಚಿಸಿದ ಶಾಂತ 'ಮದುವೆಯ ಬಗ್ಗೆ ತಾನು ದುಡಿಕಿದೆ', 'ನನ್ನದು ದೊಡ್ಡ ತಪ್ಪಾಯಿತು' ಎಂದು ಭಾವಿಸಿ ಸ್ವತಂತ್ರಳಾಗುವ ಉದ್ದೇಶದಿಂದ ಗಿತೆಯವರಲ್ಲಿ ವಿಚ್ಛೇದನಕ್ಕೆ ಬಯಸುತ್ತಾರೆ. ಆದರೆ ಶಾಂತಾಳ ಸಂಪತ್ತಿನ ಮೇಲೆ ಕಣ್ಣಿರಿಸಿದ್ದ ಗಿತೆ ಉಪಾಯದಿಂದ ಶಾಂತಾ ಅವರಲ್ಲಿ ನಮ್ಮ ಪರಿಸ್ಥಿತಿ ಬದಲಾಗಬಹುದು, ಕೆಲವು ದಿನ

ತಡೆದುಕೋ ಎಂದು ಸೂಚಿಸುತ್ತಾರೆ. ಮುಂದಿನ ಅಪಾಯದ ಸೂಚನೆಯನ್ನರಿಯದ ಮುಗ್ಧ ಶಾಂತಾ ಗಂಡನ ಈ ಮಾತಿಗೆ ಮೌನಿಯಾಗುತ್ತಾರೆ, ಗಂಡನನ್ನು ಸಹಿಸಿಕೊಳ್ಳುತ್ತಾರೆ.

ಮುಂದಕ್ಕೆ ತಮ್ಮ ಎರಡನೇ ಮಗನ ಜನನವಾದ ಸಂದರ್ಭದಲ್ಲಿ ಚಲನಚಿತ್ರರಂಗದಲ್ಲಿ ಅಪಾರ ಯಶಸ್ಸನ್ನು ಗಳಿಸಿದ ಶಾಂತ ಪುಣೆಯಲ್ಲಿ ಬಂಗಲೆಯೊಂದನ್ನು ಕಟ್ಟಿಸ ತೊಡಗುತ್ತಾರೆ. ಮನೆ ಕಟ್ಟಿಸುವ ಜವಾಬ್ದಾರಿಯ ನೆಪದಲ್ಲಿ ಗಿತೆ ಶಾಂತಾ ಅವರಿಂದ ಅಪಾರ ಮೊತ್ತದ ಹಣವನ್ನು ದೋಚುತ್ತಾರೆ. 'ನನಗೆ ಪ್ರತಿಯೊಂದು ವಸ್ತುವಿನ ಮಾರ್ಕೆಟ್‌ನ ಬೆಲೆ ಗೊತ್ತಿರಲಿಲ್ಲ. ಗಿತೆ ಮಾತ್ರ ನನ್ನನ್ನು ಈ ಕಟ್ಟಡದ ಕೆಲಸದಲ್ಲಿ ಮೋಸಗೊಳಿಸುವ, ಹಣ ಎತ್ತಿ ಹಾಕುವ ಕುತಂತ್ರವನ್ನು ನಡಿಸೇ ಇದ್ದರು. ನನ್ನಿಂದ ತೆಗೆದುಕೊಂಡ ಹಣವನ್ನು ಅವರು ಏನು ಮಾಡುತ್ತಿದ್ದರೆಂಬುದು ನನಗೆ ಕೊನೆಗೂ ತಿಳಿಯದ ಒಗಟಾಗಿತ್ತು. ಮದ್ಯ ಸೇವನೆ, ಜೂಜಿನ ವ್ಯಸನವಿರಲಿಲ್ಲ.... ಆದರೆ ನನ್ನಿಂದ ಕಸಿದುಕೊಂಡ ಹಣ ಎಲ್ಲಿ ಹೋಯಿತು? (ಪು.73)'. ಗಂಡನ ಹಣದ ಮೇಲಿನ ವ್ಯಾಮೋಹದಿಂದ ಶಾಂತಾಗೆ ಇರುವ ಹಣ ಸಾಲದೆ ಸಾಲ ತೆಗೆದು ಬಂಗಲೆಯ ಕೆಲಸ ಮಾಡಬೇಕಾಗಿ ಬಂತು ಮಾತ್ರವಲ್ಲದೆ ಆತನ ಹಲವು ಸಾಲಗಳನ್ನೂ ತಾನು ಭರಿಸಬೇಕಾಗಿ ಬಂದುದು ಶಾಂತಾ ಅವರ ಜೀವನದ ದುರಂತ ಅಧ್ಯಾಯವೇ ಸರಿ. ಎಷ್ಟೇ ಪ್ರಯತ್ನಿಸಿದರೂ ಗಿತೆಯ ವರ್ತನೆಯಲ್ಲಿ ಯಾವ ಪರಿವರ್ತನೆಯೂ ಕಾಣಲಿಲ್ಲ. ಈ ಸಾಂಸಾರಿಕ ಜೀವನ ಶಾಂತಾ ಅವರಿಗೆ ಸಾಕಾಗಿ ಹೋಯಿತು. ಗಿತೆಯಲ್ಲಿ ಹಲವು ಬಾರಿ ವಿಚ್ಛೇದನಕ್ಕಾಗಿ ಶಾಂತ ಬೇಡಿದರೂ ಗಿತೆ ಅನೇಕ ಕಾರಣಗಳಿಂದ ಕೊಡಲು ತಯಾರಾಗಲೇ ಇಲ್ಲ.


ತಾನು ಕಟ್ಟಿಸಿದ ಬಂಗಲೆಯಲ್ಲಿ ವಾಸಮಾಡಲು ಬರುವ ಸಂದರ್ಭದಲ್ಲಿ ಸಾಲ ಸಾಕಷ್ಟಾಯಿತು. ಅದರ ಜತೆಗೆ ಶಾಂತಾ ಅವರ ವಯಸ್ಸು 30 ದಾಟಿದುದರಿಂದ ಸಿನೆಮಾದಲ್ಲೂ ಮೊದಲಿನಂತೆ ಅವಕಾಶ ಶಾಂತಾಗೆ ಸಿಗದಾಯಿತು. ಇದರಿಂದಾಗಿ ಶಾಂತಾ ಮನೆಯಲ್ಲೇ ಚಿಕ್ಕಪುಟ್ಟ ಉದ್ಯೋಗಗಳನ್ನು ಆರಂಭಿಸಬೇಕಾಗಿಬಂತು. ತಮ್ಮ ಬಂಗಲೆಯ ಕೆಲವೊಂದು ಭಾಗಗಳನ್ನು ಬಾಡಿಗೆಗೆ ಕೊಟ್ಟರು. ಕೋಳಿ ಸಾಕಿ, ಮೊಟ್ಟೆಗಳನ್ನು ಮಾರಾಟ ಮಾಡಿಸುತ್ತಿದ್ದರು. ನುಗ್ಗೆಕಾಯಿ, ನೆಲ್ಲಿಕಾಯಿ, ನಿಂಬೆ ಹಣ್ಣು, ಮಾವಿನಕಾಯಿ, ಮಾವಿನಹಣ್ಣು ಮಾರಾಟ ಮಾಡಿ ಅದರಿಂದ ಮನೆಯ ಖರ್ಚು ನಿಭಾಯಿಸುತ್ತಿದ್ದರು. ಈ ಸಂದರ್ಭದಲ್ಲೇ ತಾವು ಈಗಾಗಲೇ ಬ್ಯಾಂಕ್ ಲಾಕರ್‌ನಲ್ಲಿರಿಸಿದ್ದ ಅಪಾರ ಪ್ರಮಾಣದ ಬೆಳ್ಳಿ, ಚಿನ್ನ, ವಜ್ರದ ಒಡವೆಗಳನ್ನೂ ಗಂಡ ದೋಚಿದ್ದು ಶಾಂತಾ ಅವರ ಗಮನಕ್ಕೆ ಬಂತು. ಈ ವಿಚಾರ ಗೊತ್ತಾದಾಗ ಶಾಂತಾಗೆ ಆಘಾತವಾಗುತ್ತದೆ. 'ನನ್ನ ಕಣ್ಣು ಮುಂದೆ ಕತ್ತಲೆ ಕವಿಯಿತು. ಮನೆಯವನೇ ಕಳ್ಳನಾದ ಮೇಲೆ ಯಾರಿಗೆ ದೋಷ ಕೊಡುವುದು?' (ಪು.78) ಎನ್ನುತ್ತಾರೆ.

ತಾವು ಕಟ್ಟಿಸಿದ ಬಂಗಲೆಯಲ್ಲಿ 15 ವರ್ಷಗಳ ತನಕ ಇದ್ದ ಶಾಂತ ಆ ಬಂಗಲೆಯನ್ನೂ ತೊರೆಯಬೇಕಾಗಿ ಬಂತು. 'ಜಗತ್ತಿನಲ್ಲಿ ನನಗೆ ಇದ್ದ ಒಂದೇ ಒಂದು ವಸ್ತು ಇದು. ಇದು ನನಗೆ ಆಶ್ರಯ ಕೊಟ್ಟಿತು. ಆದರೆ ಸುಖದ ನೆರಳು ಮಾತ್ರ ಕೊಡಲಿಲ್ಲ. ಕಾಯಂ ಆಗಿ ಕಳ್ಳರ ಭೀತಿ, ಕೋರ್ಟಿನ ಗೊಂದಲ, ಸಾಲಗಾರರ ಭಯ, ಈ ಎಲ್ಲ ಭಯದಿಂದಲೇ ದಿವಸದ ಮೇಲೆ ದಿವಸ ತೆಗೆಯುತ್ತ ಬಂದೆ.... ದೋಷ ಬಂಗಲೆಯದೂ ಅಲ್ಲ, ನನ್ನದೂ ಅಲ್ಲ. ಶಕ್ಯವಿದ್ದಷ್ಟು ದಿನ ಅದರ ನೆರಳಿನಲ್ಲಿದ್ದೆ ನಾನು. ಕೊನೆಗೆ ಯಾವಾಗ ಅತೀ ಕುತ್ತಿಗೆಯ ವರೆಗೆ ಬಂತೋ ಆಗ ಆ ಮನೆ ಬಿಟ್ಟೆನು'. (ಪು.79) ಹೀಗೆ ಶಾಂತ ಬಯಸಿದ್ದು ಯಾವುದೂ ಅವರ ಕೈಸೇರಲೇ ಇಲ್ಲ.

ಶಾಂತ ಅವರ ಮೊದಲ ಮಗ ಹುಟ್ಟಿ ಕೇವಲ ಒಂದು ತಿಂಗಳಲ್ಲಿ ಮರಣ ಹೊಂದಿದುದರಿಂದ ತಮ್ಮ ಎರಡನೇ ಮಗ ಪ್ರದೀಪನ ಬಗ್ಗೆ ಅಪಾರ ನಂಬಿಕೆಯನ್ನಿರಿಸಿಕೊಂಡಿದ್ದರು. ಆದರೆ ಈ ಮಗನೂ ಅವರ ನಂಬಿಕೆಗೆ ಮುಳ್ಳಾದ. ತನ್ನ ಗಂಡನ ಸ್ವಭಾವವನ್ನೇ ಮಗನೂ ತೋರಿಸತೊಡಗಿದಾಗ ಶಾಂತಾರಿಗೆ ಆಘಾತದ ಮೇಲೆ ಆಘಾತವೇ ಆಯಿತು. 'ಪ್ರದೀಪನು ಮಾತ್ರ ಎಲ್ಲ ರೀತಿಯಿಂದ ತಂದೆಯ ವಾರಸುದಾರನೆನಿಸಿಕೊಂಡನು. ಈ ತರಹದ ಬೇಜವಾಬದಾರ, ನಾಚಿಕೆಗೆಟ್ಟ, ಕೂತು ತಿನ್ನುವ ಮಗನನ್ನು ದೇವರೇ, ಶತ್ರುಗಳಿಗೆ ಕೂಡ ಕೊಡಬೇಡ. ಒಮ್ಮೊಮ್ಮೆ ಮಕ್ಕಳಿಲ್ಲದ ಕೊರಗು ಕೂಡ ಒಳ್ಳೇದು ಇಂತಹ ಮಕ್ಕಳಿಗಿಂತ.... ಗಿತೆಯ ನಡತೆಯ ಆದರ್ಶವು ಆತನು ಚಿಕ್ಕವನಿದ್ದಾಗಿನಿಂದ ಅವನ ಎದುರು ಇತ್ತು. ನಾನೂ ಸಹ ಗಿತೆಯ ನಡತೆಯಿಂದ ಬೇಸತ್ತಿದ್ದೆ. ದಿನವೂ ನಮ್ಮಲ್ಲಿ ಜಗಳವಾಗುತ್ತಿತ್ತು. ಪತಿಯ ರೂಪದಲ್ಲಿ ಇಂತಹ ಚೋರ, ದರೋಡೆಕೋರನು ಮನೆಯಲ್ಲಿ ಹೊಕ್ಕದ್ದರಿಂದ ನಾನಾದರೂ ಏನು ಮಾಡಬೇಕು?.... ನನ್ನ ಕಷ್ಟದ ಗಳಿಕೆಯ ಮೇಲೆ ತಂದೆಯು ಕೂತು ತಿನ್ನುತ್ತಿದ್ದಾನೆಂದು, ಅದರಂತೆ ತಾನೂ ನನ್ನ ಜೀವ ಹಿಂಡಬೇಕೆಂದು ಅವನಗೆ ಅನಿಸುತ್ತಿತ್ತು. ಸುಮಾರ ಬುದ್ಧಿ ಹಾಗೂ ಕೂತು ತಿನ್ನುವ ಇಂತಹ ಮಗನಿಂದ ನನಗೆ ಸುಖ ಹೇಗೆ ಸಿಗಬೇಕು?' (ಪು.82) ಎಂದು ಯೋಚಿಸಿದ ಶಾಂತ ತಾನು ಇನ್ನು ಸುಮ್ಮನೆ ಕುಳಿತರೆ ಅಪಾಯವೆಂದು ತೀರ್ಮಾನಿಸಿ ಗಿತೆಯಿಂದ ದೂರ ಸರಿಯುವ ಪ್ರಯತ್ನವನ್ನು ಮಾಡುತ್ತಾರೆ. ಮುಂಬೈಯಲ್ಲಿ ಕೆಲಸ ದೊರಕಿಸಿಕೊಂಡ ಶಾಂತ ಮಗನನ್ನು ಹಾಸ್ಟೆಲ್‌ಗೆ ಸೇರಿಸಿ ಗಿತೆಯನ್ನು ತೊರೆದು ಮುಂಬೈ ಸೇರುತ್ತಾರೆ. ಮುಂಬೈಯಲ್ಲಿ ಚಲನಚಿತ್ರಕ್ಕೆ ಅವಕಾಶಗಳು ಕಡಿಮೆಯಾದಾಗ ತಾನು ಕಲಿತ ಸಂಗೀತವನ್ನೇ ತನ್ನ ಬಂಡವಾಳವಾಗಿಸಿಕೊಂಡು ಸಂಗೀತ ಕಾರ್ಯಕ್ರಮಗಳನ್ನು ಕೊಡಲು, ಮರಾಠಿ ನಾಟಕಗಳಲ್ಲಿ ಪಾತ್ರವಹಿಸತೊಡಗುತ್ತಾರೆ. ಆದರೆ ಕೈಯಲ್ಲಿ ಹಣ ಬಂದೊಡನೆ ಗಿತೆಯು ಯಾರಾದರೂ ಸಾಲಗಾರರನ್ನು ತಂದು ನಿಲ್ಲಿಸುತ್ತಿದ್ದರು. ಆಗ ಪುನಃ ಶಾಂತಾರ ಕೈ ಬರಿದಾಗುತ್ತಿತ್ತು. ಗಿತೆಯನ್ನು ತೊರೆದು ಬಂದರೂ ಗಿತೆಯ ಕಾಟ ಶಾಂತಾಗೆ ತಪ್ಪದಿರುವುದನ್ನು ಇಲ್ಲಿ ಗಮನಿಸಬಹುದು.

ಸಂಗೀತ, ನಾಟಕಗಳ ದ್ವಾರ ಬಂದಾಗಲು ಮುಂದೇನು ಮಾಡುವ ಎನ್ನುವ ಪ್ರಶ್ನೆ ಶಾಂತ ಅವರಲ್ಲಿ ಪುನಃ ಎದ್ದು ನಿಂತಿತು. ಜೀವನದ ಕ್ಷಣ ಕ್ಷಣದಲ್ಲಿಯೂ ಶಾಂತಾಗೆ ಗಂಡ ಮತ್ತು ಮಗನ ಬಗ್ಗೆ ನೋವೇ ತುಂಬಿಕೊಂಡಿರುವುದನ್ನು ಅವರ ಆತ್ಮಕಥೆಯ ಹಲವೆಡೆಗಳಲ್ಲಿ ಗುರುತಿಸಿಕೊಳ್ಳಬಹುದು. 'ಅಭಿನಯ, ಕಂಠದಿಂದ ಎಷ್ಟು ಶಕ್ಯವಿತ್ತೋ ಅಷ್ಟು ನಾನು ಗಳಿಸಿದೆ. ಆದರೆ ಪತಿಯ ಉಚ್ಚಾಗಿರಿಯಿಂದ, ಮುಪ್ಪಿನ ಕಾಲದ ಸಲುವಾಗಿ ಏನನ್ನೂ ಗಳಿಸಿಡಲಿಲ್ಲ. ಕೈಕಾಲು ಸೋತು ಕೆಲಸ ಸಿಗದಂತಾಗಲು ಒಲೆ ಹೊತ್ತಿಸುವುದು ಹೇಗೆ?.... ಹೊಟ್ಟೆಯ ಮಗನು, ತನಗೆ ಸುಖ ಸಮಾಧಾನ ಕೊಡಬೇಕು, ವೃದ್ಧಾಪ್ಯದಲ್ಲಿ ವಿಶ್ರಾಂತಿ ಕೊಡಬೇಕೆಂದು ಪ್ರತಿಯೊಬ್ಬ ತಾಯಿಯ ಅಪೇಕ್ಷೆ ಇರುತ್ತದೆ. ...ಆದರೆ ನಶೀಬದಲ್ಲಿ ಬೇರೆ ಬರೆದಿತ್ತು. ಪ್ರದೀಪನು ಸ್ವಾರ್ಥಿ, ಸೋಮಾರಿ ಯಾದನು. ಶಾಲೆ ಬಿಟ್ಟು ಪುಣೆಯಿಂದ ಮುಂಬೈಗೆ ಓಡಿ ಬಂದನು'. (ಪು.86)

(20ನೇ ಪುಟಕ್ಕೆ)



ಲಿಂಗ ಮತ್ತು ಜಾತಿ; ಅಂಬೇಡ್ಕರ್ ದೃಷ್ಟಿಕೋನ

■ ಡಾ. ಈ. ಯರ್ರಿಸ್ವಾಮಿ

ಭಾರತದಲ್ಲಿ ಮಹಿಳೆ ಮತ್ತು ಜಾತಿ ಅಸಮಾನತೆಯ ವಿಷಯಗಳು ಬ್ರಿಟಿಷ್ ಶಿಕ್ಷಣದಿಂದ ಹೊಸ ತಿಳುವಳಿಕೆಯಲ್ಲಿ ಪ್ರಸ್ತುತಗೊಂಡವು. ಹಾಗಾಗಿ ಬಾಲ್ಯವಿವಾಹ, ಸತಿ, ವಿಧವೆ ಮತ್ತು ಅಸ್ಪೃಶ್ಯರ ಸ್ಥಿತಿಗತಿಯಂತಹ ಅನೇಕ ಸಂಗತಿಗಳು ಭಾರತೀಯ ಸಾಮಾಜಿಕ ಸಮಸ್ಯೆಗಳು ಅಂತ ಪರಿಗಣಿತವಾದವು. ನಂತರ ಇವು ರಾಷ್ಟ್ರೀಯ ಚಳವಳಿಯೊಂದಿಗೆ ತಳುಕುಹಾಕಿಕೊಂಡವು. ಅಲ್ಲದೆ, ಸ್ವತಂತ್ರ ಭಾರತದ ಸಂವಿಧಾನದಲ್ಲಿ ಅದರ ಪರಿಹಾರ ಕ್ರಮಗಳು ಸೇರ್ಪಡೆಗೊಂಡವು. ಈ ಕುರಿತು ವಸಾಹತು ಸಂದರ್ಭ ಚಿಂತನಾಕ್ರಮಗಳಿಗಿಂತ ಭಿನ್ನವಾಗಿ ಅಂಬೇಡ್ಕರ್ ಈ ದೃಷ್ಟಿಕೋನಗಳಿಗೆ ಪರ್ಯಾಯವಾದ ದೃಷ್ಟಿಕೋನವನ್ನು ಪ್ರಸ್ತುತಪಡಿಸುತ್ತಾರೆ. ಅಂದರೆ ಆಗ ಮಹಿಳೆಯ ವಿಷಯಗಳನ್ನು ಜಾತಿ ಒಳಗೆ ಜಾತಿಯೊಂದಿಗೆ ತಳುಕುಹಾಕದೆ ಗ್ರಹಿಸುತ್ತಿದ್ದ ದೃಷ್ಟಿಕೋನಗಳಿದ್ದವು. ಅದಕ್ಕೆ ಪರ್ಯಾಯವಾಗಿ ಅಂಬೇಡ್ಕರ್ ಲಿಂಗ, ಜಾತಿಯಲ್ಲಿ ಶ್ರೇಣೀಕರಣ ಉಳಿಸಿಕೊಂಡಿರುವ ವಿವಾಹ ಒಂದು ಪ್ರಕಾರವಾದ ಸ್ವಜಾತಿ ವಿವಾಹದೊಳಗೆ ಮಹಿಳಾ ವಿಷಯಗಳನ್ನು ಗ್ರಹಿಸಿದರು. ಈ ಎಲ್ಲಾ ಸಂಗತಿಗಳೇ ಅಧ್ಯಯನ ವಸ್ತುವಾಗಿವೆ. ಆದ್ದರಿಂದ ಲಿಂಗ, ಜಾತಿಯಾಧಾರಿತ ಶ್ರೇಣೀಕರಣದ ಚಿಂತನಾ ಕ್ರಮದಲ್ಲಿ ಅಂಬೇಡ್ಕರ್ ಧೋರಣೆಗಳನ್ನು ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

ಜಾತಿ ಪ್ರಶ್ನೆಗಳ ಹಿನ್ನೆಲೆಯಲ್ಲಿ ಸ್ತ್ರೀ ಸುಧಾರಣೆ ಆಲೋಚನೆ ಪ್ರಸ್ತುತ ಪಡಿಸಿದ್ದು ಅಂಬೇಡ್ಕರ್ ವಿಧಾನ. ಅಂದರೆ ಮಹಿಳೆ ಮತ್ತು ಜಾತಿಯನ್ನು ವಿವಾಹದೊಳಗೆ ಸಂಯೋಜಿಸುವ ಅಂಬೇಡ್ಕರ್ ಕ್ರಮ ತುಂಬಾ ವಿಭಿನ್ನವಾದುದು. ವಸಾಹತು ಸಂದರ್ಭಗಳಲ್ಲಿ ಲಿಂಗ ಮತ್ತು ಜಾತಿ ವಿಷಯ ಸಂಬಂಧಿ ಚರ್ಚೆಗಳು ಹೆಚ್ಚು ಮಹತ್ವ ಪಡೆಯುತ್ತಿದ್ದವು. ಆಗ ಅಂಬೇಡ್ಕರ್ ಅಸ್ಪೃಶ್ಯರ ನೋವುಗಳನ್ನು ಅನುಭವಿಸಿದರು. ಈ ಹಿನ್ನೆಲೆಯಲ್ಲಿ ಅವರು ಜಾತಿಯ ಎಲ್ಲಾ ಮುಖಗಳನ್ನು ತರ್ಕಬದ್ಧವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. 'ತರ್ಕಬದ್ಧ' ಎಂಬುದನ್ನ ಕಾರ್ಯಕಾರಣ ಸಂಬಂಧ ಎಂದು ಭಾವಿಸಲಾಗಿದೆ. ಆದ್ದರಿಂದ ಅಂಬೇಡ್ಕರ್ ಜಾತಿಪದ್ಧತಿಯ ವಿರುದ್ಧ ರಾಜಕೀಯ ಹೋರಾಟವನ್ನೆ ರೂಪಿಸತೊಡಗಿದರು. ಈ ಕಾರಣದಿಂದಾಗಿಯೇ ಅವರು ಅದಕ್ಕೊಂದು ತಾತ್ವಿಕತೆಯನ್ನು ನಿರ್ಮಿಸಿಕೊಳ್ಳುವುದರಲ್ಲಿ ಕೂಡ ಹೆಚ್ಚು ಆಸಕ್ತರಾದರು. ಹಾಗಾಗಿ ಅವರು ಉಳಿದವರಿಗಿಂತ ಹೆಚ್ಚು ಗಂಭೀರವಾಗಿ ಜಾತಿಪದ್ಧತಿಯ ಉಗಮ ಬೆಳವಣಿಗೆಗಳ ಕುರಿತು ಚರ್ಚಿಸುತ್ತಾರೆ.

ಮಹಿಳೆ ಮತ್ತು ಜಾತಿ ಸಂಬಂಧದಲ್ಲಿ ಅವರು 'ಭಾರತದಲ್ಲಿ ಜಾತಿಗಳು' ಎನ್ನುವ ಪ್ರಬಂಧ ಗಮನಾರ್ಹವಾದುದು. ಇದನ್ನು ಅವರು 1916ರ ಮೇ 9ರಂದು ಅಮೆರಿಕೆಯ ನ್ಯೂಯಾರ್ಕ್‌ನ ಕೊಲಂಬಿಯ ವಿಶ್ವವಿದ್ಯಾಲಯದಲ್ಲಿ ನಡೆದ ಡಾ. ಎ.ಎ. ಗೋಲ್ಡನ್ ಮೇಜರ್ ಸ್ಮರಣಾರ್ಥಕ ಮಾನವಕುಲಶಾಸ್ತ್ರ ವಿಚಾರ ಸಂಕಿರಣದಲ್ಲಿ ಮಂಡಿಸಿದ್ದಾರೆ. ಅದರಲ್ಲಿ ಅವರು ಪಾಶ್ಚಾತ್ಯ ವಿದ್ವಾಂಸರಾದ ಸೇನಾರ್ಟ್, ನೆಸ್‌ಫೀಲ್ಡ್, ಸರ್ ರಿಸ್ಲೆಯವರ ಹಾಗೂ ದೇಶಿ ಚಿಂತಕರಾದ ಡಾ.ಕೇತ್ಕರ್‌ರವರ ಜಾತಿಯ ವ್ಯಾಖ್ಯೆ ಮತ್ತು ಅದರ ಲಕ್ಷಣಗಳನ್ನು ವಿಮರ್ಶಾತ್ಮಕವಾಗಿ ವಿವರಿಸುತ್ತಾರೆ. ಅಂದರೆ ಅಂಬೇಡ್ಕರ್ ಯಾವ ಸ್ತ್ರೀವಾದಿಯು, ಸಮಾಜ ಅಧ್ಯಯನಕಾರು ಪ್ರವೇಶಿಸದ ಹೊಸ ದಾರಿಯಲ್ಲಿ ಮಾನವಶಾಸ್ತ್ರ ಅಧ್ಯಯನ ವಿಧಾನಗಳ ಮೂಲಕ ವಿಷಯವನ್ನು ಪ್ರವೇಶಿಸುತ್ತಾರೆ. ಈ ಮೂಲಕವೇ ಅವರು 'ಜಾತಿಪದ್ಧತಿ' ಎಂದರೇನು ಎಂಬುದನ್ನು ವ್ಯಾಖ್ಯಾನಿಸಲು ಪ್ರಯತ್ನಿಸುತ್ತಾರೆ. ಹಾಗೆ ವ್ಯಾಖ್ಯಾನಿಸುವಾಗ ಅಂಬೇಡ್ಕರ್ ಪ್ರಾಥಮಿಕವಾಗಿಯೇ ಜಾತಿಪದ್ಧತಿಯುನ್ನು ಹೊರಗಿನದೆಂದು ತೋರಿಸುತ್ತಾರೆ. ಈ ಮೂಲಕ ಭಾರತದ ಬಗೆಗಿನ ಪಾಶ್ಚಾತ್ಯರ ಟೀಕೆಗಳಿಗೆ ಉತ್ತರಿಸುತ್ತಾರೆ.

ಅಂಬೇಡ್ಕರ್ ಜಾತಿಪದ್ಧತಿಯ ಕುರಿತು ಚಾರಿತ್ರಿಕ ನೋಟವು ಇದನ್ನು ಪುಷ್ಟೀಕರಿಸುತ್ತದೆ. "ಭಾರತದ ಸಮಾಜಕ್ಕಿಂತ ಮಿಗಿಲಾಗಿ ಇಂದಿನ ಯಾವ ನಾಗರಿಕ ಸಮಾಜವು ಪ್ರಾಚೀನ ಕಾಲದ ಪಳೆಯುಳಿಕೆಗಳನ್ನು ತೋರಿಸಲಾರದೆಂದು, ಭಾರತದ ಧರ್ಮವು ಮೂಲಭೂತವಾಗಿ ಪುರಾತನವಾದುದು, ಕಾಲ ಮತ್ತು ನಾಗರಿಕತೆಯಲ್ಲಿ ಪ್ರಗತಿಯಾಗಿದ್ದು ಅದರ ನಿಯಮಗಳು ತನ್ನೆಲ್ಲ ಪೌರೋಹಿತ್ಯ ಬಲದೊಂದಿಗೆ ಇಂದಿಗೂ ಜಾರಿಯಲ್ಲಿವೆ. ಅಂತಹ ಪುರಾತನ ಪಳೆಯುಳಿಕೆಗಳಲ್ಲಿ ಜಗತ್ತಿನ ವಿವಿಧ ಸಮಾಜದ ಭಿನ್ನ ಗೋತ್ರ ವಿವಾಹ ಪದ್ಧತಿ ಒಂದಾಗಿದ್ದು, ಚರಿತ್ರೆಯ ಬೆಳವಣಿಗೆಯೊಂದಿಗೆ ಭಿನ್ನ ಗೋತ್ರ ವಿವಾಹವು ತನ್ನ ಪ್ರಭಾವವನ್ನು

ಕಳೆದುಕೊಂಡಿದೆ. ಆದರೆ ಭಾರತೀಯರ ವಿಚಾರದಲ್ಲಿ ಭಿನ್ನ ಗೋತ್ರ ನಿಯಮವು ಇಂದಿಗೂ ಸ್ಪಷ್ಟವಾದ ಕಟ್ಟಳೆಯಾಗಿದೆ. ಈ ಬಣ ಭಿನ್ನಗೋತ್ರ ವಿವಾಹ ನಿಯಮದ ಸುತ್ತ ಕೇಂದ್ರೀಕೃತವಾಗಿರುವ ಮದುವೆ ನಿಯಮದಲ್ಲಿ ಇದನ್ನು ಸುಲಭವಾಗಿ ನೋಡಬಹುದು. ಏಕೆಂದರೆ ಸಪಿಂಡರು (ರಕ್ತಬಂಧುಗಳು) ಮದುವೆಯಾಗಬಾರದೆಂದಲ್ಲ. ಆದರೆ ಸ್ವಗೋತ್ರರ (ಅದೇ ಗುಂಪಿನ) ನಡುವಣ ಒಂದು ಮದುವೆಯನ್ನು ಕೂಡ ಅಪವಿತ್ರವೆಂದು ಪರಿಗಣಿಸಲಾಗಿದೆ ಎನ್ನುತ್ತಾರೆ."*[1] ಈ ಮೂಲಕ ಅವರು ಸ್ವಜಾತಿ ವಿವಾಹವು ಭಾರತೀಯರಿಗೆ ಹೊರಗಿನದೆಂದು ಸಾಬೀತುಪಡಿಸುತ್ತಾರೆ. ಆದ್ದರಿಂದಲೇ ಭಾರತದ ಬೇರೆ ಬೇರೆ ಮದುವೆಗಳು ಭಿನ್ನಗೋತ್ರ ವಿವಾಹ ಪದ್ಧತಿಯವೇ ಆಗಿವೆ. ಕುಲದೇವತಾರಾಧನಾ ಸಂಸ್ಥೆಗಳಲ್ಲಿರುವ ಇತರ ಗುಂಪುಗಳು ಹೀಗೆಯೇ ಇವೆ. ಹಾಗಾಗಿ ಭಾರತೀಯ ಭಿನ್ನಗೋತ್ರ ವಿವಾಹವನ್ನು ಯಾರು ಉಲ್ಲಂಘಿಸುವ ಧೈರ್ಯ ತೋರದ ಒಂದು ನಂಬಿಕೆಯಾಗಿದೆ.

ಆದ್ದರಿಂದ ಜಾತಿಗಳ ಒಳಗೆ ಸ್ವಜಾತಿ ವಿವಾಹವು ಇದ್ದರೂ ಕೂಡ ಭಿನ್ನಗೋತ್ರ ವಿವಾಹವನ್ನು ಕಟ್ಟುನಿಟ್ಟಾಗಿ ಪರಿಪಾಲಿಸಲಾಗುತ್ತದೆ. ಭಿನ್ನಗೋತ್ರ ವಿವಾಹ ನಿಯಮವನ್ನು ಮೀರಿದವರಿಗಿಂತ ಕಠಿಣತರವಾದ ದಂಡವನ್ನು ಸ್ವಜಾತಿ ವಿವಾಹವ ನಿಯಮವನ್ನು ಮೀರಿದವರಿಗೆ ವಿಧಿಸಲಾಗುವುದು. ಹಾಗಾಗಿ, ಭಿನ್ನಗೋತ್ರ ವಿವಾಹ ಪದ್ಧತಿಯೇ ನಿಯಮವಾಗಿದ್ದು, ಇದರಲ್ಲಿ ಜಾತಿ ಪ್ರಶ್ನೆ ಇರುವುದಿಲ್ಲ. ಏಕೆಂದರೆ ಭಿನ್ನಗೋತ್ರ ವಿವಾಹವೆಂದರೆ ಐಕ್ಯವೆಂದರ್ಥ. ಆದರೆ ನಮ್ಮಲ್ಲಿ ಜಾತಿಗಳಿವೆ. ಅದರ ಪರಿಣಾಮ ಭಾರತ ಕುರಿತಂತೆ "ಜಾತಿಗಳ ಸೃಷ್ಟಿಯೆಂದರೆ ಭಿನ್ನಗೋತ್ರದ ವಿವಾಹದ ಮೇಲೆ ಸ್ವಜಾತಿ ವಿವಾಹದ ಅಧಿಕ ಸ್ಥಾನವೆಂದು"*[2] ಅಂತಿಮವಾಗಿ ಅಂಬೇಡ್ಕರ್ ವಿಶ್ಲೇಷಿಸುತ್ತಾರೆ.

ಜಾತಿ ಪ್ರಶ್ನೆಯನ್ನು ವಿವಾಹದೊಂದಿಗೆ ತಳುಕುಹಾಕಿ ವಿವರಿಸುತ್ತಾರೆ. ವಿವಾಹ ಸಂಸ್ಥೆಯು ಪಿತೃಪ್ರಧಾನತೆಯ ಮೂಲಭೂತ ಘಟಕ ಆಗಿದೆ. ಈ ವಿವಾಹ ಸಂಸ್ಥೆಯ ಮೂಲಕವೇ ಜಾತಿ ಮತ್ತು ಲಿಂಗದ ಪ್ರಶ್ನೆಗಳನ್ನು ಒಟ್ಟಿಗೆ ತರಲು ಪ್ರಯತ್ನಿಸುತ್ತಾರೆ.

ಅಂಬೇಡ್ಕರ್ ಜಾತಿಪದ್ಧತಿಯನ್ನು ಪವಿತ್ರ-ಅಪವಿತ್ರ ಕಲ್ಪನೆ ಯಿಂದಲೂ ಹಿಂದಿನ ಹಂತದಿಂದ ಗ್ರಹಿಸಲು ಯತ್ನಿಸುತ್ತಾರೆ. ಅವರ ಪ್ರಕಾರ 'ಪಾವಿತ್ರ್ಯದ ಕಲ್ಪನೆ ಜಾತಿಯ ಧಾರ್ಮಿಕ ಮುಖವನ್ನು ಮಾತ್ರ ತೋರಿಸುತ್ತದೆ. ಇದು ಶ್ರೇಣೀಕರಣದಲ್ಲಿ ಬ್ರಾಹ್ಮಣ ಜಾತಿಯನ್ನು ಮೊದಲ ಸ್ಥಾನದಲ್ಲಿರಿಸುವ ಸಂದರ್ಭದಲ್ಲಿ ಕಂಡುಬರುವುದು. ಹಾಗಾಗಿ ಪಾವಿತ್ರ್ಯದ ಕಲ್ಪನೆಯು ಜಾತಿಯ ಒಂದು ವೈಶಿಷ್ಟ್ಯವಾಗಿರುವುದು. ಜಾತಿಯನ್ನು ವ್ಯಾಖ್ಯಾನಿಸಿಕೊಳ್ಳುವ ಹಂತದಲ್ಲಿ ಪಾವಿತ್ರ್ಯದ ಕಲ್ಪನೆ ಕೇವಲ ಅನುಷಂಗಿಕವಾದುದು, ಇದು ನೇರವಾಗಿ ವಿವಾಹಕ್ಕೆ ಸಂಬಂಧಿಸಿದ್ದು. ಜಾತಿಪದ್ಧತಿ ಕುರಿತು ಅಂಬೇಡ್ಕರ್ ಹೀಗೆ ಹೇಳುತ್ತಾರೆ "ಜಾತಿಯ ಏಕೈಕ ಸಾರವೆಂದು ಕರೆಯಬಹುದಾಗಿದ್ದು ಪ್ರತಿಬಂಧನೆ ಅಥವಾ ಅಂತರಜಾತೀಯ ವಿವಾಹವಿಲ್ಲದಿರುವಿಕೆಯೊಂದೇ. ಇದನ್ನು ಇನ್ನು ಸಂಕ್ಷಿಪ್ತವಾಗಿ ಸ್ವಜಾತಿ ವಿವಾಹವೊಂದೇ ಎನ್ನುತ್ತಾರೆ"*[3] ಆದರೆ ಇದನ್ನು ಮಾನವಕುಲಶಾಸ್ತ್ರದಿಂದ ಕೆಲವರು ನಿರಾಕರಿಸಬಹುದು. ಏಕೆಂದರೆ ಜಾತಿ ಸಮಸ್ಯೆ ಹುಟ್ಟಲು ಅವಕಾಶ ಕೊಡದಂತಹ ಸ್ವಜಾತಿ ವಿವಾಹವಿರುವ ಗುಂಪುಗಳು ಇವೆ. ಸಾಮಾನ್ಯ ರೀತಿಯಲ್ಲಿ ಇದು ಸರಿಯಿರಬಹುದು. ಸಾಂಸ್ಕೃತಿಕವಾಗಿ ಭಿನ್ನವಾದ ಸ್ವಜಾತಿ ವಿವಾಹ ಸಮಾಜಗಳು ಹೆಚ್ಚು ಕಡಿಮೆ ಬೇರೆ ಬೇರೆಯಾದ ಸ್ಥಳಗಳಲ್ಲಿ ತಮ್ಮ ವಾಸದ ನೆಲೆಗಳನ್ನು ಹೊಂದಿದ್ದು ಅವರಲ್ಲಿ ಪರಸ್ಪರ ವ್ಯವಹಾರ ಅಗತ್ಯವಿಲ್ಲ ಎಂಬುದು ವಾಸ್ತವ ಸತ್ಯ. ಈ ಹೇಳಿಕೆಯನ್ನು ಪುಷ್ಟೀಕರ ವಾಗಿಸಲು ಸಂಯುಕ್ತ ಸಂಸ್ಥಾನಗಳಲ್ಲಿರುವ ಅಮೇರಿಕ ಇಂಡಿಯನ್ಸ್ ಎಂಬ ಹೆಸರಿನಿಂದ ಕರೆಯಲಾಗುವ "ನೀಗ್ರೋಗಳು, ಬಿಳಿಯರು ಮತ್ತು ವಿವಿಧ ಆದಿವಾಸಿ ಗುಂಪುಗಳನ್ನು ನಿದರ್ಶನಗಳಾಗಿ ನೀಡುವುದನ್ನು ಪ್ರಸ್ತಾಪಿಸುವ ಅಂಬೇಡ್ಕರ್ ಭಾರತದ ಸಂದರ್ಭ ಬೇರೆ ಎಂದು ವಾದಿಸುತ್ತಾರೆ. ಅಂದರೆ ಭಾರತದ ಜನರು ಒಟ್ಟಾರೆಯಾಗಿ ಒಂದೇ ಬಗೆಯವರು ನಿರ್ದಿಷ್ಟ ವಲಯಗಳನ್ನು ಹೊಂದಿರುವ ಭಾರತದ ವಿವಿಧ ಜನಾಂಗಗಳು ಬಹುಮಟ್ಟಿಗೆ ಒಬ್ಬರೊಡನೆ ಒಬ್ಬರು ಮಿಳಿತ ವಾಗಿದ್ದಾರೆ. ಸಾಂಸ್ಕೃತಿಕ ಏಕತೆಯನ್ನು ಪಡೆದಿದ್ದಾರೆ. ಇದೊಂದೇ ಸಮರೂಪ ಜನಾಂಗದ ಒರೆಗಲ್ಲು. ಈ ಸಮರೂಪತೆಯನ್ನು ಆಧರಿಸುವಾಗ ಸ್ವಜಾತಿ ವಿವಾಹ ಸಮಾಜ ಅಥವಾ ಆದಿವಾಸಿ ಗುಂಪುಗಳ ಹತ್ತಿರದ ರಕ್ತ ಸಂಬಂಧ ಮಾತ್ರದಿಂದ ರಚಿತವಾದ ಸಂದರ್ಭದಲ್ಲಿ ಸಂಪೂರ್ಣವಾಗಿ ಕಾಣದ ಜಾತಿಯ ಒಂದು ಹೊಸ ಸ್ವರೂಪದ ಸಮಸ್ಯೆಯಾಗುತ್ತದೆ."*[4]

ಹಾಗಾಗಿ ಭಾರತದಲ್ಲಿ ಜಾತಿಯೆಂದರೆ ಸ್ವಜಾತಿ ವಿವಾಹ ಪದ್ಧತಿಯ ಮೂಲಕ ಒಂದು ಇನ್ನೊಂದರೊಡನೆ ಸಮ್ಮಿಳಿತವಾಗದಂತೆ ತಡೆಯುತ್ತದೆ ಎಂದು ವಾದಿಸುತ್ತಾರೆ.

ಹೀಗೆ ಅಂಬೇಡ್ಕರ್ ಜಾತಿ ಪದ್ಧತಿಯ ವ್ಯಾಖ್ಯಾನವನ್ನು ವಿವಾಹ ಸಂಸ್ಥೆಯೊಂದಿಗೆ ಜೋಡಿಸಿದ್ದು, ಭಾರತದ ವಿವಾಹ ಸಂಸ್ಥೆಯು ಜಾತಿಯ ಚೌಕಟ್ಟಿನೊಳಗೆ ಅಸ್ತಿತ್ವ ಪಡೆದಿರುವುದು. ಜಾತಿ ಮತ್ತು ಪಿತೃಪ್ರಧಾನತೆಯ ಕೇಂದ್ರ ವಿವಾಹ ಸಂಸ್ಥೆಯಾಗಿರುವುದು. ಜಾತಿ ಮತ್ತು ಲಿಂಗದ ಪ್ರಶ್ನೆಯನ್ನು ಒಗ್ಗೂಡಿಸುವ ಅಗತ್ಯವನ್ನು ಪ್ರತಿಪಾದಿಸುತ್ತದೆ. ಸ್ವಜಾತಿ ವಿವಾಹದ ಮೂಲಕ ಸ್ತ್ರೀಯ ಲೈಂಗಿಕತೆಯ ಮೇಲಿನ ಹಕ್ಕನ್ನು ಜಾತಿಗಳಿಗೆ ವಹಿಸಿಕೊಡುವುದು ಜಾತಿಯೊಳಗಿಂದಲೇ ಹೆಣ್ಣಿನ ಮೇಲಿನ ಪುರುಷ ಅಧಿಕಾರವನ್ನು ಬಲಪಡಿಸುತ್ತದೆ. ಈ ಪುರುಷಾಧಿಕಾರವು ಜಾತಿಪದ್ಧತಿ ಯನ್ನು ಮುಂದುವರೆಸುತ್ತದೆ. ಇದು ಜಾತಿಪದ್ಧತಿಯ ನಿಜವಾದ ನೆಲೆ. ಜಾತಿಯೊಂದಿಗೆ ವಿಧವಾ, ಸತಿ, ಬಾಲ್ಯವಿವಾಹ ಮುಂತಾದ ಆಚರಣೆಗಳು ರೂಢಿಗೆ ಬರುತ್ತವೆ. ಪಾವಿತ್ರ್ಯದ ಕಲ್ಪನೆ ಬಲಗೊಳ್ಳುತ್ತದೆ. ಹೆಣ್ಣಿನ ಪಾವಿತ್ರ್ಯ ಹಾಗೂ ಜಾತಿಯ ಪಾವಿತ್ರ್ಯಗಳು ಒಂದಾಗುತ್ತವೆ. ಈ ಪಾವಿತ್ರ್ಯ ನಾಶಕ್ಕೆ ಶಿಕ್ಷೆಗಳು ಕಠಿಣಗೊಳ್ಳುತ್ತವೆ. ಇದನ್ನು ಒಂದು ಕಾಲ್ಪನಿಕ ಗುಂಪಿನ ಮೂಲಕ ಸ್ವಜಾತಿ ವಿವಾಹ ಜಾರಿಗೊಳಿಸುವ ವಿಧಾನಗಳನ್ನು ಪರಿಶೀಲಿಸುತ್ತಾರೆ.

"ಒಂದು ಗುಂಪು ತನ್ನ ಜಾತಿಯಲ್ಲೇ ಮದುವೆ ಮಾಡಿಕೊಳ್ಳಲು ಇಚ್ಛಿಸಿದರೆ ಹೊರಗಿನ ಗುಂಪುಗಳೊಂದಿಗೆ ಅಂತರ್ಜಾತಿಯ ಮದುವೆ ಮಾಡಿಕೊಳ್ಳುವುದರ ವಿರುದ್ಧ ಹೇರುವ ಔಪಚಾರಿಕ ನಿಷೇಧ ಅಷ್ಟೊಂದು ಫಲಕಾರಿಯಾಗಲು ಸಾಧ್ಯವಿಲ್ಲ. ಹಾಗಾಗಿ ಎಲ್ಲ ಗುಂಪುಗಳು ಕಲೆಯದಂತೆ ಒಂದು ಗೆರೆಯೆಳೆದು ಆ ವೃತ್ತದಿಂದ ಆಚೆಗೆ ಜನರು ಮದುವೆ ಒಪ್ಪಂದಗಳನ್ನು ಮಾಡಕೂಡದೆಂದು ಹದ್ದಿನಲ್ಲಿಡುವುದು ಅನಿವಾರ್ಯವಾಗಿದೆ."*[5]

ಆಗ ಹೊರಗಿನವರೊಂದಿಗೆ ಮದುವೆಗಳನ್ನು ತಡೆಹಿಡಿಯುವ ಆ ಗೆರೆಯು ಗುಂಪಿನೊಳಗೆ ಸಮಸ್ಯೆಗಳನ್ನು ಹುಟ್ಟಿಸುತ್ತದೆ. ಅವುಗಳನ್ನು ಪರಿಹರಿಸುವುದು ಸುಲಭದ ಮಾತಲ್ಲ. ಈ ಸಮಸ್ಯೆಗಳನ್ನು ಸಂಕ್ಷೇಪಿಸಿ ಹೇಳುವುದಾದರೆ ರೂಢಿಯ ಒಂದು ಗುಂಪಿನಲ್ಲಿ ಹೆಂಗಸರು ಗಂಡಸರೂ ಹೆಚ್ಚುಕಡಿಮೆ ಸಮನಾಗಿ ಹಂಚಿಕೊಂಡಿರುತ್ತಾರೆ. ಸಾಮಾನ್ಯವಾಗಿ ಹೇಳುವುದಾದರೆ ಸಮ ವಯಸ್ಕರಲ್ಲಿ ಸಮಾನತೆಯೊಂದು ಇದ್ದೇ

ಇರುತ್ತದೆ. ಆದರೆ ವಾಸ್ತವ ಸಮಾಜಗಳಲ್ಲಿ ಯಾವಾಗಲೂ ಈ ಸಮಾನತೆಯು ಅರಿವಿಗೆ ಬರುವುದೇ ಇಲ್ಲ. ಅದೇ ಕಾಲದಲ್ಲಿ ತಾನೊಂದು ಜಾತಿಯಾಗ ಬಯಸುವ ಗುಂಪಿಗೆ ಲಿಂಗಗಳ ನಡುವೆ ಸಮಾನತೆಯನ್ನುಳಿಸಿ ಕಾಪಾಡುವುದು ಅಂತಿಮ ಗುರಿಯಾಗಿರುತ್ತದೆ. ಏಕೆಂದರೆ ಅದಿಲ್ಲದೆ ಸ್ವಜಾತಿ ವಿವಾಹ ಅಸ್ತಿತ್ವದಲ್ಲಿರುವುದು ಹಿಂದಿನಂತೆ ಸಾಧ್ಯವಾಗುವುದಿಲ್ಲ ಅಂದರೆ ಸ್ವಜಾತಿ ವಿವಾಹ ಪದ್ಧತಿಯನ್ನು ಸಂರಕ್ಷಿಸಿ ಬೇಕಾದಲ್ಲಿ ತಮ್ಮೊಳಗಿನವರೊಂದಿಗೆ ಲೈಂಗಿಕ ಸಂಪರ್ಕದ ಹಕ್ಕನ್ನು ಕಲ್ಪಿಸಿಕೊಡಬೇಕು. ಇಲ್ಲವಾದಲ್ಲಿ ಸ್ವಜಾತಿ ವಿವಾಹ ಪದ್ಧತಿಯನ್ನು ಮುರಿಯುತ್ತಾರೆ. ಆದ್ದರಿಂದ ಜಾತಿಯಾಗಿ ಉಳಿಯಬೇಕೆಂದು ಬಯಸುವ ಗುಂಪಿನೊಳಗೆ ಸ್ತ್ರೀ–ಪುರುಷರ ಸಂಖ್ಯೆಯಲ್ಲಿ ಸಮಾನತೆಯನ್ನು ಉಳಿಸಿಕೊಂಡು ಬರುವುದು ತೀವ್ರ ಅಗತ್ಯವಾಗಿತ್ತು.

ಹೀಗಾಗಿ ಜಾತಿ ಸಮಸ್ಯೆಯು ಅಂತಿಮವಾಗಿ ಮದುವೆಗೆ ಪ್ರಾಪ್ತವಯಸ್ಕರಾದ ಸ್ತ್ರೀ–ಪುರುಷ ವೈರುಧ್ಯಗಳನ್ನು ಸರಿಪಡಿಸುವ ಒಂದು ಅಂಶವಾಗಿ ಮಾರ್ಪಡುತ್ತದೆ. ಇದನ್ನು ವಿವಾಹ ಸಂಸ್ಥೆಯಲ್ಲಿರುವ ಗಂಡು–ಹೆಣ್ಣುಗಳ ನೆಲೆಯಿಂದ ವಿಸ್ತರಿಸುವುದಾದರೆ ಹೆಂಡತಿಗಿಂತ ಮುಂಚೆಯೇ ಗಂಡ ಸತ್ತು ಒಬ್ಬ ಹೆಚ್ಚುವರಿ ಹೆಣ್ಣನ್ನು ಉಳಿಸಿ ಹೋಗಬಹುದು. ಅಂತಹ ಗಂಡನನ್ನು ಕಳೆದುಕೊಂಡ ಹೆಂಡತಿಯನ್ನು ಜಾತಿಯಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಹಾಗೆಯೇ ಹೆಂಡತಿ ಸತ್ತು ಗಂಡ ಉಳಿದು ಹೆಚ್ಚುವರಿ ಮನುಷ್ಯನಾಗಲೂಬಹುದು. ಹೆಂಡತಿಯನ್ನು ಕಳೆದುಕೊಂಡ ಗಂಡನನ್ನು ಜಾತಿಯಲ್ಲಿ ಉಳಿಸಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಅವರು ಗುಂಪಿನಿಂದ ಹೊರಗೆ ಹೋಗಿ ಅಂತರ್‌ಜಾತೀಯ ವಿವಾಹದ ಮೂಲಕ ಆ ಜಾತಿಯ ವಿವಾಹ ಪದ್ಧತಿಯನ್ನು ಮುರಿಯುತ್ತಾರೆ. ಅಂದರೆ ಜಾತಿಯ ಸ್ವಗೋತ್ರ ವಿವಾಹ ಪದ್ಧತಿಯನ್ನು ಕಾಪಾಡುವ ಸಲುವಾಗಿ ಎರಡು ರೀತಿಯಲ್ಲಿ ಆಕೆಯ ವಿಷಯವನ್ನು ನಿಭಾಯಿಸುತ್ತಾರೆ.

ಪ್ರಥಮವಾಗಿ "ಅವಳ ಮೃತಗಂಡನ ಚಿತೆಯಲ್ಲೇ ಅವಳನ್ನು ಸುಟ್ಟು ಕಥೆ ಮುಗಿಸಬಹುದು. ಆದರೆ ಲೈಂಗಿಕ ಅಸಮಾನತೆಯ ಸಮಸ್ಯೆಯನ್ನು ನಿವಾರಿಸುವಲ್ಲಿ ಇದೊಂದು ಅಪ್ರಾಯೋಗಿಕ ವಿಧಾನವಾಯಿತು. ಕೆಲವು ಕಡೆಗಳಲ್ಲಿ ಇದು ಸರಿ ಹೋಗಬಹುದು. ಅದರಿಂದಾಗಿ ಪ್ರತಿಯೊಬ್ಬ ಹೆಚ್ಚುವರಿ ಸ್ತ್ರೀಯನ್ನು ಹೀಗೆ ನಿಭಾಯಿಸಲಾಗದು. ಅದು ಸುಲಭ ಪರಿಹಾರವಾದರೂ ಕಷ್ಟ ಸಾಧ್ಯವಾಗಿದೆ. ಈ ರೀತಿಯಲ್ಲಿ ಹೆಚ್ಚುವರಿ ಸ್ತ್ರೀ (ವಿಧವೆ)ಯನ್ನು ಗುಂಪಿನಲ್ಲೇ ಉಳಿಯುತ್ತಾಳೆ. ಆದರೆ ಅವಳ ಇರುವಿಕೆಯಲ್ಲಿ ಕೇವಲ ಎರಡು ಅಪಾಯಗಳಿವೆ. ಆಕೆ ಜಾತಿಯ ಹೊರಗೆ ಮದುವೆಯಾಗಿ ಸ್ವಜಾತಿ ಪದ್ಧತಿಯನ್ನು ಉಲ್ಲಂಘಿಸಬಹುದು. ಇಲ್ಲವೆ ಆಕೆ ಜಾತಿಯೊಳಗೆ ಮದುವೆಯಾಗಲೂ ಬಹುದು ಮತ್ತು ಅದರಿಂದ ಯಾವುದೇ ರೀತಿಯಲ್ಲಿ ಆಕೆಯೊಂದು ಪಿಡುಗು. ಆಕೆಯ ಸತ್ತ ಗಂಡನೊಂದಿಗೆ ಆಕೆಯನ್ನು ದಹಿಸಲಾಗದಿದ್ದರೂ ಯಾವುದಾದರೊಂದನ್ನು ಮಾಡಲೇಬೇಕು" ಎಂಬುದನ್ನು ಗುರುತಿಸುತ್ತಾರೆ.*[6]

ಎರಡನೆಯ ಪರಿಹಾರೋಪಾಯವೆಂದರೆ "ಅವಳಿಗೆ ಉಳಿದ ಜೀವನಪರ್ಯಂತ ವೈಧವ್ಯವನ್ನು ವಿಧಿಸುವುದು. ವಸ್ತುನಿಷ್ಠ ಪರಿಣಾಮದ ದೃಷ್ಟಿಕೋನದಿಂದಿರುವಂತೂ ವೈಧವ್ಯವನ್ನು ಹೇರುವುದಕ್ಕಿಂತಲೂ ಸುಡುವುದು (ಸತಿಪದ್ಧತಿ) ಉತ್ತಮ ಪರಿಹಾರ. ವಿಧವೆಯನ್ನು ಸುಡುವುದರಿಂದ ಒಬ್ಬ ಹೆಚ್ಚುವರಿ ಹೆಣ್ಣಿಗೆ ಸಂಭವಿಸಬಹುದಾದ ಎಲ್ಲ ಕೇಡುಗಳನ್ನು ನಿವಾಸಿದಂತಾಗುತ್ತದೆ. ಸತ್ತು ಇಲ್ಲವಾಗುವುದರ ಮೂಲಕ ಆಕೆ ಜಾತಿಯ ಒಳಗಾಗಲೀ ಹೊರಗಾಗಲೀ ಮದುವೆಯಾಗುವ ಸಮಸ್ಯೆ ಇರುವುದಿಲ್ಲ." ಆದರೆ "ಹೀಗೆ ಸುಡುವುದಕ್ಕಿಂತಲೂ ಕಡ್ಡಾಯದ ವೈಧವ್ಯ ಅದು ಹೆಚ್ಚು ವಾಸ್ತವಕ್ಕೆ ಇಳಿಸುವುದು ಸುಲಭ. ಇದು ಮಾನವೀಯವಾಗಿರುವುದಲ್ಲದೆ ಸತಿ ಹೋಗದಂತೆಯು ಹಾಗು ಪುನಃ ವಿವಾಹವಾಗದಂತೆಯು ತಡೆದು ಕಾಪಾಡುತ್ತದೆ. ಗುಂಪಿನ ನೈತಿಕತೆಯನ್ನು ರಕ್ಷಿಸುವಲ್ಲಿ ವಿಫಲವಾಗುವ ಸಾಧ್ಯತೆಗಳಿವೆ. ಕಡ್ಡಾಯ ವೈಧವ್ಯದಲ್ಲಿ ಆದರೆ ಸ್ತ್ರೀ ಇರುತ್ತಾಳೆಂಬ ನಂಬಿಕೆ ಇದ್ದರೂ ಆಕೆ ತನ್ನ ಜಾತಿ ಸಮಾಜದವರು ಎಳೆದ ಲಕ್ಷ್ಮಣ ರೇಖೆಯನ್ನು ದಾಟಬಹುದು. ಅದ್ದರಿಂದ ಮರುಳಾದ ಪರಿಸ್ಥಿತಿಯಲ್ಲಿರುವಂತೆ ಆಕೆಯನ್ನು ಕೆಳದರ್ಜೆಗೆ ಇಳಿಸಬಹುದು ಅಂದರೆ ಕೇಶಮುಂಡನೆ, ತಾಳಿ, ಕಾಲು ಉಂಗುರ ಇತ್ಯಾದಿ ಆಭರಣಗಳನ್ನು ತೆಗೆಯಬಹುದು.*[7]

ಅದೇ ತರಹ ಹೆಚ್ಚುವರಿ ಗಂಡಸಿನ ಸಂದರ್ಭವನ್ನು ಪರಿಶೀಲಿಸುವ ಅಂಬೇಡ್ಕರ್ "ತನ್ನನ್ನು ಒಂದು ಜಾತಿಗೊಳಪಡಿಸಲು ಇಚ್ಛಿಸುವ ಗುಂಪಿನಲ್ಲಿ ಹೆಚ್ಚುವರಿ ಹೆಣ್ಣಿನದಕ್ಕಿಂತ ಹೆಚ್ಚುವರಿ ಗಂಡಸಿನ (ವಿಧುರ) ಸಮಸ್ಯೆ ಇನ್ನು ಪ್ರಮುಖತರವಾಗಿದೆ ಮತ್ತು ಸಮಸ್ಯಾತ್ಮಕವಾಗಿದೆ. ಅನಾದಿ ಕಾಲದಿಂದಲೂ ಹೆಣ್ಣಿಗೆ ಹೋಲಿಸಿದಾಗ ಗಂಡು ಮೇಲುಗೈ ಪಡೆದಿದ್ದಾನೆ. ಎಲ್ಲ ಗುಂಪಿನಲ್ಲೂ ಆತ ಪ್ರಧಾನ ವ್ಯಕ್ತಿ. ಎರಡು ಲಿಂಗಗಳಲ್ಲಿ ಆತನಿಗೆ ಅಧಿಕತರವಾದ ಪ್ರತಿಷ್ಠೆಯಿದೆ. ಸ್ತ್ರೀಯ ಮೇಲಿನ ಅವನ ಈ ಸಾಂಪ್ರದಾಯಿಕವಾದ ಶ್ರೇಷ್ಠತೆಯಿಂದಾಗಿ ಆತನ ಅಪೇಕ್ಷೆಗಳನ್ನು ಯಾವಾಗಲೂ ಪರಿಶೀಲಿಸಲಾಗುತ್ತದೆ. ಇನ್ನೊಂದು ಕಡೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಎಲ್ಲ ಬಗೆಯ ಪಕ್ಷಪಾತ ಕಟ್ಟಳೆಗಳಿಗೂ ಸ್ತ್ರೀ ಸುಲಭವಾಗಿ ಬಲಿಯಾಗುತ್ತಿದ್ದಾಳೆ. ಆದರೆ ಗಂಡಸು ಕಟ್ಟಳೆಗಳನ್ನು ಮಾಡುವ ವ್ಯಕ್ತಿಯಾಗಿ ಅನೇಕ ಬಾರಿ ಅವುಗಳಿಗೆ ಅತೀತವಾಗಿದ್ದಾನೆ. ಪರಿಸ್ಥಿತಿ ಹೀಗಿರುವುದರಿಂದಾಗಿ ಒಂದು ಜಾತಿಯಲ್ಲಿ ಹೆಚ್ಚುವರಿ ಹೆಣ್ಣಿಗೆ ನೀವು ತೋರುವಂತಹ ವರ್ತನೆಯನ್ನು ಗಂಡಿಗೂ ತೋರಲಾಗುವುದಿಲ್ಲ."*[8]

ಈ ಹಿನ್ನೆಲೆಯಲ್ಲಿ "ಆತನನ್ನು ಸತ್ತ ಆತನ ಹೆಂಡತಿಯೊಂದಿಗೆ ಸುಡುವುದು ಎರಡು ರೀತಿಗಳಲ್ಲಿ ಕಷ್ಟಸಾಧ್ಯ. ಮೊದಲನೆಯದೆಂದರೆ ಆತ ಗಂಡಸು ಎಂಬುದೊ ಸರಳ ಕಾರಣಕ್ಕಾಗಿ ಆತನನ್ನು ಚಿತೆಯೇರಿಸಲು ಸಾಧ್ಯವಾಗುವುದಿಲ್ಲ. ಎರಡನೆಯದಾಗಿ, ಹಾಗೆ ಮಾಡಿದರೂ ಆ ಜಾತಿಗೆ ಒಬ್ಬ ಬಲಿಷ್ಠ ವ್ಯಕ್ತಿ ನಷ್ಟವಾಗುತ್ತಾನೆ. ಆದ್ದರಿಂದ ಅವನನ್ನು ಪ್ರಶಸ್ತವಾಗಿಯೇ ನಿವಾರಿಸಿಕೊಳ್ಳಲು ಇನ್ನೆರಡು ಪರಿಹಾರಗಳುಳಿಯುತ್ತವೆ. ಪ್ರಶಸ್ತವಾಗಿಯೇ ಎಂದು ನಾನು ಹೇಳುತ್ತಿರುವುದು ಏಕೆಂದರೆ ಆತ ಗುಂಪಿಗೊಂದು 'ಆಸ್ತಿ'."*[9]

ಆತ ಗುಂಪಿಗೆ ಮುಖ್ಯವಾದುದರಿಂದಲೂ, "ಸ್ವಜಾತಿ ಪದ್ಧತಿಯನ್ನೇ ಮುಖ್ಯವಾಗಿರುವುದರಿಂದಲೂ ಇದರ ಪರಿಹಾರ ಎರಡು ಗುಂಪುಗಳಿಗೂ ಸಲ್ಲುವಂತೆ ಅವನಿಗೆ ವಿಧುರ, ಬ್ರಹ್ಮಚರ್ಯವನ್ನು ಹೇರುತ್ತವೆ. ಆದರೆ ಇದು ತಾತ್ವಿಕವಾಗಿಯೂ ಪ್ರಾಯೋಗಿಕವಾಗಿಯೂ ವಿಫಲಗೊಳ್ಳುತ್ತದೆ. ಒಂದು ಸಂಸ್ಕೃತ ಪರಿಭಾಷಿಕ ಶಬ್ದವನ್ನು ಬಳಸಿ ಹೇಳುವುದಾದರೆ ಅವನನ್ನು ಒಬ್ಬ 'ಗೃಹಸ್ಥ' (ಒಂದು ಕುಟುಂಬ ಪಾಲಕ)ನನ್ನಾಗಿ ಇಡುವುದು. ಜಾತಿ ಹಿತದೃಷ್ಟಿಯಿಂದಲೇ, ಆದರೆ ಜಾತಿಯೊಳಗೆ ಒಬ್ಬ ಹೆಂಡತಿಯನ್ನು ಅವನಿಗೆ ಒದಗಿಸುವುದೇ ಸಮಸ್ಯೆಯಾಗಿದೆ. ಹೊರನೋಟಕ್ಕೆ ಇದು ಅಸಾಧ್ಯ. ಏಕೆಂದರೆ ಒಂದು ಜಾತಿಯಲ್ಲಿರ ಬೇಕಾದ ಪ್ರಮಾಣವೆಂದರೆ ಒಂದು ಗುಂಪಿಗೆ ಒಂದು ಹೆಣ್ಣು ಎರಡು ಬಾರಿ ಮದುವೆ ಆಗುವ ಅವಕಾಶವನ್ನು ಯಾರೂ ಹೊಂದಲಾಗದು.

ಬಿಗಿಯಾಗಿ ತಾನೇ ಹಾಕಿರುವ ಒಂದು ಜಾತಿಯೊಳಗೆ ಮದುವಣಿಗರ ಬಳಿ ಹೋಗುವ ಮದುವಣಗಿತ್ತಿಯರು ಯಾವಾಗಲೂ ತಕ್ಕಷ್ಟೇ ಇರುತ್ತಾರೆ. ಇಂಥ ಸಂದರ್ಭಗಳಲ್ಲಿ ಹೆಚ್ಚುವರಿ ಗಂಡಸಿಗೆ ಆತನನ್ನು ಒಂದು ಗುಂಪಿಗೆ ಕಟ್ಟಿಹಾಕುವ ಸಲುವಾಗಿ ಮದುವೆಯಾಗಬೇಕಾದ ಹಂತವನ್ನು ಇನ್ನು ತಲುಪಿರದ, ಅಪ್ರಾಪ್ತ ವಯಸ್ಕ ವಧುವನ್ನು ಹೆಂಡತಿಯಾಗಿ ತುಂಬಿಸಬಹುದು. ಇದರಿಂದ ಆತನನ್ನು ಜಾತಿಯಲ್ಲೇ ಉಳಿಸಿದಂತಾಗಿರುತ್ತದೆ. ಜಾತಿಯಿಂದ ನಿರಂತರವಾಗಿ ಹೊರಗೆ ಹರಿಯುವ ಸಂಖ್ಯಾಬಲವನ್ನು ಈ ವಿಧಾನದಿಂದ ಸಂರಕ್ಷಿಸು ವಂತಾಗುವುದಲ್ಲದೆ ಸ್ವಜಾತಿ ಪದ್ಧತಿ ಮತ್ತು ನೀತಿಗಳನ್ನು ಕಾಪಾಡಿ ದಂತಾಗುತ್ತದೆ.

ಒಟ್ಟಿನಲ್ಲಿ ಸ್ತ್ರೀ–ಪುರುಷ ನಡುವೆ ಇರುವ ಸಾಂಖ್ಯಿಕ ತಾರತಮ್ಯವನ್ನೇ ನಾಲ್ಕು ರೀತಿಗಳಿಂದ ಹೀಗೆ ಪಾಲಿಸುತ್ತದೆ.

1. ತನ್ನ ಸತ್ತ ಗಂಡನೊಂದಿಗೆ ವಿಧವೆಯನ್ನು ಸುಡುವುದು – ಸತಿಪದ್ಧತಿ
2. ಕಡ್ಡಾಯ ವೈಧವ್ಯ
3. ವಿಧುರನ ಮೇಲೆ ಬ್ರಹ್ಮಚರ್ಯ ಹೇರುವುದು
4. ಅಪ್ರಾಪ್ತ ವಯಸ್ಕಳೊಂದಿಗೆ ಅವರ ವಿವಾಹ – ಬಾಲ್ಯವಿವಾಹ

ಅಂದರೆ ಮಹಿಳೆ ಹಿನ್ನೆಲೆಯಲ್ಲಿ ಹಿಂದೂ ಸಮಾಜವು ತನ್ನ ಸಾಮಾಜಿಕ ನಡುವಳಿಕೆಯಲ್ಲಿ ಸಂಕೀರ್ಣವೆನಿಸಿದರೂ, ಮೇಲುನೋಟಕ್ಕೆ ಮೂರು ಪ್ರತ್ಯೇಕ ಸಂಪ್ರದಾಯಗಳು ವ್ಯಕ್ತವಾಗುತ್ತದೆ. ಅವುಗಳೆಂದರೆ:

1. ಸತಿಪದ್ಧತಿ
2. ವೈಧವ್ಯ
3. ಬಾಲ್ಯವಿವಾಹ

ಇವುಗಳಿಂದ ಜಾತಿಯನ್ನು ಕಾಪಾಡಲಾಗಿದೆ ಎನ್ನುತ್ತಾರೆ.*[10]

ಎಲ್ಲ ಸಂಗತಿಗಳನ್ನು ಹೀಗೆ ಗ್ರಹಿಸಬಹುದು. ಅಂಬೇಡ್ಕರ್ ಅವರ ಈ ಚಿಂತನೆಯು ವಸಾಹತು ಸಂದರ್ಭದ ಭಿನ್ನವಾದ ಚಿಂತನಾಕ್ರಮ ವಾಗಿದೆ. ಅಂದರೆ ಅದು ಮಹಿಳೆ ಮತ್ತು ಜಾತಿಯ ಪ್ರಶ್ನೆಗಳನ್ನು ಇಂಡಿಯಾದ ಸಂಸ್ಕೃತಿಯ ಸಂದರ್ಭದಲ್ಲಿ ಪ್ರಸ್ತುತಪಡಿಸುತ್ತದೆ. ಅಂದರೆ ಭಾರತದ ಜನಾಂಗಗಳು ಅಂತರ ಸಂಬಂಧವಿದ್ದು, ಅಖಂಡವಾದ ಸಾಂಸ್ಕೃತಿಕ ಏಕತೆಯನ್ನು ಪಡೆದಿವೆ. ಹಾಗಾಗಿ, ಭಾರತದ ಆದಿವಾಸಿ ಸಮಾಜ ಜಾತಿ, ಲಿಂಗ ತಾರತಮ್ಯಕ್ಕೆ ಹೊರತಾದದ್ದಾಗಿದೆ. ಆದರೆ ಈ ಸಮಾಜದ ಮೇಲಿನ ಆರ್ಯರ ಅಂದರೆ ವೈದಿಕ ಸಮಾಜದ ಸ್ಥಾಪನೆ. ಲಿಂಗ ಮತ್ತು ಜಾತಿ ತಾರತಮ್ಯ ಹೇರಲ್ಪಟ್ಟಿತು. ಆದ್ದರಿಂದ ಪುರುಷ–ಪುರುಷ, ಮಹಿಳೆ–ಮಹಿಳೆ, ಪುರುಷ–ಮಹಿಳೆ, ಮಹಿಳೆ–ಪುರುಷರ ನಡುವೆ ಪ್ರಧಾನ–ಅಧೀನ ನೆಲೆಗಳು ಇವೆ. ಇವುಗಳಲ್ಲಿನ ತಾರತಮ್ಯ ಧೋರಣೆ ಅಸಮಾನತೆಯನ್ನು ಸೃಷ್ಟಿಸುತ್ತದೆ. ಅಲ್ಲದೆ ಮಹಿಳೆಯರ ಸಂಬಂಧದಲ್ಲಿ ಸಮಸ್ಯೆಯಾಗಿ ಪ್ರಸ್ತುತ ಪಡೆಯುತ್ತದೆ. ಆದ್ದರಿಂದ ಭಾರತದ ಮಹಿಳೆಯರ ಎಲ್ಲ ಸಮಸ್ಯೆಗಳು ಜಾತಿಯಿಂದ ನಿಷ್ಪನ್ನಗೊಂಡಿವೆ.

ಈ ಹಿನ್ನಲೆಯಲ್ಲಿ ಅಂಬೇಡ್ಕರ್ ಸಹ ಸುಧಾರಣಾವಾದಿಗಳು ಕೈಗೆತ್ತಿಕೊಂಡಿರುವ ಸತಿ, ವಿಧವಾ, ಬಾಲ್ಯವಿವಾಹ ಇತ್ಯಾದಿ ವಿಷಯ ಗಳನ್ನೇ ಕೈಗೆತ್ತಿಕೊಂಡರೂ ಅದನ್ನು ಭಿನ್ನವಾಗಿ ವ್ಯಾಖ್ಯಾನಿಸಲು ಪ್ರಯತ್ನಿಸುವುದು ಗಮನಾರ್ಹವಾದುದಾಗಿದೆ. ಅವರ ಪ್ರಕಾರ ಬಹುಪತ್ನಿತ್ವ, ಅಸಮವಿವಾಹ, ವೈಧವ್ಯ ಆಚರಣೆ, ಸತಿ ಇತ್ಯಾದಿ ಆಚರಣೆಗಳಿಗೆ ಸ್ವಜಾತಿ ವಿವಾಹ ಪದ್ಧತಿಯೇ ಕಾರಣ. ಜಾತಿ ಸಮಸ್ಯೆಯು ಅಂತಿಮವಾಗಿ ಮದುವೆಗೆ ಪ್ರಾಪ್ತವಯಸ್ಕರಾದ ಸ್ತ್ರೀ–ಪುರುಷ ವೈರುಧ್ಯಗಳನ್ನು ಸರಿಪಡಿಸುವ ಒಂದು ಅಂಶವಾಗಿ ಮಾರ್ಪಡುತ್ತದೆ. ಜಾತಿಯೊಳಗೆ ಉಳಿಯಬೇಕೆಂಬ ಘಟಕಕ್ಕೆ ಸ್ತ್ರೀ–ಪುರುಷರ ಸಂಖ್ಯೆಯಲ್ಲಿ ಸಮಾನತೆ ಇರಬೇಕು. ಆದರೆ ಇದು ಸಾಧ್ಯವಿಲ್ಲ. ಹುಟ್ಟಿನಲ್ಲಾಗಲಿ, ಮರಣದಲ್ಲಾಗಲಿ ಇದು ಹೆಚ್ಚುವರಿಯಾದ ಗಂಡು ಹೆಣ್ಣನ್ನು ಸಮುದಾಯದಲ್ಲಿ ಸೃಷ್ಟಿಸುತ್ತದೆ. ಹಾಗೆ ಹೆಚ್ಚುವರಿಯಾದ ಹೆಣ್ಣನ್ನು ನಿವಾರಿಸುವ ವಿಧಾನವಾಗಿ ಸತಿಪದ್ಧತಿ, ವೈಧವ್ಯ ಹುಟ್ಟಿಕೊಳ್ಳುತ್ತವೆ. ಈ ಆಚರಣೆಗಳು ಹೆಚ್ಚುವರಿ ಹೆಣ್ಣನ್ನು ಸಮುದಾಯದೊಳಗೆ ಬಳಸುವ ಅಥವಾ ಕಳಿಸುವ ಮಾದರಿಗಳು. ಆದರೆ ಈ ಒತ್ತಡ ಹೆಚ್ಚುವರಿ ಗಂಡಿನ ಮೇಲಿರುವುದಿಲ್ಲ. ಬ್ರಹ್ಮಚರ್ಯ, ವಿವಾಹಬಾಹಿರ ಸಂಬಂಧ, ವರ್ಣಸಂಕರ ಇತ್ಯಾದಿಗಳಲ್ಲೆಲ್ಲಾ ಪುರುಷನಿಗೆ ಕೆಲವು ಹೆಚ್ಚಿನ ರಿಯಾಯಿತಿಗಳು ಸವಲತ್ತುಗಳು ಇವೆ. ಅದಕ್ಕಾಗಿ ಅಳದಲ್ಲಿ ಸತಿ, ವಿಧವಾ, ಬಾಲ್ಯವಿವಾಹ ಇತ್ಯಾದಿಗಳು ಜಾತಿ ಉಳಿವಿಗಾಗಿ ಇರುವಂತಹವು. ಅಂದರೆ ಮೇಲ್ಜಾತಿ, ಮತ್ತು ಕೆಳಜಾತಿ ಮಹಿಳೆಯರ ಸಮಸ್ಯೆಗಳು ಸ್ವಜಾತಿ ವಿವಾಹದಿಂದ ಉಳಿದಿವೆ ಅಷ್ಟೇ ಅಲ್ಲ ಅವು ಏಕರೂಪವಾದವು. ಆದ್ದರಿಂದಲೇ ಅಸ್ಪೃಶ್ಯತೆಯನ್ನು ಜಾತಿ ವ್ಯವಸ್ಥೆ ಯೊಂದಿಗೆ ಗ್ರಹಿಸಿದರು. ಆದರೆ ಅದೇ ಲಿಂಗಸಂಬಂಧ ಸಮಸ್ಯೆಯನ್ನು ಬ್ರಾಹ್ಮಣ ಪಿತೃಪ್ರಧಾನತೆಯೊಂದಿಗೆ ಗುರುತಿಸಿದರು. ಹಾಗಾಗಿ ಅಂತರ್‌ಜಾತಿ ವಿವಾಹ ಪರಿಕಲ್ಪನೆ ಮುಂದಿಟ್ಟರು. ಆದ್ದರಿಂದ ಐರೋಪ್ಯರ ಮತ್ತು ದೇಶಿಯ ಸುಧಾರಣಾವಾದಿಗಳ ಬಾಲ್ಯವಿವಾಹ, ಸತಿ, ವಿಧವಾ ಮೊದಲಾದ ಮಹಿಳಾ ಸಮಸ್ಯೆಗಳನ್ನು ಅಂತರ್‌ಜಾತಿ ವಿವಾಹದ ಮೂಲಕ ಮಾತ್ರ ನಿರ್ಮೂಲನೆ ಸಾಧ್ಯ. ಹಾಗಾಗಿ ಎಲ್ಲರೂ ಈ ವಿವಾಹದ ಪ್ರಕಾರದ ಕಡೆಗೆ ಗಮನಹರಿಸಬೇಕಾದ ತುರ್ತು ಪ್ರಸ್ತುತಗೊಂಡಿತು. ಅಂದರೆ ಜಾತಿಪದ್ಧತಿಯ ನಿರಾಕರಣೆಯೊಂದಿಗೆ ಮಹಿಳೆ ಸಮಸ್ಯೆ ಪರಿಹಾರ ಹೊಂದಬಹುದಾದವು.

ಆದರೆ ಜಾತಿವ್ಯವಸ್ಥೆಯು ಬ್ರಾಹ್ಮಣರಿಂದ ನಿಷ್ಪನ್ನ ಆಗಿರುವುದರಿಂದ ಮೇಲ್ಜಾತಿಯ ಸಂರಕ್ಷತೆಯ(?) ಒಳಗಿರುವ ಮಹಿಳೆಯರು ಜಾತಿ ಪದ್ಧತಿಯ ಊರ್ಜಿತಕ್ಕಾಗಿ (ಸ್ವಯಂ) ಸತಿಯಾಗಬೇಕಾಗುತ್ತದೆ. ತನ್ನ ಸಮುದಾಯದ ಸ್ತ್ರೀಯನ್ನು ಬಲಿಕೊಡುವುದರ ಮೂಲಕ ಮೇಲ್ಜಾತಿಯ ಪುರುಷ ತನ್ನ ಪಾವಿತ್ರ್ಯವನ್ನು ಪ್ರತಿಷ್ಠೆಯನ್ನು ಈಡೇರಿಸಿಕೊಳ್ಳುತ್ತಾನೆ. ಈ ಮೂಲಕ ಸಮಸ್ತ ಜನಸಮುದಾಯದ ಮೇಲಿನ ತನ್ನ ಹಕ್ಕನ್ನು ಸ್ಥಾಪಿಸಿಕೊಳ್ಳುತ್ತಾನೆ. ಇದು ಚಾರ್ಡೆ ಮಾನಸಿಕ ಸಿದ್ಧಾಂತ ನೆಲೆಯ ವಿಸ್ತರಿಸಲ್ಪಡುವುದರಿಂದ ನಂತರ ಕೆಳಜಾತಿಯ ಪುರುಷರು ಸಹ ಬ್ರಾಹ್ಮಣ ಮಾದರಿಯನ್ನೇ ಅನುಸರಿಸಿದರು ಕೆಳಜಾತಿ ಮಹಿಳೆಯರು ಜಾತಿ ವ್ಯವಸ್ಥೆಯನ್ನು ಕಾಪಾಡಲು ತನ್ನ ಜಾತಿಪುರುಷರಿಗೆ ನಿಷ್ಠೆಯಿಂದ ಇರಬೇಕು ಹಾಗೆಗಿಯೇ ಮೇಲ್ಜಾತಿ ಪುರುಷನಿಗೆ ಕೆಳಜಾತಿ ಮಹಿಳೆಯರು ಸೊತ್ತಾಗಿರಬೇಕು. ಅಂದರೆ ತನ್ನ ಜಾತಿ ಪುರುಷನಿಗೆ ಹೆಂಡತಿಯಾದರೆ, ಮೇಲ್ಜಾತಿ ಪುರುಷರಿಗೆ ದೇವದಾಸಿ, ಲೈಂಗಿಕ ತೃಷೆ ತೀರಿಸುವ ವಸ್ತು ಆಗಬೇಕು. ಹಾಗಾಯೇ ಮೇಲ್ಜಾತಿ ಮಹಿಳೆಗೆ ದಾಸಿಯಾಗಿರಬೇಕು, ಅದು ಆಧುನಿಕ ಕುಟುಂಬಗಳಲ್ಲಿ ಮನೆ ಕೆಲಸ ಮಾಡುವವರ ರೂಪ ಪಡೆಯುತ್ತದೆ. ಹಾಗಾಗಿ ಅಂತರಜಾತಿ ವಿವಾಹದ ಮೂಲಕ ಇವುಗಳ ಒಳಗಿನ ಶ್ರೇಣೀಕರಣ ಕಡಿದು ಹೋಗುತ್ತದೆ. ಈ ಮೂಲಕ ಮಹಿಳೆ ಸಮಸ್ಯೆಗಳು ಪರಿಹಾರವಾಗುತ್ತವೆ ಎಂದು ಗ್ರಹಿಸಬಹುದು. ಆದ್ದರಿಂದಲೇ ಅಂಬೇಡ್ಕರ್ ಜಾತಿಹೋರಾಟವನ್ನು ಸಂಘಟಿಸು ತ್ತಿದ್ದಾಗಲೂ ದಲಿತ ಮಹಿಳೆ ಸಮಾನಾಂತರ ಬ್ರಾಹ್ಮಣ ಮಹಿಳೆಯರ ಸಮಸ್ಯೆ ಪರಿಕಲ್ಪನೆಯಲ್ಲಿ

ಪರಿಗಣಿಸುತ್ತಾರೆ. ಈ ಹಿನ್ನೆಲೆ ಜಾತಿ ನಿರ್ಮೂಲನೆಯಿಂದ ಮಹಿಳಾ ಸಮಸ್ಯೆಗೆ ಪರಿಹಾರ ಎಂಬುದನ್ನು ಪ್ರಸ್ತುತಗೊಂಡಿತ್ತು.

ಈ ಹಿನ್ನೆಲೆಯಲ್ಲಿ ವಿವಾಹ ಸಂಸ್ಥೆಯನ್ನು ಪ್ರಶ್ನಿಸದೆ ಉಳಿಸಿಕೊಂಡರು. ಅಂದರೆ ಜಾತಿ ಶ್ರೇಣೀಕರಣ ಕಡಿತಗೊಳಿಸಿ ಲಿಂಗಾಧಾರಿತ ಶ್ರೇಣೀಕರಣಗಳನ್ನು ವ್ಯವಸ್ಥೆ ಜಾತಿಯಾಗಿಸತೊಡಗಿದರು ದಲಿತ ಮಹಿಳೆಯರ ವಿವಾಹದ ಕಡೆ ಗಮನಹರಿಸಬೇಕು ಎಂಬುದು ಅಂಬೇಡ್ಕರ್ ನಿಲುವು. ಈ ಕುರಿತು ಅವರು "1936ರಲ್ಲಿ ಶೋಷಣೆ ಗೊಳಪಟ್ಟ ದೇವದಾಸಿ, ಜೋಗತಿ, ಪತ್ರಿಜೆ ಆರಾಧನೆ ಮುಂತಾದ ವರ್ಗಗಳ ಮಹಿಳೆಯರ ಸಮಾವೇಶವು ಮುಂಬಯಿಯ ದಾಮೋದರ್ ಧಾಕರ್ಸಿ ಅಂಗಣದಲ್ಲಿ ನಡೆಯಿತು. ಆ ಸಂದರ್ಭದ ಅಂಬೇಡ್ಕರ್ ಮಾತುಗಳು ಮಹತ್ವವಾದುದು. ನಮ್ಮೊಂದಿಗೆ ನೀವು ನಿಮ್ಮ ಧರ್ಮವನ್ನು ಬದಲಾಯಿಸಿಕೊಳ್ಳುತ್ತೀರೋ, ಇಲ್ಲವೋ ಎಂಬ ಅಂಶ ನನಗೆ ಮುಖ್ಯವಲ್ಲ. ಆದರೆ ನೀವೂ ನಮ್ಮೊಂದಿಗೆ ಬಾಳಬೇಕಾದರೆ ನಿಮ್ಮ ಅವಮರ್ಯಾದೆಯ ಜೀವನವನ್ನು ಬಿಟ್ಟುಬಿಡಬೇಕು. ಪಾಶ್ಚಾತ್ಯ ಪದ್ಧತಿಗೆ ಎಳೆಯುವಂತಹ ಯಾವುದೇ ಪರಿಸರವಿಲ್ಲದೆ ನೀವು ಇತರ ವರ್ಗದ ಮಹಿಳೆಯರಂತೆ ವಿವಾಹವಾಗಿ ಗೃಹಕೃತ್ಯಗಳನ್ನು ತೊಡಗಬೇಕು ಎಂದು ನಾನು ನಿಮ್ಮನ್ನು ಒತ್ತಾಯಿಸುತ್ತೇನೆ ಎನ್ನುತ್ತಾರೆ.*[11]

ಒಟ್ಟಿನಲ್ಲಿ ಮೂಲ ಜಾತಿಚಿಂತಕರಾದ ಅಂಬೇಡ್ಕರ್ ಮಹಿಳಾ ಪ್ರಶ್ನೆ ಜಾತಿವ್ಯವಸ್ಥೆಯ ಒಳಗೆ ಗ್ರಹಿಸಿದರು. ಅಂದರೆ ಅಸ್ಪೃಶ್ಯತೆಯನ್ನು ಜಾತಿವ್ಯವಸ್ಥೆಯೊಂದಿಗೆ ಗುರುತಿಸಿದಂತೆ ಮಹಿಳೆ ಸಮಸ್ಯೆಯನ್ನು ಆಯಾ ಜಾತಿ ಪಿತೃಪ್ರಧಾನತೆಯೊಂದಿಗೆ ಗುರುತಿಸಿ ತಾತ್ವೀಕರಿಸಿದರು ವಿಸ್ತರಿಸಲಿಲ್ಲ. ಅಂದರೆ ಮಹಿಳೆ ಸಮಸ್ಯೆಯನ್ನು ಏಕರೂಪಗೊಳಿಸಿ ಬ್ರಾಹ್ಮಣ ಪಿತೃಪ್ರಧಾನತೆಯೊಂದಿಗೆ ಮುಖಾಮುಖಿಯಾಗಿಸಿದರು. ಆದರೆ, ಆಯಾ ಜಾತಿ ಪಿತೃಪ್ರಧಾನತೆಗಳನ್ನು ಮುಖಾ-ಮುಖಿ ಆಗಿಸುವಲ್ಲಿ ಉದಾರೀಕರಿಸುತ್ತಾರೆ. ತಮ್ಮ ಪಿತೃಪ್ರಧಾನ ಗುಣಲಕ್ಷಣಗಳನ್ನು ಗುರುತಿಸುವುದಿಲ್ಲ ಎನ್ನಬಹುದು. ಹಾಗಾಗಿ ಮಹಿಳಾ ಸಮಸ್ಯೆಯನ್ನು ಅಂತರಜಾತಿ ವಿವಾಹದ ಮೂಲಕ ಬಗೆಹರಿಸಬಹುದು ಎಂದು ಗ್ರಹಿಸಲಾಯಿತು. ಆದ್ದರಿಂದ ಇದು ಮಹಿಳಾ ಪ್ರಶ್ನೆಯನ್ನು ಏಕರೂಪಿ ನೆಲೆಯಲ್ಲಿ ಗುರುತಿಸುವ ಕ್ರಮ ವಸಾಹತು ಸಂದರ್ಭದ ಪ್ರಭಾವವನ್ನು ತೋರಿಸುತ್ತದೆ. ಅಲ್ಲದೆ ಪಿತೃಪ್ರಧಾನತೆ ಕೇಂದ್ರವಾದ ವಿವಾಹ ಸಂಬಂಧಿ ಲಿಂಗಾಧಾರಿತ ಶ್ರೇಣೀಕರಣಗಳ ಕುರಿತಂತೆ ಚರ್ಚೆಗಳನ್ನು ಅಪ್ರಸ್ತುತ



ವಾಗಿಸುತ್ತದೆ. ಜೊತೆಗೆ ಜಾತಿವ್ಯವಸ್ಥೆಯಲ್ಲಿ ಪಿತೃಪ್ರಧಾನತೆಯನ್ನು ಆಧರಿಸಿ ಸ್ತ್ರೀಯರ ಕುರಿತ ವಾದಗಳ ಅಗತ್ಯತೆಯನ್ನು ಪ್ರತಿಬಿಂಬಿಸುತ್ತದೆ.

ಅಂಬೇಡ್ಕರ್ ಒಪ್ಪುವ "ವಿವಾಹವು ಸ್ತ್ರೀ-ಪುರುಷರನ್ನು ಪ್ರತ್ಯೇಕ ಜಾತಿಯಾಗಿಸುತ್ತದೆ." ಇದರ ಬಗ್ಗೆ ಸ್ತ್ರೀವಾದ ಅನೇಕ ತಕರಾರುಗಳಿವೆ. ಏಕೆಂದರೆ ಇದು ಸ್ತ್ರೀದಾಸ್ಯದ ಪ್ರಶ್ನೆಯನ್ನು ವಿವಾಹ ಸಂಸ್ಥೆಯಿಂದ ವಿವರಿಸಬಯಸುತ್ತದೆ. ಅಂದರೆ ಶತಮಾನಗಳಿಂದ ಸಮಾಜದಲ್ಲಿ ಅಸ್ತಿತ್ವ ಉಳಿಸಿಕೊಂಡಿರುವ ವಿವಾಹ ಸಂಸ್ಥೆ ಹೆಣ್ಣು-ಗಂಡುಗಳ ಲೈಂಗಿಕತೆಯನ್ನು ಈಡೇರಿಸುತ್ತದೆ. ಆದರೆ ಇದು ಸ್ತ್ರೀ-ಪುರುಷರನ್ನು ಸೇರಿಸುವುದಕ್ಕೆ ಅಷ್ಟೇ ಸೀಮಿತವಾಗದೆ ಅವರ ದೇಹ, ಬುದ್ಧಿ, ಮನಸ್ಸಿನಲ್ಲಿ ಪ್ರಧಾನ ಅಧೀನತೆಯನ್ನು ನಿರ್ಮಿಸಿದೆ. ಹಾಗಾಗಿ ಇದು ಲಿಂಗಾಧಾರಿತ ಶ್ರೇಣೀಕರಣಗಳನ್ನು ಉಳಿಸಿಬಿಟ್ಟಿದೆ. ಆದ್ದರಿಂದ ಸ್ತ್ರೀವಾದ ಮತ್ತು ಅದರ ಪ್ರಸ್ಥಾನಗಳು ಈ ಕುರಿತು ಅನೇಕ ವಾದಗಳನ್ನು ಹೂಡುತ್ತವೆ.

ಸ್ತ್ರೀವಾದಿಗಳ ಪ್ರಕಾರ ವಿವಾಹವೇ ಮಹಿಳೆಯ ಎಲ್ಲ ಸಮಸ್ಯೆಗಳ ಮೂಲ. ಈ ಕುರಿತು ಜ್ಯೂಲಿಯಟ್ ಹೇಳಿಕೆ ಗಮನಾರ್ಹವಾದುದು. "ಸ್ತ್ರೀ ಜಗತ್ತಿನೊಳಗೆ ಹೆಂಗಸಿನಿಂದಲೇ ಪೋಷಿತರಾಗುವ ಅವರಿಗೆ ಮುಖ್ಯ ಗುರಿ ಎಂದು ತೋರಿರುವುದು. ಮದುವೆ ಅಂದರೆ ವಾಸ್ತವಿಕವಾಗಿ ಗಂಡಸಿಗೆ ಅಧೀನವಾಗುವುದು" ಎಂದು ವ್ಯಾಖ್ಯಾನಿಸಿದ್ದಾಳೆ.*[12] ಇದರ ರಾಚನಿಕ ನೆಲೆಗಿಂತ ಅದರ ಅಂತಸತ್ವವನ್ನು ಪ್ರತಿರೋಧಿಸುವ ಸಿಮೋನಾದ ಬೋವಾ "ಹೆಂಗಸು ಗಂಡಸಿನೊಡನೆ ಸಂಬಂಧ ಹೊಂದಿರುವ ಮದುವೆ ಆಕೆಯ ಅಧೀನಸ್ಥಿತಿಗೆ ಕಾರಣವಲ್ಲ ಆಕೆ ಮದುವೆ ಸಂಬಂಧಕ್ಕೆ ಮಾತ್ರ ಕಟ್ಟು ಬಿದ್ದಿರುವುದೇ ಅದಕ್ಕೆ ಮುಖ್ಯ ಕಾರಣ ಎನ್ನುತ್ತಾಳೆ.*[13]

ಒಟ್ಟಿನಲ್ಲಿ ವಿವಾಹ, ಹೆಣ್ಣನ್ನು ಗಂಡಿಗೆ ಅಧೀನತೆ ಅಷ್ಟೆ ಒಳಪಡಿಸಿದೆ. ಅದು ನಿರಂತರವಾಗಿರಲು ಸ್ತ್ರೀ-ಪುರುಷರನ್ನು ಪ್ರತ್ಯೇಕ ವಾಗಿಸುವ ಲಿಂಗಾಧಾರಿತ ತಾರತಮ್ಯವನ್ನು ಸೃಷ್ಟಿಸುತ್ತದೆ. ಈ ಕಾರಣಕ್ಕಾಗಿಯೇ ಪ್ರಪಂಚದಲ್ಲಿ ಹೆಣ್ಣು ಎನ್ನುವುದೇ ಒಂದು ಪ್ರತ್ಯೇಕ ಸಮುದಾಯವಾಗಿ ಗುರುತಿಸಿಕೊಳ್ಳುತ್ತಿದೆ. ತಮ್ಮ ವಿಸ್ತೃತಿಯನ್ನು ಶೋಧನೆಗೆ ಒಳಪಡಿಸಲು ತಹತಹಿಸುತ್ತಿವೆ.

ಆದ್ದರಿಂದ ಸಮಾಜದ ಪರಿಗಣನೆಯಲ್ಲಿ ಹೆಣ್ಣು ಎಂಬುದು ಒಂದು ಪ್ರತ್ಯೇಕ ಜಾತಿ ಆಗಿದೆ. ಮಹಿಳೆಯರೇನೂ ಹೀಗೆ ಪ್ರತ್ಯೇಕ ಜಾತಿಯಾಗಿ ಉಳಿಯಲು ಬಯಸುವುದಿಲ್ಲವಾದರೂ ಇದೊಂದು ಸಾಮಾಜಿಕ ವಾಸ್ತವವಂತೂ ಆಗಿದೆ. ಎಂದ ಮೇಲೆ ಈ ಪ್ರಶ್ನೆ ಮಹಿಳಾ ಸಮುದಾಯದ ಅಸ್ತಿತ್ವದ ಪ್ರಶ್ನೆಯೂ ಹೌದು. ಜಗತ್ತಿನ ಬಹುತೇಕ ಸಮುದಾಯಗಳಲ್ಲಿ ಹೆಣ್ಣು ಸಮುದಾಯದಿಂದ ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲ ಒಂದು ವೇಳೆ ಉಳಿದರೂ ಸ್ತ್ರೀಜಾತಿಯನ್ನು ಪ್ರತ್ಯೇಕಿಸಿರುವುದು ಅಧೀನ ದರ್ಜೆಯನ್ನು ನಿಗದಿಪಡಿಸುವ ಹುನ್ನಾರವಾಗಿಯೇ ಕಾರ್ಯನಿರತವಾಗಿವೆ. ಹೆಣ್ಣಿಗೇನೂ ತನ್ನ ಪಾಡು ತನಗೆ ಎಂಬಂತೆ ಪುರುಷನಿಂದ ವಿಮೋಚನೆಯೇನೂ ದೊರೆಯುವುದಿಲ್ಲ.

ಪಿತೃಪ್ರಧಾನ ಸಮಾಜವು ರೂಢಿಸಿಕೊಂಡ ಈ ಕ್ರಮವನ್ನು ಮುಂದುವರೆಸಿ ಸ್ತ್ರೀಜಾತಿಯನ್ನು ಒಂದಾಗಿ ಪರಿಭಾವಿಸಿ ಸ್ತ್ರೀ ವಾದವನ್ನು ನಿರ್ವಚಿಸುವ ಕ್ರಮವು ಅತ್ಯಂತ ಪ್ರಸಿದ್ಧವಾದುದೇ ಆಗಿದೆ. ಸ್ತ್ರೀಜಾತಿಯಲ್ಲಿ ಒಂದಾಗಬೇಕು ಎಂಬ ನೆಲೆಯಲ್ಲಿ ಜಾತಿ ಪರಿಕಲ್ಪನೆಯನ್ನೊಂದು ಗುಣಾತ್ಮಕ ಪರಿಕಲ್ಪನೆಯಾಗಿ ಬಳಸಲಾಗಿದೆ. ಸ್ತ್ರೀವಾದದೊಳಗೆ ಭಿನ್ನತೆಯ ಪ್ರಶ್ನೆ ತಲೆದೋರುವವರೆಗೆ ಈ ಪರಿಕಲ್ಪನೆ ಅಬಾಧಿತವಾಗಿ

ಬಳಕೆಗೊಂಡದ್ದೂ ಇದೆ. ಜಾತಿಯೆಂಬುದನ್ನು ಸಮಾನ ಗುಣಲಕ್ಷಣಗಳ ಸಮೂಹವನ್ನು ನಿರ್ವಚಿಸುವ, ಬೆಸೆಯುವ ಪರಿಭಾಷೆಯಾಗಿ ಗುರುತಿಸಿಕೊಂಡು ಜೈವಿಕವಾಗಿ ಪುರುಷರಿಗಿಂತ ಭಿನ್ನವಾದ ಹಾಗೂ ಸ್ತ್ರೀಯರಿಗೆಲ್ಲ ಸಮಾನವಾದ ಗುಣಲಕ್ಷಣವನ್ನು ಹೊಂದಿರುವ ಸ್ತ್ರೀ ಸಮೂಹವು ಒಂದು ಜಾತಿಯಾಗಿ ರೂಪುಗೊಂಡು ಸಮಾನತೆಗಾಗಿ ರಾಜಕೀಯ ಹೋರಾಟವೊಂದನ್ನು ಜಾಗತಿಕ ಮಟ್ಟದಲ್ಲಿ ರೂಪಿಸಲು ಸಾಧ್ಯ ಎಂಬ ನಂಬಿಕೆಯ ಮೇಲೆ ಸ್ತ್ರೀಯನ್ನೊಂದು ಏಕೀಕೃತ ಘಟಕವಾಗಿ ಭಾವಿಸುವ ಕ್ರಮವು ಆಧುನಿಕ ಚಿಂತನೆಯ ಭಾಗವಾಗಿತ್ತು. ಈ ಚಿಂತನಾಕ್ರಮ ಮಹಿಳೆಯು ಒಂದು ಜಾತಿಯೆಂಬುದಾಗಿ ಸ್ವೀಕರಿಸುವ ಮೂಲಕ ಜಾತಿ ಮತ್ತು ಮಹಿಳೆ ಪ್ರಶ್ನೆಯನ್ನು ಒಗ್ಗೂಡಿಸಲೆತ್ನಿಸಿತು.

ಆದರೆ ಆಧುನಿಕೋತ್ತರ ಚಿಂತನೆಯ ಸಂದರ್ಭವು ಜಾಗತಿಕ ಮಟ್ಟದಲ್ಲಿ ಸ್ತ್ರೀಯನ್ನೊಂದು ಜಾತಿಯಾಗಿ ಪರಿಭಾವಿಸುವುದರಲ್ಲಿ ಭಾರತೀಯ ನೆಲೆಯಲ್ಲಿದ್ದರೂ ಅದು ಸಾಧ್ಯವಾಗುವುದೇ ಎಂಬ ಪ್ರಶ್ನೆಯನ್ನು ಮುಂದಿಟ್ಟಿತು. 'ಸ್ತ್ರೀಜಾತಿ' ಎಂಬ ಪರಿಕಲ್ಪನೆಯಿಂದಾಗಿ ಪುರುಷ ಜಾತಿಯನ್ನು ನಿರ್ವಚನೆಗೊಳ್ಳುವುದರಲ್ಲಿ ಯಶಸ್ವಿಯಾದರೂ. ಅದು ಸ್ತ್ರೀಯನ್ನೊಂದು ಏಕೀಕೃತ ಘಟಕವಾಗಿ ನಿರ್ವಚಿಸಿಕೊಡುವುದರಲ್ಲಿ ಸೋಲುತ್ತದೆ ಎಂಬುದು ಇಲ್ಲಿನ ಮಹತ್ವದ ಪ್ರಶ್ನೆ. ಏಕೆಂದರೆ ಮಹಿಳೆ ಎಂಬುದು ಕೇವಲ ಜೈವಿಕ ಘಟಕವಲ್ಲ. ಅದೊಂದು ಸಾಮಾಜಿಕ, ರಾಜಕೀಯ ಘಟಕವಾಗಿದೆ. ಇದು ಹಲವು ಸಾಮಾಜಿಕ ಸಂಸ್ಥೆಗಳ ಪ್ರಭಾವ ಒತ್ತಡಗಳಿಗೆ ಒಳಗಾಗುತ್ತಲೇ ರೂಪುಗೊಂಡಿದೆ. ಹಾಗೂ ಈ ಎಲ್ಲಾ ಸಂಸ್ಥೆಗಳ ಪ್ರಭಾವದಿಂದ ಸ್ತ್ರೀ ಮುಕ್ತವಾಗಿಲ್ಲ ಅಥವಾ ಅದರ ಪ್ರಭಾವ ಸ್ತ್ರೀಯರ ಮೇಲೆ ಏಕ ಪ್ರಕಾರವಾಗಿ ಆದುದಲ್ಲ ಅದರಲ್ಲೂ ಭಾರತೀಯ ಸಂದರ್ಭದಲ್ಲಿ ಗಮನಿಸಲೇಬೇಕಾದ ಜಾತಿ ಎಂಬ ಅಮೂರ್ತ ಸಂಸ್ಥೆ ಇದೆ. ಇಂತಹ ಜಾತಿವ್ಯವಸ್ಥೆಯ ಪ್ರಭಾವದಿಂದ ಪಿತೃಪ್ರಧಾನತೆಯೊಳಗಿನ ಎಲ್ಲಾ ಮಹಿಳೆಯರು ಒಂದೇ ಬಗೆಯ ಶೋಷಣೆಯ ಅನುಭವವನ್ನು ಹೊಂದಿರುವುದಿಲ್ಲ. ಬಹುರೂಪದಲ್ಲಿ ಅಡಗಿವೆ. ಜೊತೆಗೆ ಅವು ಹಲವು ಸಾಮಾಜಿಕ, ರಾಜಕೀಯ ಸಂಗತಿಗಳನ್ನು ಒಳಗೊಂಡಿವೆ. ಅಂದರೆ ಸ್ತ್ರೀಯನ್ನೊಂದು ಜಾತಿಯಾಗಿ ಪರಿಭಾವಿಸುವುದು 'ಮಿಥ್' ಆಗಿರುತ್ತದೆ. ಈ ಅಂಶವನ್ನು ಗಮನಿಸಿಯೇ ಭಾರತೀಯ ಚಿಂತನಾಕ್ರಮ 1980ರ ನಂತರದಲ್ಲಿ ಮಹಿಳೆಯನ್ನೊಂದು ಜಾತಿಯಾಗಿ ಪರಿಭಾವಿಸುವುದಕ್ಕೆ ಬದಲಾಗಿ ಮಹಿಳೆ ಮತ್ತು ಜಾತಿ ಎಂಬ ನೆಲೆಯ ಚಿಂತನೆಯತ್ತ ಆಸಕ್ತವಾಗಿದೆ.

ಆದರೆ ಅಂಬೇಡ್ಕರ್ ಚಿಂತನೆ ವಿವಾಹ ಬಗ್ಗೆ ಪ್ರಶ್ನೆ ಎತ್ತದೆ ಜಾತಿವ್ಯವಸ್ಥೆಗೆ ಕಾರಣವಾಗಿರುವ ಸ್ವಜಾತಿ ವಿವಾಹದ ಕುರಿತು ವಿಶ್ಲೇಷಣೆ ಮಾಡುತ್ತ ಮಹಿಳೆಯರ ಸಮಸ್ಯೆಗಳನ್ನು ಏಕರೂಪಗೊಳಿಸಿ ಪರಿಹರಿಸಲು ಪ್ರಯತ್ನಿಸಿತು. ಅಂದರೆ ಎಲ್ಲ ಮಹಿಳೆಯರ ಸಮಸ್ಯೆಯನ್ನ ಬ್ರಾಹ್ಮಣ ಪಿತೃಪ್ರಧಾನತೆಯೊಂದಿಗೆ ಮುಖಾ–ಮುಖಿಯಾಗಿಸಿತು. ಹಾಗಾಗಿ ಭಾರತೀಯ ಮಹಿಳೆಯ ಆಯಾ ಜಾತಿ ಪಿತೃಪ್ರಧಾನತೆಯೊಂದಿಗೆ ತಾತ್ವಿಕವಾಗಿ ಗುರುತಿಸಿಕೊಂಡರೂ ವಿಸ್ತಾರಗೊಳ್ಳಲಿಲ್ಲ. ಈ ಮೂಲಕ ಅದು ಅಂತರ್ ಜಾತಿ ವಿವಾಹ ಎಂಬ ಪರಿಹಾರಕ್ರಮ ಜಾತಿಯಲ್ಲಿ ಮಹಿಳೆಯರ ಅನುಭವಿಸುವ ಶೋಷಣೆಗಳನ್ನು ಕಡಿತಗೊಳಿಸಿ ವಿವಾಹ ಸಂಸ್ಥೆಯೊಂದಿಗೆ ಸೇರಿಕೊಳ್ಳಲು ನೆರವಾಗುತ್ತದೆ.

ಒಟ್ಟಿನಲ್ಲಿ ಮಹಿಳೆ ಮತ್ತು ಜಾತಿ ಸಂಬಂಧಿ ವಿಷಯಗಳು ವಸಾಹತು ಸಂದರ್ಭ ಭಿನ್ನವಾದ ನೆಲೆಯಲ್ಲಿ ಪ್ರಸ್ತುತಗೊಂಡರು. ವಸಾಹತು ಚಿಂತನಾಕ್ರಮ ಜಾತಿ ಸಮಸ್ಯೆಯ ಕಡಿತಗೊಳಿಸಿ ಮಹಿಳಾ ಪ್ರಶ್ನೆ ಮಹಿಳಾ ಸಮಸ್ಯೆಯಾಗಿ ಏಕರೂಪಿ ನೆಲೆಯನ್ನು ಪ್ರಸ್ತುತ ಪಡಿಸಿತು. ಆದರೆ ಅವುಗಳನ್ನು ಪಿತೃಪ್ರಧಾನತೆಯೊಂದಿಗೆ ಮುಖಾಮುಖಿಯಾಗಿಸದೇ ವಸಾಹತು ಸಂದರ್ಭಕ್ಕೆ ಮಾತ್ರ ಎತ್ತಿದ ಪ್ರಶ್ನೆಗಳಾಗಿದ್ದವು. ಹಾಗೆಯೇ ವಸಾಹತು ಚಿಂತನಾಕ್ರಮಗಳ ಉತ್ಪನ್ನಗಳಾದ ದೇಶಿ ಸುಧಾರಣಾವಾದಿಗಳಲ್ಲಿ ಕೆಲವು ಚಿಂತನೆಗಳು ಸ್ತ್ರೀ ಸುಧಾರಣೆಯಲ್ಲಿ ಜಾತಿ ಪ್ರಶ್ನೆ ಅಲಕ್ಷ್ಯವಾಗಿಸಿತು. ಅಂದರೆ ಮಹಿಳೆಯರು ಮತ್ತು ಜಾತಿಗಳು ಕುರಿತ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಪರಿಭಾವಿಸಿದವು. ಬ್ರಾಹ್ಮಣ ಸ್ತ್ರೀ ಅನುಭವಿಸುತ್ತಿರುವ ಸತಿಪದ್ಧತಿಯಂತಹ ಸಮಸ್ಯೆಗಳನ್ನು ಬ್ರಾಹ್ಮಣ ಸಮಾಜದ ಆಂತರಿಕ ಸಮಸ್ಯೆಯಾಗಿಯೇ ಪ್ರಸ್ತುತ ಪಡೆಯಿತು. ಹಾಗೆಯೇ ಮಹಿಳೆಯರು ಮತ್ತು ಜಾತಿಗಳನ್ನು ಪ್ರಶ್ನೆಗಳನ್ನು ಕುರಿತು ಒಗ್ಗೂಡಿಸುವ ಪ್ರಯತ್ನ ನಡೆದವು. ಅಂದರೆ ಮಹಿಳೆಯ ಸಮಸ್ಯೆ ಸಂದರ್ಭದಲ್ಲಿ ಜಾತಿವ್ಯವಸ್ಥೆ ಮಹತ್ವದ ಪಾತ್ರವಹಿಸುತ್ತದೆ. ಉದಾಹರಣೆಗೆ ಮಹಿಳೆಯರು ವೈಧವ್ಯ ಎಂಬ ಸಾಮಾಜಿಕ ನಿಯಮಗಳನ್ನು ಮುರಿಯುವ ಮೂಲಕವೇ ಆಯಾ ಸಮುದಾಯಕ್ಕೆ ಮಹಿಳೆ ಅಪವಿತ್ರಳೆನಿಸಿ, ಅಸ್ಪೃಶ್ಯಳಾಗುತ್ತಾಳೆ. ಆದ್ದರಿಂದ ಅಸ್ಪೃಶ್ಯತೆಯು ಅಪವಿತ್ರತೆಯನ್ನು, ಅಪವಿತ್ರತೆಯು ಅಸ್ಪೃಶ್ಯತೆಯನ್ನು ನಿಷ್ಪನ್ನಗೊಳಿಸುವ ಮೂಲಕವೇ ಜಾತಿಶ್ರೇಣೀಕರಣದ ಎಲ್ಲ ಹಂತಗಳು ಸ್ತ್ರೀಯನ್ನು ಶೋಷಿಸುತ್ತದೆ. ಅಂಬೇಡ್ಕರ್ ಅವರು ಮಹಿಳಾ ಸಮಸ್ಯೆ ಯನ್ನು ಜಾತಿ ಒಳಗೆ ಗ್ರಹಿಸಿದರು. ಅಲ್ಲದೆ ಅವು ಏಕರೂಪಿಯಾದವು ಜಾತಿ ನಿರ್ಮೂಲನೆಯಿಂದ ಮಹಿಳಾ ಸಮಸ್ಯೆಯನ್ನು ಬಗೆಹರಿಸ ಬಹುದು. ಈ ಮೂಲಕ ಅಂಬೇಡ್ಕರ್ ಬ್ರಾಹ್ಮಣ ಪಿತೃಪ್ರಧಾನತೆ ಒಳಗೆ ಇಟ್ಟು ಅಸ್ಪೃಶ್ಯತೆಯನ್ನು ಹಾಗೂ ಮಹಿಳಾ ಸಮಸ್ಯೆಗಳೆರಡನ್ನು ಬಿಡಿಸಲು ಪ್ರಯತ್ನಿಸಿದರು.

ಉಲ್ಲೇಖ

*1. ಡಾ.ಬಾ.ಸಾ.ಅಂ.ಬ.ಭಾ: 1990: ಸಂ–1: ಪು–09,10

*2. ಅದೇ, ಪು–10

*3. ಅದೇ, ಪು–11

*4. ಅದೇ, ಪು–8,9

*5. ಅದೇ, ಪು–11,14

*6. ಅದೇ, ಪು–12

*7. ಅದೇ, ಪು–13,15

*8. ಅದೇ, ಪು–16

*9. ಅದೇ, ಪು–13,14

*10. ಅದೇ, ಪು–16,21


*11. ಅರವಿಂದ ಮಾಲಗತ್ತಿ; 1999, ಡಾ.ಅಂಬೇಡ್ಕರ್ ವಿಚಾರಧಾರೆ; ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು, ಪು–146

*12. ಸಿಮೋನ್ ದ ಬೋವಾ; 2007; ದ ಸೆಕೆಂಡ್ ಸೆಕ್ಸ್; ಡಾ.ಎಚ್.ಎಸ್.ಶ್ರೀಮತಿ; ಅಧ್ಯಯನ ಮಂಡಲ, ಬೆಂಗಳೂರು, ಪು–44

*13. ಅದೇ, ಪು–57

❑

ನಮ್ಮ ಮಾನಸಕ್ಕೆ ಲೇಖನ, ವಿಮರ್ಶೆ, ಕವನಗಳನ್ನು ಇ-ಮೇಲ್ ಮೂಲಕ ಕಳುಹಿಸುವವರು ನುಡಿ ಲಿಪಿಯಲ್ಲಿ ಮಾತ್ರ ಕಳುಹಿಸಿ.



ಒಳಗಣ ರಣರಂಗ ಹೊರಗಣ ಸಿಂಗಾರ

■ **ಸಬಿತಾ ಬನ್ನಾಡಿ**


ಇದು ಅಲ್ಲಮನ ವಚನದ ಒಂದು ಸಾಲು. ಸಂಸ್ಕೃತಿ, ಭಾಷೆ ಮತ್ತು ಸ್ತ್ರೀ ಸಂಬಂಧಿ ವಿಚಾರಗಳು ಇಂದು ಎದುರಿಸುತ್ತಿರುವ ಬಿಕ್ಕಟ್ಟನ್ನು ಕೂಡ ಮೇಲಿನ ಮಾತುಗಳು ಪ್ರತಿನಿಧಿಸುತ್ತವೆ. ಮೇಲ್ನೋಟಕ್ಕೆ ಬಹಳ ಮುಂದೆ ಸಾಗಿದಂತೆ ಕಾಣುವ ಹಲವು ವಿಚಾರಗಳು ಆಂತರಿಕವಾಗಿ ಜಡ ಸ್ಥಿತಿಯಲ್ಲೇ ಉಳಿದು ಬಿಟ್ಟಿವೆ. ನಮ್ಮ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ಸುಧಾರಣಾವಾದದ ಅಂಗವಾಗಿ ಕಾಣಿಸಿಕೊಂಡ ಹಲವು ವಿಚಾರಗಳು ಇಂದು ಹಿನ್ನಡೆ ಕಾಣುತ್ತಿವೆ ಎಂಬ ಭಾವ ನಮ್ಮನ್ನು ಆವರಿಸಿದೆಯಾದರೂ, ಇಲ್ಲಿ ಕೆಲವು ಪ್ರಶ್ನೆಗಳು ಮುಂದಕ್ಕೆ ಬರುತ್ತವೆ. ರಾಷ್ಟ್ರೀಯತೆಯ ಸುಧಾರಣಾ ನೆಲೆಗಳು ಹಿನ್ನಡೆ ಕಾಣುತ್ತಿವೆ ಎಂದರೆ ಅವು ಒಂದು ಕಾಲದಲ್ಲಿ ಮುನ್ನಡೆ ಸಾಧಿಸಿದ್ದವು ಎಂಬ ಅನಿಸಿಕೆಯೊಂದು ನಮ್ಮೊಳಗೆ ಇದೆ ಎಂದಂತಾಯ್ತು. ಇದು ನಿಜವೇ? ಇವರು ಮುಂದೆ ತಂದ ಪ್ರಗತಿಪರ ನಿಲುವುಗಳು ಯಾವುವು? ಇವು ತಲುಪಿದ್ದು ಯಾರನ್ನು? ಮತ್ತು ಹೇಗೆ? ಎಂಬ ಪ್ರಶ್ನೆ ಹಾಕಿಕೊಂಡರೆ, ಅತ್ಯಂತ ಸೀಮಿತ ಸಂಖ್ಯೆಯಲ್ಲಿದ್ದ ಅಕ್ಷರಸ್ಥರನ್ನು. ಅದು ಆಗ ತಾನೇ ಹುಟ್ಟಿಕೊಂಡ ನಗರ ನಿರ್ಮಿತ ನವ ಮಧ್ಯಮ ವರ್ಗದವರಲ್ಲಿ 'ಸಭ್ಯ' ಸಮಾಜ, ಸಂಸ್ಕೃತಿಯ ಕಲ್ಪನೆಯನ್ನು ಹುಟ್ಟು ಹಾಕಿತು ನಿಜ. ಆದರೆ, ಕಲೆ, ಸಾಹಿತ್ಯ, ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಬಿಂಬಿತವಾದ ಈ ಕಲ್ಪನೆಗಳು ಬಹುಸಂಖ್ಯಾತ ಅನಕ್ಷರಸ್ಥ, ಗ್ರಾಮೀಣ, ಕೆಳಜಾತಿ ಜನರ ಸಂಸ್ಕೃತಿಯ ಮೇಲೆ ಕೆಲವು ಅಡ್ಡ ಪರಿಣಾಮಗಳನ್ನೂ ಬೀರಿದವು ಎನ್ನುವುದನ್ನೀಗ ಹಿಂತಿರುಗಿ ನೋಡಬೇಕಾಗುತ್ತದೆ. ಕೆಲವು ಸ್ಪಷ್ಟೀಕರಣಗಳನ್ನು ಗಮನಿಸುವುದಾದರೆ, ವಿಧವಾ ವಿವಾಹದ ಪರ ಚಿಂತನೆಗಳು ಮಾಡಿದ ಪರಿಣಾಮಗಳನ್ನು ಗಮನಿಸಬಹುದು. ಇದೊಂದು ಅಲೆಯ ರೀತಿಯಲ್ಲಿ ಮಂಡಿತವಾದ ವಿಚಾರವಾಗಿತ್ತು. ಹತ್ತು ಹಲವು ಕತೆ, ಕಾದಂಬರಿಗಳು. ಅನೇಕ ಸಿನೆಮಾಗಳು ಈ ವಿಚಾರವನ್ನು ಮುನ್ನೆಲೆಗೆ ತಂದವು. ಇಷ್ಟೊಂದು ಉತ್ಸಾಹದಿಂದ ಮಂಡಿತವಾದ ಈ ವಿಚಾರವನ್ನು ನಮ್ಮದೇ ಸಮಾಜದ ಬಹುಸಂಖ್ಯಾತರ ನೆಲೆಯಿಂದ ಸ್ವೀಕರಿಸಿದ್ದರೆ ಆಗ ಇದು ಬೇರೆಯೇ ರೀತಿಯಲ್ಲಿ ನಮ್ಮ ಮುಂದಿರುತ್ತಿತ್ತು. ಆದರೆ ಇಂಗ್ಲಿಷ್ ಶಿಕ್ಷಣದ ಮೂಲಕ ಸಮಾಜದ ಸಮಸ್ಯೆಗಳನ್ನು ಗ್ರಹಿಸುವ ಕ್ರಮವನ್ನು ಆವಾಹಿಸಿಕೊಂಡ ಕಾರಣದಿಂದಾಗಿ ಇದೊಂದು ಕಾಗದದ ಮೇಲಿನ ಆದರ್ಶವನ್ನು ಸ್ಥಾಪಿಸುವುದಕ್ಕಷ್ಟೇ ಸೀಮಿತಗೊಂಡಿತು. ಅಂದರೆ, ಸಮಾಜದ ಸೀಮಿತ ವರ್ಗವಾದ ಮೇಲ್ಜಾತಿಯ ಜನರ ಸಮಸ್ಯೆಯಾದ ವಿಧವಾ ವಿವಾಹಕ್ಕೆ ಪರಿಹಾರವನ್ನು ಇದೇ ಸಮಾಜದ ಇತರ ಜನಾಂಗದವರು ಹೇಗೆ ನಿರ್ವಹಿಸಿ ಕೊಂಡಿದ್ದಾರೆ ಎಂಬುದನ್ನು ಅರಿತು ಅದರಂತೆ ನಾವೂ ನಡೆದುಕೊಳ್ಳಬೇಕು ಎಂಬ ನೆಲೆಯಿಂದ ಪರಿಹಾರ ಕಂಡುಕೊಳ್ಳಬೇಕಿತ್ತು. ಯಾಕೆಂದರೆ ಅವರಿಗೆ ಮರುವಿವಾಹ, ಕೂಡಿಕೆ ಇತ್ಯಾದಿಗಳು ಬಹಳ ಸಹಜ ವಿದ್ಯಮಾನಗಳಾಗಿದ್ದವು. ಸತೀ ಪದ್ಧತಿಗೆ ಕೂಡ ಇಲ್ಲೇ ಉತ್ತರಗಳಿದ್ದವು. ಆದರೆ ನಾವು ಮಾಡಿದ್ದಾದರೂ ಏನು? ಈ ಸಮಸ್ಯೆಗಳನ್ನು ಭಾರತದ ಎಲ್ಲ ಸ್ತ್ರೀಯರ ಸಮಸ್ಯೆ ಎಂಬಂತೆ ನಾವೇ ಬಿಂಬಿಸಿ ಆ ಮೇಲೆ ಅದರ ಪರಿಹಾರಕ್ಕಾಗಿ ಪ್ರಚಾರ ಕಾರ್ಯ ಆರಂಭಿಸಿದೆವು. ಇದರಿಂದ ಆದದ್ದೇನು? ನವ ಶಿಕ್ಷಿತರಲ್ಲಿ ಈ ಕುರಿತ ಉಮೇದನ್ನು ನಿರ್ಮಾಣ ಮಾಡಿದ್ದು ನಿಜ. ಅದೇ ಹೊತ್ತಿಗೆ ಸಾಹಿತ್ಯ, ಸಿನಿಮಾಗಳ ಮೂಲಕ ವೈಭವೀಕರಿಸಿದ ವಿಧವೆಯರ ಚಿತ್ರಣ ಕ್ರಮೇಣ ಎಲ್ಲರ ಮನದೊಳಗೂ ಪ್ರವೇಶ ಪಡೆಯ ತೊಡಗಿತು. ಹಿಂದಿ ಸಿನಿಮಾಗಳಲ್ಲಿ ತೋರಿಸುವ ಬಿಳಿಸೀರೆ ಒಂದು ಸಂಕೇತವೇ ಆಗಿ ಹೋಗಿ ಅದರ ಅನುಕರಣೆ ಕಾಣಲಾರಂಭಿಸಿತು. ತಳಜಾತಿಯ ಜನರ ಸಹಜ ಮರುವಿವಾಹಗಳು ಅವರಲ್ಲಿ ತಪ್ಪು ಕಲ್ಪನೆಗಳನ್ನು ಹುಟ್ಟು ಹಾಕತೊಡಗಿದವು. ಒಂದೆಡೆ ಮರುವಿವಾಹವನ್ನು ಪ್ರಚಾರಕ್ಕೆ ತಂದರೆ ಇನ್ನೊಂದೆಡೆ ಇರುವ ಮರುವಿವಾಹ ಪದ್ಧತಿಗಳು ಮೂಲೆ ಗುಂಪಾದವು.

ಬ್ರಾಹ್ಮಣೇತರರು ಅದುವರೆಗೂ ಇಲ್ಲದ ವಿಧವೆಯ ಚಿತ್ರ – ಅವಳ ವೇಷಭೂಷಣಗಳನ್ನೂ ಒಳಗೊಂಡುವನ್ನು ಆವಾಹಿಸಿಕೊಳ್ಳುವುದನ್ನು ಕಾಣಬಹುದು. ಅದರೊಂದಿಗೆ

(ಸುಧಾರಣಾವಾದ, ಸಮಾಜವಾದ ಮೊದಲಾದವುಗಳು ಮಂಡಿಸಿದ ಪ್ರಗತಿಪರ ಆಶಯಗಳು ಇಂದು ಏನಾದವು? ಇವುಗಳು ಜನಮಾನಸದಲ್ಲಿ ನೆಲೆ ನಿಲ್ಲದೇ ಇರಲು – ಆ ವಾದಗಳೊಳಗೇ ಶಕ್ತಿ ಇಲ್ಲವೇ? ಎಲ್ಲಿ ತಪ್ಪಿ ಬಿದ್ದಿದ್ದೇವೆ? ಪರಿಹಾರ ಏನಾದರೂ ಅಥವಾ ಪರ್ಯಾಯ ಏನಾದರೂ ಸೂಚಿಸಬಹುದೇ? ಎಂಬ ಟಿಪ್ಪಣಿಯೊಂದಿಗೆ ಸಂಸ್ಕೃತಿ, ಸ್ತ್ರೀ ಮತ್ತು ಭಾಷೆಯ ಸಮಾಜವಾದಿ ನಿರ್ವಚನೆಯ ಒಂದು ಮರುನೋಟ ಮಾಡುವಂತೆ ಲೋಹಿಯಾ ಪ್ರತಿಷ್ಠಾನವು ಸೂಚಿಸಿತ್ತು. ಆ ನಂಟಿನ ಬರಹ ಇದಾಗಿದೆ.)

ಹೆಚ್ಚು ಕಡಿಮೆ ಎಲ್ಲ ಸಮುದಾಯಗಳಲ್ಲೂ ಸಂಸ್ಕೃತಿ ರಕ್ಷಕಿಯ ಪಾತ್ರವನ್ನು ಹೆಣ್ಣು ಹೇರಿಕೊಳ್ಳುವುದು, ತನ್ನ ಸ್ಥಳೀಯ ಸಂಸ್ಕೃತಿ, ಭಾಷೆಯ ಕುರಿತು ಕೀಳರಿಮೆಗೆ ಒಳಗಾಗುವುದು, ನಗರ ಜೀವನವೇ ಶ್ರೇಷ್ಠವಾದುದು ಎಂಬ ಭಾವಕ್ಕೆ ಒಳಗಾಗುವುದು, ಹೀಗೆ – ರಾಷ್ಟ್ರೀಯ ಚಳವಳಿಯ ಅಡ್ಡ ಪರಿಣಾಮಗಳು ಬೇರೆ, ಬೇರೆ ರೀತಿಯಲ್ಲಿ ಆಗಿವೆ.

ಈಗ ಇಂದಿನ ಚಿತ್ರಣಕ್ಕೆ ಬಂದರೆ, ಇಲ್ಲೊಂದು ಗೊಂದಲದ ವಾತಾವರಣವಿದೆ. ಒಂದೆಡೆ ಊಳಿಗಮಾನ್ಯ ಮೌಲ್ಯಗಳು ಆಧುನಿಕ ವೇಷ ತೊಟ್ಟುಕೊಂಡು ಆಳ್ವಿಕೆ ನಡೆಸುತ್ತಿದ್ದರೆ ಇನ್ನೊಂದೆಡೆ ಈ ಕಾಲ ಬಿಡುಗಡೆಯ ಕಾಲ ಎಂಬ ಕೃತಜ್ಞತಾ ಭಾವವೂ ಕಾಣುತ್ತದೆ. ಸಾರ್ವಜನಿಕ ವಲಯದ ಅವಕಾಶಗಳಲ್ಲಿ ಜಾತಿಯ ನಿಯಮಗಳ ಬೇರುಗಳು ಸಡಿಲಗೊಂಡು ವರ್ಗದ ಬೇರುಗಳು ಬಿಗಿಯಾಗುತ್ತಿವೆ. ಜಾತಿ–ವರ್ಗಗಳೆರಡೂ ಲಿಂಗ ಭೇದವನ್ನು ಪೋಷಿಸಿಕೊಂಡು ಬರುವಂಥವೇ. ಈಗ ಅರವತ್ತು ವರ್ಷ ದಾಟಿದ ಹೆಂಗಸರು ನಮ್ಮನ್ನು ನೋಡಿ, ನಿಮ್ಮ ಕಾಲವೇ ಒಳ್ಳೆಯ ಕಾಲ ಮಗಾ ಅನ್ನುತ್ತಿದ್ದಾರೆ. ಅವರಿಗೆ ನಾವು ಎಲ್ಲವನ್ನು ಸಾಧಿಸಿದವರಾಗಿ ಕಾಣುತ್ತಿದ್ದೇವೆ. ಆದರೆ ನಮ್ಮ ಕಾಲದವರು ಯಾವ ಬದಲಾವಣೆಯೂ ಇಲ್ಲವಲ್ಲಾ ಎಂದು ಪರಿತಪಿಸುತ್ತಿದ್ದೇವೆ. ಅಂದರೆ, ಹೆಣ್ಣು ಇಂದಿಗೂ ಭೋಗದ ಒಂದು ಅಂಗವಾಗಿಯೇ ಅರ್ಥೈಸಲ್ಪಡುತ್ತಿದ್ದಾಳೆ ಎಂಬ ಅರಿವು ನಮ್ಮನ್ನು ಚಿಂತಿತರನ್ನಾಗಿಸುತ್ತಿದೆ. ಉದಾಹರಣೆಗೆ, ಹೆಣ್ಣಿನ ಉಡುಗೆ ತೊಡುಗೆಯ ಕುರಿತಾಗಿ ಹೆಣ್ಣನ್ನೇ ಟೀಕಿಸುವವರು ಆಕೆಯ ಈ ನಿಲುವಿನ ಮೂಲವನ್ನು ಹುಡುಕುವ ಗೋಜಿಗೇ ಹೋಗುವುದಿಲ್ಲ. ಅದರ ಮೂಲ ಎಂದರೆ – ಹೆಣ್ಣು – ಭೋಗದ ಅಂಗವಾಗುವುದನ್ನು ಹೆಣ್ಣೂ ಒಪ್ಪಿಕೊಳ್ಳುವಂತೆ ಮಾಡುವುದೇ ಆಗಿದೆ. ಹೀಗಾಗಿ ತನ್ನ ದೇಹವನ್ನು 'ಬಂಡವಾಳ'ವಾಗಿಸಿಕೊಳ್ಳಲು ಹಿಂಜರಿಕೆ ಇಲ್ಲದ, ಮಾರುಕಟ್ಟೆ ನಿಯಂತ್ರಿತ ಯೋಚನೆಗಳಿಗೆ ಹೆಣ್ಣು ಮತ್ತು ಗಂಡು ಇಬ್ಬರೂ ಒಪ್ಪಿಗೆ ಕೊಡುವ ಸ್ಥಿತಿಯಲ್ಲಿ ಇಂದಿನ ಚಿಂತನೆಗಳಿವೆ. ಈ ಚಿಂತನೆಗಳೇ ಇಂದಿನ ಸಂಸ್ಕೃತಿಗೆ ವ್ಯಾಖ್ಯಾನ ಬರೆಯುತ್ತವೆ. ಈ ಚಿಂತನೆಗಳೇ ತಮ್ಮ ಮಾತುಗಳಲ್ಲಿ ಬಹಿರಂಗವಾಗುತ್ತವೆ. ಹೀಗಾಗಿ ಇವತ್ತು ಮೀಡಿಯಾಗಳಲ್ಲಿ ಹೆಣ್ಣನ್ನು ಹೊಗಳಲು 'ಸೆಕ್ಸಿ' ಎಂಬ ಪದವು ಹೆಚ್ಚು ಮುಂಚೂಣಿಗೆ ಬರುತ್ತಿದೆ. ಹೀಗೆ ಹೊಗಳಿಸಿಕೊಂಡ ಹೆಂಗಸರು ಸಂತೋಷದಿಂದ ಥಾಂಕ್ಯೂ ಅನ್ನುವುದನ್ನೂ ನಾವು ನೋಡುತ್ತಿದ್ದೇವೆ. ಅಂಬರೀಷ್‌ನಂತಹ ನಟರು ನಿರ್ಭಿಡೆಯಿಂದ 'ಹೆಣ್ಣಿಗೆ ಹೊಡೆತ' ಸಹಜ ಅನ್ನುತ್ತಾರೆ. ಅತ್ಯಂತ ಉನ್ನತ ಹುದ್ದೆಯಲ್ಲಿರುವ ಮಹಿಳೆಯರೂ ಸೆಕ್ಸುಅಲ್ ಹೆರಾಸ್‌ಮೆಂಟ್‌ನಿಂದ ನರಳಿ ಕಾನೂನು ಹೋರಾಟ ಮಾಡಿಯೂ ವಿಫಲವಾಗಿ ಆತ್ಮಹತ್ಯೆಯ ದಾರಿ ಹಿಡಿಯುವ ವರದಿಯನ್ನೂ ನಾವು ನೋಡುತ್ತಿದ್ದೇವೆ. ಇದನ್ನೆಲ್ಲಾ ನೋಡುವಾಗ ಹೆಣ್ಣಿನ ಪರಿಸ್ಥಿತಿ ಸುಧಾರಿಸುವ ಬದಲಿಗೆ ಬಿಗಡಾಯಿಸಿದೆ ಅನ್ನಿಸುತ್ತದೆ. ಆದರೆ ಅದೇ ಸಮಯದಲ್ಲಿ ಕೆಲವು ಅವಕಾಶಗಳು ಹೆಣ್ಣಿಗೆ, ದಮನಿತರಿಗೆ, ಬಡವರಿಗೆ ಸಿಗುತ್ತಿರುವುದೂ ನಿಜ. ಹಿಂದಿನಂತೆ ನಿರ್ದಿಷ್ಟ ಸ್ಥಳದಲ್ಲೇ ಬದುಕಬೇಕಾದ ಒತ್ತಡಗಳನ್ನು ಕಳೆದುಕೊಂಡು, ದಮನದ ಹಳೆಯ ಸರಪಣಿಗಳಿಂದ ಬಿಡಿಸಿಕೊಂಡು ಹಂಗಿಲ್ಲದ ಭಾವನೆಯನ್ನು ಅವರು ಅನುಭವಿಸುತ್ತಿದ್ದಾರೆ. ಆದರೆ ಇನ್ನೊಂದೆಡೆ ಹೊಸ ನಮೂನೆಯ ನಿಯಂತ್ರಣಗಳಿಗೆ ಒಳಗಾಗುತ್ತಿದ್ದಾರೆ. ಇಂತಹ ಒಂದು ಕಲಸಿದ ಸ್ಥಿತಿಯ ನಿರ್ಮಾಣದ ಹಿಂದೆ ನಮಗಿಲ್ಲದ ಒಂದು ಖಚಿತವಾದ ರಾಜಕೀಯ, ಆರ್ಥಿಕ ಚಿಂತನೆಯ ವಸ್ತುಸ್ಥಿತಿ ಇದೆ. ಸಂಸ್ಕೃತಿ ಮತು ಆರ್ಥಿಕತೆಯ ನಡುವಣ ನೇರ ಸಂಬಂಧ ಇದೆ. ಆದರೆ ಈ ಆರ್ಥಿಕತೆಯ ಕುರಿತು ಇದುವರೆಗೂ ನಮಗೊಂದು ಖಚಿತ ನಿಲುವು ತೆಗೆದುಕೊಳ್ಳಲು ಸಾಧ್ಯವಾಗಿದೆಯೇ? ಇದುವರೆಗೂ ನಾವು ಮಾಡಿದ್ದು ಬಂಡವಾಳಶಾಹೀ ತಳಪಾಯದ ಮೇಲೆ ಸಮಾಜವಾದದ ಕಟ್ಟಡ ಕಟ್ಟುವ ವಿಫಲ ಪ್ರಯತ್ನ. ಇದರ ಫಲವೇ ಇವತ್ತು ನಮ್ಮೆದುರಿಗಿರುವ ವಿದ್ಯಮಾನಗಳಾಗಿವೆ. ನಮ್ಮನ್ನಾಳುತ್ತಿರುವುದು ಗಾಂಧಿ, ಲೋಹಿಯಾ, ಅಂಬೇಡ್ಕರ್, ಮಾರ್ಕ್ಸ್ ಯಾರೂ ಅಲ್ಲ. ನಮ್ಮನ್ನಾಳುತ್ತಿರುವುದು ಮಾರುಕಟ್ಟೆ. ಈ ಮಾರುಕಟ್ಟೆಗೆ ಸಂಸ್ಕೃತಿಯ ವ್ಯಾಖ್ಯಾನವನ್ನು ಮರು ರೂಪುಗೊಳಿಸುವ ಭಂಡ ಧೈರ್ಯ ಯಾವಾಗಲೂ ಇರುತ್ತದೆ. ಆದ್ದರಿಂದ ಇಲ್ಲಿ ಸಂಸ್ಕೃತಿ, ಸ್ತ್ರೀ ಮೊದಲಾದವು ಮಾರುಕಟ್ಟೆ ಭಾಷೆಗೆ ತಕ್ಕಂತೆ ರೂಪಿತಗೊಳ್ಳುತ್ತವೆ. ಇಲ್ಲಿ ಬಳಕೆಯಾಗುವ ಭಾಷೆ ಪೊಲ್ಯೆಟ್ ಆಗಿ ಭ್ರಷ್ಟವಾಗುತ್ತಾ ಆ ಚಿಂತನೆಗಳನ್ನು ನಮಗೆ ಒಪ್ಪಿಸತೊಡಗುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿ ಭ್ರಷ್ಟಾಚಾರವು ಸಾಕ್ಷ್ಯಾಧಾರ ಸಮೇತ ಸಾಬೀತಾಗಿದ್ದರೂ ಜಾತಕ, ವಾಸ್ತುದೋಷಗಳ ಕಾರಣಗಳನ್ನು ಹುಡುಕಲಾಗುತ್ತಿದೆ. ವ್ಯಕ್ತಿಯೊಬ್ಬನ ಆಸ್ತಿ ಎಲ್ಲಿಂದ ಬಂತು ಎಂದು ಕೇಳುವ ವ್ಯವಸ್ಥೆಯೇ ಇಲ್ಲಿಲ್ಲ. ಹೀಗಿರುವಲ್ಲಿ ನಾವು ಸತ್ಯ, ಪ್ರಾಮಾಣಿಕತೆ, ದುರ್ಬಲ ಸ್ತ್ರೀ ಪುರುಷರಿಗೆ, ಮಕ್ಕಳಿಗೆ ರಕ್ಷಣೆ ಇತ್ಯಾದಿ ಇತ್ಯಾದಿ ಮೌಲ್ಯಗಳನ್ನು ಎಷ್ಟು ಮಾತಾಡಿದರೂ ಏನು ಪ್ರಯೋಜನ? ನಿಜ, ಬಡ ಭಾರತವು ಅನುಕೂಲವಂತ ದೇಶವಾಗಿ ಬದಲಾಗಬೇಕು. ಸಂಪತ್ತಿನ ಹೆಚ್ಚಳ ಆಗಬೇಕು. ಆದರೆ ಅದರ ಸ್ವರೂಪ ಹೇಗಿರಬೇಕು? ಲೋಹಿಯಾ ಹೇಳುತ್ತಾರೆ: "ಇಂಥ ದೇಶದಲ್ಲಿ ಸಂಪತ್ತಿನ ವ್ಯಾಮೋಹ ತೊರೆಯಿರಿ ಎಂದು ನಾನು ಹೇಳಲಾರೆ. ಸಂಪತ್ತನ್ನು ನಾವು ಹೆಚ್ಚಿಸಬೇಕಿದೆ. ಕೃಷಿಯನ್ನು ಅಭಿವೃದ್ಧಿ ಪಡಿಸಬೇಕಿದೆ. ಉತ್ಪಾದನೆ ಹೆಚ್ಚಿಸಬೇಕಿದೆ, ಕಾರ್ಖಾನೆಗಳನ್ನು ಬೆಳೆಸಬೇಕಿದೆ. ಈ ನಿಟ್ಟಿನಲ್ಲಿ ವೈಯಕ್ತಿಕ ಸಂಪತ್ತಿಗೆ ಬದಲಾಗಿ ಸಾಮೂಹಿಕ ಸಂಪತ್ತನ್ನು ವೃದ್ಧಿಸಲು ಹೊರಟರೆ ಮಾತ್ರ ಏನಾದರೂ ಬೆಳಕು ಕಂಡೀತು. ಸಾಮೂಹಿಕ ಸಂಪತ್ತನ್ನು ಹೆಚ್ಚಿಸುತ್ತಾ,



ಚಿತ್ರ : ನಿಹಾರಿಕ ಶೆಣೈ

ವೈಯಕ್ತಿಕ ಸಂಪತ್ತಿನ ವ್ಯಾಮೋಹವನ್ನು ತ್ಯಜಿಸುತ್ತಾ ನಾವು ಭಾರತದಲ್ಲಿ ಒಂದು ಸಮಾಜವಾಪವನ್ನು ಹುಟ್ಟು ಹಾಕೋಣ" (ಗಾಂಧಿವಾದ ಮತ್ತು ಲೋಹಿಯಾವಾದ: ರಾಮ ಮನೋಹರ ಲೋಹಿಯಾ: ಪು: 307,) ಲೋಹಿಯಾರ ಈ ಮಾತುಗಳಿಗೆ ವಿರುದ್ಧವಾದ ಸ್ಥಿತಿ ಈಗಿದೆ. ಈ ಸ್ಥಿತಿ ನಿರ್ಮಾಣದಲ್ಲಿ ನಮ್ಮ ಆರ್ಥಿಕ ನೀತಿಗಳೊಂದಿಗೆ ನಮ್ಮ ಶಿಕ್ಷಣ ವ್ಯವಸ್ಥೆಯ ವೈಫಲ್ಯ ಮತ್ತು ಮಾಧ್ಯಮಗಳ ದೌರ್ಬಲ್ಯ ಪ್ರಮುಖ ಪಾತ್ರ ವಹಿಸಿವೆ. ಇವೆಲ್ಲವೂ ನೀಡುತ್ತಿರುವ 'ಸುಖೀ ಕುಟುಂಬ'ದ ನಿರೂಪಣೆ ಮಾರುಕಟ್ಟೆ ಆಧಾರಿತ ನಿರೂಪಣೆ ಯಾಗಿದೆ. ಇಲ್ಲಿ ಕುಟುಂಬದ ಮೊದಲ ಆದ್ಯತೆ ವಸ್ತುಗಳ ಮೇಲಿನ ಯಜಮಾನಿಕೆ ಯಾಗಿದೆ. ಈ ಕುಟುಂಬದಲ್ಲಿ ಗಂಡ, ಹೆಂಡತಿ, ಮಕ್ಕಳೆಂದರೆ: ಗಂಡ– ವಸ್ತುಗಳನ್ನು ತಂದು ಹಾಕುವವನು, ಹೆಣ್ಣು ಅವನಿಗೆ ಸಾಥ್ ನೀಡುತ್ತಾಳೆ. ಹೆಂಡತಿ – ಆ ವಸ್ತುಗಳ ಮೂಲಕ ತನ್ನ ಮತ್ತು ಪರಿವಾರದ ಸುಖವನ್ನು ಪೋಷಿಸುವವಳು. ಮಕ್ಕಳು– ಮುಂದೆ ಇನ್ನಷ್ಟು ವಸ್ತುಗಳನ್ನು ಕೊಂಡುಕೊಳ್ಳುವ ಸಾಮರ್ಥ್ಯ ಪಡೆದು ಕೊಳ್ಳುವವರು.

ಈ ಕೇಂದ್ರದ ಸುತ್ತ ಸುತ್ತುತ್ತಿರುವ ನಮ್ಮ ಮಧ್ಯಮ ವರ್ಗಗಳ ಆದರ್ಶಗಳನ್ನೇ ಪೋಷಿಸುವ, ಹಬ್ಬುತ್ತಿರುವ ನಮ್ಮ ಒಟ್ಟು ವ್ಯವಸ್ಥೆ ಮಾರುಕಟ್ಟೆ ಆಧಾರಿತ ಚಿಂತನೆಗಳ ಪೊಳ್ಳುತನವನ್ನಾಗಲೀ, ಹುನ್ನಾರಗಳನ್ನಾಗಲೀ ಅರಿಯುವ ಗೊಡವೆಯನ್ನೇ ಹೊಂದಿಲ್ಲ. ಒಂದು ವೇಳೆ ಅರಿತರೂ ಅರಿಯದಂತೆ ನಾಟಕವಾಡುತ್ತಿರುತ್ತದೆ. ಇಂತಹ ಸನ್ನಿವೇಶದಲ್ಲಿ ಈ ಯಾವುದರ ವಿರುದ್ಧ ಮಾತನಾಡಿದರೂ ಅದು ಜನರಿಗೆ 'ಭಾಷಣ'ವಾಗಿ ಕೇಳಿಸುತ್ತದೆ. ಪರಿಸ್ಥಿತಿಯನ್ನು ಬದಲಿಸುವ, ಪ್ರತಿಭಟಿಸುವ 'ಹೆಣ್ಣು' ಕುಟುಂಬನಾಶಿನಿ ಯಾಗಿ ಕಾಣಿಸುತ್ತಾಳೆ. ಹೀಗಿರುವಾಗ ಶಿಕ್ಷಣ, ಆರೋಗ್ಯ ವ್ಯವಸ್ಥೆಗಳು ಸಾರ್ವಜನಿಕ ವಲಯದ ಹಿಡಿಯಿಂದ ಪೂರ್ತಿ ತಪ್ಪಿಹೋದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿ ಸಂಸ್ಕೃತಿ, ಭಾಷೆ, ಸ್ತ್ರೀ – ಮೂರೂ ಖಾಸಗೀಕರಣದ ಪರಿಭಾಷೆಗಳನ್ನೇ ಮಾತನಾಡತೊಡಗುತ್ತವೆ. ಒಂದೆಡೆ ಸ್ತ್ರೀ ದೇಹವನ್ನು ಬಂಡವಾಳವನ್ನಾಗಿ ಪರಿವರ್ತಿಸುತ್ತಾ ಇನ್ನೊಂದೆಡೆ ಸ್ತ್ರೀ ಸಂಸ್ಕೃತಿ ರಕ್ಷಕಳಾಗಬೇಕೆಂದು ಬಲವಂತ ಮಾಡುವ ಇಬ್ಬಂದಿತನದ ನೀತಿಗಳು ಹರಿದಾಡತೊಡಗುತ್ತವೆ. ಮತ್ತು ಎರಡೂ ಕಡೆ ಅವಳನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ವೈರುಧ್ಯವೂ ಸಂಭವಿಸಿಬಿಡುತ್ತದೆ.


ಮತ್ತೆ ಈ ಲೇಖನದ ಆರಂಭದಲ್ಲಿ ಎತ್ತಿದ ಪ್ರಶ್ನೆಗಳಿಗೆ ಮರಳುವುದಾದರೆ, ರಾಷ್ಟ್ರೀಯತೆಯು ಭಾವಿಸಿದ ಸುಧಾರಣೆಯ ಸ್ವರೂಪದಲ್ಲೇ ಸಮಸ್ಯೆಗಳಿರುವಂತೆ, ಸುಧಾರಣೆಯೆಂಬುದು ಮೇಲುಮಟ್ಟದ ಪ್ರಕ್ರಿಯೆ ಎಂದು ಸುಧಾರಣಾವಾದಿಗಳು ನಂಬಿರುವು ದರಲ್ಲೂ ಸಮಸ್ಯೆಗಳಿವೆ. ಸುಧಾರಣೆಯೆಂಬುದು ಬಾಹ್ಯದಿಂದ ಕಲಿತು ಅನ್ವಯಿಸುವುದು ಎಂಬ ಚಿಂತನೆಯಲ್ಲೇ ಸಮಸ್ಯೆಗಳಿವೆ. ಆರಂಭದಲ್ಲಿ ಹೇಳಿದಂತೆ, ವಿಧವಾ ವಿವಾಹಕ್ಕೆ ನಮ್ಮಲ್ಲೇ ಮಾದರಿ ಇದ್ದಾಗ್ಯೂ ನಾವು ಇನ್ನೆಲ್ಲಿಂದಲೋ ಕಾರ್ಯ ಮಾದರಿಯನ್ನು ಹುಡುಕಿಕೊಂಡು ಅದನ್ನು ಅನಗತ್ಯವಾಗಿರುವ ಕಡೆಗಳಲ್ಲೂ ಹೇರಲು ಹೊರಡುತ್ತೇವೆ. ಮತ್ತು ಅಲ್ಲಿದ್ದ ಒಂದು ಆರೋಗ್ಯಕರ ಸ್ವಾಯತ್ತ ವ್ಯವಸ್ಥೆಗೆ ಭಂಗ ತರುತ್ತೇವೆ. ನಾನು ನೋಡಿದ ಒಂದು ಡಾಕ್ಯುಮೆಂಟರಿಯ ಒಂದು ದೃಶ್ಯ ನೆನಪಿಸಿಕೊಳ್ಳಬೇಕೆನಿಸುತ್ತದೆ. ಅದರಲ್ಲಿ ಕಾಡೊಳಗೆ ವಾಸಿಸುವ ಬುಡಕಟ್ಟಿನ ವ್ಯಕ್ತಿಯೊಬ್ಬ ದಟ್ಟ ಕಾಡಿನ ನಡುವೆ ಇದ್ದಾಗ ಬಾಯಾರಿ ನೀರಿಗೆ ಹುಡುಕಾಟ ಮಾಡುತ್ತಾನೆ. ಅಲ್ಲೆಲ್ಲೂ ತೊರೆಗಳಿರುವುದಿಲ್ಲ. ಆದರೆ ಯಾವ ಮರದಲ್ಲಿ ನೀರಿದೆ ಎಂಬ ಜ್ಞಾನ ಆತನಿಗಿದೆ. ಆತ ಮರವೊಂದನ್ನು ಹತ್ತಿ ಪುಟ್ಟ ರೆಂಬೆಯೊಂದನ್ನು ಕಡಿದಾಗ ಆ ಮರದಿಂದ ನೀರು ಕಾರಂಜಿಯಾಗಿ ಪುಟಿಯುತ್ತದೆ. ಆತ ದಾಹವಾರಿಸಿ ಕೊಳ್ಳುತ್ತಾನೆ. ಇಂತಹ ಜ್ಞಾನಗಳನ್ನು ಜ್ಞಾನವೆಂದೇ ಪರಿಗಣಿಸದೆ ನೀರು ಕೊಡುವ ಮರಗಳನ್ನೇ ಕಡಿದು ನಾಶಮಾಡುತ್ತಾ ಬಾಯಾರಿ ಬಸವಳಿವ ಸ್ಥಿತಿ ನಮ್ಮದು. ಸಂಸ್ಕೃತಿ, ಭಾಷೆ ಮತ್ತು ಸ್ತ್ರೀಯನ್ನು ನಿರ್ವಚಿಸುವಲ್ಲೂ ನಾವು ಇಂತಹದೇ ತಪ್ಪು ಹೆಜ್ಜೆಗಳನ್ನಿಡುತ್ತಿದ್ದೇವೆ. ಇದರ ಪುನರ್‌ನಿರ್ವಚನ ಕೂಡ ಇಂದಿನ ತುರ್ತು ಎನ್ನುವ ಅರಿವು, ಒಟ್ಟು ವ್ಯವಸ್ಥೆಯ ಗ್ರಹಿಕೆಯ ಕುರಿತು ಸ್ಪಷ್ಟತೆ ಮತ್ತು ಮಾರುಕಟ್ಟೆ ನಿಯಂತ್ರಿತ ಚಿಂತನೆಗಳನ್ನು ಕುರಿತ ಎಚ್ಚರಗಳು ಮಾತ್ರ 'ಸಂಸ್ಕೃತಿ, ಭಾಷೆ ಮತ್ತು ಸ್ತ್ರೀ'ಯನ್ನು ಕುರಿತ ನಮ್ಮ ನಿಲುವುಗಳನ್ನು ಸರಿಯಾಗಿ ರೂಪಿಸಬಲ್ಲುದು.

❑

ಅಪೂರ್ವ ಮಹಿಳಾ ಆತ್ಮಕಥೆ..... *(8ನೇ ಪುಟದಿಂದ)*

ಮುಂದಕ್ಕೆ ಮಗ ಪ್ರದೀಪನ ಮದುವೆಯಾದರೂ ಆತ ಬದಲಾಗಲಿಲ್ಲ. ಯಾವ ನೌಕರಿಯಲ್ಲೂ ಆತ ಸ್ಥಿರವಾಗಿ ನಿಲ್ಲುತ್ತಿರಲಿಲ್ಲ. ಎಲ್ಲೆಲ್ಲಿ ದುಡಿಯುತ್ತಿದ್ದನೋ ಅಲ್ಲಲ್ಲಿ ಜಗಳ, ಮಾರಾಮಾರಿಯಾಗುತ್ತಿತ್ತು. ಈ ಕುರಿತು ಶಾಂತ 'ತಾಯಿಯ ಜವಾಬ್ದಾರಿ ತನ್ನ ಮೇಲೆ ಇದೆಯೆಂದು ಅವನಿಗೆ ಎಂದೂ ಅನಿಸಲಿಲ್ಲ. . . ಗಿತೆಯ ರೂಪದಲ್ಲಿ ಪ್ರದೀಪನು ನನ್ನ ನಶೀಬಕ್ಕೆ ಬಂದಿದ್ದನು. ಒಬ್ಬನು ನನ್ನ ತಾರುಣ್ಯದಲ್ಲಿ ನನ್ನನ್ನು ಹಾಳು ಮಾಡಿದನು. ಇನ್ನೊಬ್ಬನು ನನ್ನ ವೃದ್ಧಾಪ್ಯದಲ್ಲಿ' (ಪು.88–89) ಎನ್ನುತ್ತಾರೆ. ಪ್ರದೀಪನಿಗೂ ತನ್ನ ತಾಯಿಯ ಮನೆ, ಹಣ, ಚಿನ್ನ ಬೇಕಾಗಿತ್ತಲ್ಲದೆ ತಾಯಿ ಬೇಕಾಗಿರಲಿಲ್ಲ. ತಾಯಿ ತನ್ನ ಮನೆಯಲ್ಲಿ ಊಟ ಮಾಡಿದರೆ ಒಂದೂಟಕ್ಕೆ ಇಷ್ಟೆಂದು ಲೆಕ್ಕ ಇಟ್ಟು ತನ್ನ ತಾಯಿಯಿಂದ ಹಣ ಕಿತ್ತುಕೊಳ್ಳುವ ಮಗ, ಸೊಸೆಯ ಅಧಿಕಾರಯುಕ್ತ ನಡವಳಿಕೆ – ಇವೆಲ್ಲವುಗಳಿಂದ ಬೇಸತ್ತು ಹೋದರು ಶಾಂತ. ಈ ಸಂದರ್ಭದಲ್ಲಿ ಸಂಸಾರದ ಕುರಿತು ವೈರಾಗ್ಯ ಶಾಂತ ಅವರನ್ನು ಆವರಿಸಿತು. ಪ್ರದೀಪ ಮತ್ತು ಆತನ ಹೆಂಡತಿಗೂ ಕುಡಿತದ ಚಟ ಬೆಳೆದದ್ದನ್ನು ನೋಡಿದ ಶಾಂತ ಇನ್ನು ತಾನು ಈ ಮನೆ ಯಲ್ಲಿರುವುದು ಕ್ಷೇಮವಲ್ಲವೆಂದು ತಿಳಿದು ಆಶ್ರಮಕ್ಕೆ ಹೋಗಲು ನಿರ್ಧರಿಸಿ ವಸಯಿಯ ಶ್ರದ್ಧಾನಂದ ಆಶ್ರಮವನ್ನು ಸೇರುತ್ತಾರೆ. ಆ ಆಶ್ರಮದ ವಾಸಿಗಳಿಗೆ ಶಾಂತಾ ಬಗ್ಗೆ ಏನೂ ಗೊತ್ತಿಲ್ಲ. ಯಾಕೆಂದರೆ ಅಲ್ಲಿ ತನ್ನ ಹೆಸರನ್ನು 'ಶಾಂತಾ ಹುಬಳೀಕರ' ಎಂದು ಹೇಳದೆ 'ಶಾಂತಾಗಿತೆ' ಎಂದು ಹೇಳಿ ಒಬ್ಬ ಅನಾಥೆಯಂತೆಯೇ ಜೀವನ ನಡೆಸತೊಡಗಿದರು.

ಹೀಗೆ ಶಾಂತ ಆ ಆಶ್ರಮ ಸೇರಿ 5 ವರ್ಷಗಳಾದಾಗ ಒಂದು ದಿನ ಆ ಆಶ್ರಮದಲ್ಲಿ ಟಿ.ವಿ ಮುಂದೆ ಕುಳಿತಿರುವ ಸಂದರ್ಭದಲ್ಲಿ ಶಾಂತ ನಟಿಸಿದ್ದ ಚಲನಚಿತ್ರ 'ಮಾಣೂಸ' ಪ್ರಸಾರವಾಗುತ್ತಿತ್ತು. ಆ ಸಂದರ್ಭದಲ್ಲಿ ಅಲ್ಲಿನ ಹೆಣ್ಣುಮಕ್ಕಳು ಶಾಂತ ಕುರಿತಾಗಿ ಆಡಿದ



ಮಾತುಗಳು ಶಾಂತ ಕಿವಿಗೆ ಬಿದ್ದವು. 'ಇವಳು ಇಷ್ಟು ಶ್ರೇಷ್ಠ ಕಲಾವಿದೆ ಇದ್ದವಳು ಮುಂದೆ ಏಕೆ ಬೇರೆ ಯಾವ ಚಿತ್ರಗಳಲ್ಲಿ ಕೆಲಸ ಮಾಡಲಿಲ್ಲ?' ಎಂದು ಒಬ್ಬಳು ಕೇಳಲಾಗಿ, ಒಬ್ಬಳು – 'ಅವಳು ಸತ್ತು ಎಷ್ಟೋ ವರ್ಷಗಳಾದವು' ಈ ವಾಕ್ಯ ಕೇಳಿದ ಕೂಡಲೆ ಶಾಂತ ಎದ್ದು ಹೊರಗೆ ಬಂದಳು. ಈ ಕುರಿತು ಶಾಂತ ತನ್ನ ಬಗ್ಗೆ ತನ್ನಲ್ಲೇ ಯೋಚಿಸ ತೊಡಗಿದ್ದನ್ನು ಈ ಸಂದರ್ಭದಲ್ಲಿ ಗಮನಿಸಬೇಕು: 'ಜಗತ್ತಿನ ದೃಷ್ಟಿಯಿಂದ ನಾನು ಸತ್ತವಳೇ ಆಗಿದ್ದೆ. ಒಂದು ರೀತಿಯಿಂದ ಒಳ್ಳೆಯದೇ ಅನಿಸಿತು. ಯಾವ ವೈಭವದಿಂದ ಜೀವಿಸಿದ್ದೆ, ಅದೇ ವೈಭವದಿಂದ ಜಗತ್ತಿನ ದೃಷ್ಟಿಯಿಂದ ನನ್ನದೆಲ್ಲವೂ ಮುಗಿದಿತ್ತು. ಈಗಿನ ನನ್ನ ದೈನ್ಯಾವಸ್ಥೆ ಯಾರಿಗೂ ತಿಳಿಯಬಾರದಾಗಿತ್ತು. ನನ್ನ ಅವಸ್ಥೆ ಹೀಗೇಕೆ ಆಯಿತು? ಅದಕ್ಕೆ ಜವಾಬುದಾರರು ಯಾರು? ಇದರ ಚರ್ಚೆಯೂ ಬೇಡವೆನಿಸಿತ್ತು. 'ನನ್ನ ಕಣ್ಣಿನಿಂದ ನನ್ನ ಮರಣವನ್ನು ನಾನೇ ನೋಡಿದೆಯೆಂಬ ಅವಸ್ಥೆ ಆಯಿತು ನನ್ನದು'.(ಪು.101)

ಇಷ್ಟೆಲ್ಲಾ ಮಾತುಕತೆಗಳು ತನ್ನ ಕುರಿತಾಗಿ ನಡೆದರೂ ತನ್ನ ಅಸ್ತಿತ್ವವನ್ನು ಶಾಂತಾ ಹೊರಗೆಲ್ಲೂ ತೋರಗೊಡಲಿಲ್ಲ. ದಿನಗಳು ವರ್ಷಗಳು ಉರುಳುತ್ತಿದ್ದವು. ಅವರ ಆಶ್ರಮದ ಈ ಅಜ್ಞಾತವಾಸ 12 ವರ್ಷಗಳ ತನಕ ಸಾಗಿತು. ಈ ಸಮಯದಲ್ಲಿ ಒಮ್ಮೆ ಮೊಮ್ಮಗಳು, ಮಗ, ಸೊಸೆ ಆಶ್ರಮಕ್ಕೆ ಭೇಟಿ ಇತ್ತು '4 ದಿನಕ್ಕೆ ಮನೆಗೆ ಬಂದು ಹೋಗುವಂತೆ' ಆಮಂತ್ರಣವಿತ್ತರು. ಆ ಪ್ರಕಾರವಾಗಿ ಮಗನ ಮನೆಗೆ ಶಾಂತ ಹೋಗಿದ್ದಾಗ ಅಲ್ಲಿ ಗಂಡ ಗಿತೆ ತೀರಿಕೊಂಡ ವಿಚಾರ ಗೊತ್ತಾಯಿತು. ಆದರೆ ಶಾಂತಗೆ ಆ ಬಗ್ಗೆ ದುಃಖವೇನೂ ಆಗಲಿಲ್ಲ. ತನ್ನ ದಾಂಪತ್ಯದ ಜೀವನ, ಗಂಡನ ಬಗ್ಗೆ ಕೆಲವೊಂದು ವಿಚಾರಗಳು ಆ ಸಮಯದಲ್ಲಿ ಪುನಃ ಅವರ ಮನಸ್ಸಿನಲ್ಲಿ ಚಿಂತನೆ ನಡೆಸಿದವು. "ಅವರು ನನ್ನನ್ನು ಮೋಸಗೊಳಿಸುತ್ತ ಲೂಟಿ ಮಾಡುತ್ತ ನನ್ನ ಪೂರ್ಣ ಆಯುಷ್ಯವನ್ನೇ ಧ್ವಂಸ ಮಾಡಿದರು. ನಿರಾಧಾರ ಅವಸ್ಥೆಯಲ್ಲಿ ನಾನು ವೃದ್ಧಾಶ್ರಮದಲ್ಲಿ ಕಳೆಯಬೇಕಾಯಿತು. ಈ ಎಲ್ಲ ಪರಿಸ್ಥಿತಿಗೆ ಜವಾಬ್ದಾನಾದ ಈ ಮನುಷ್ಯನಿಗೆ ಆಯುಷ್ಯವನ್ನು ಸುಖ ಸಮಾಧಾನದಿಂದ ಜೀವಿಸಲಾಗಲಿಲ್ಲ.... ಅವರ ಮರಣದ ದುಃಖದಿಂದ ಕಣ್ಣಲ್ಲಿ ನೀರು ಬರಬೇಕೆಂಬಷ್ಟು ಸುಖವನ್ನು ಅವರು ನನ್ನ ಜೀವನದಲ್ಲಿ ಕೊಟ್ಟಿರಲಿಲ್ಲ. ಗಂಡನು ಹೇಗೆ ಇದ್ದರೂ, ಎಷ್ಟೊಂದು ತ್ರಾಸ ಕೊಟ್ಟರೂ, ಹೊಡೆದು ಬಡಿದು ಮಾಡುತ್ತಿದ್ದರೂ, 'ಜನ್ಮ ಜನ್ಮಾಂತರಕ್ಕೂ ಇವನೇ ನನ್ನ ಪತಿ ಆಗಿರಲಿ' ಎಂದು ವಟವೃಕ್ಷಕ್ಕೆ ಪ್ರದಕ್ಷಿಣೆ ಹಾಕುವ ಪರಂಪರೆ ನಮ್ಮದು. ಅದು ನನಗೆ ಒಗ್ಗುವುದಿಲ್ಲ. ಒಳ್ಳೇ ಗುಣಗಳ ಮನುಷ್ಯನ ಸಹವಾಸ ಯಾರಿಗೆ ಬೇಡವೆನಿಸುತ್ತದೆ? ಆದರೆ ದುರ್ಗುಣದ ತ್ರಾಸದಾಯಕ ಮನುಷ್ಯನು ಕಳೆದುಹೋದರೆ ದುಃಖವಂತೂ ಆಗುವುದೇ ಇಲ್ಲ. ಆದರೆ ಪಾರಾದೆನೆಂಬ ನಿಟ್ಟುಸಿರು ಬಿಡಬೇಕಾಗುತ್ತದೆ. ನನಗೆ ಗಿತೆಯ ಮರಣದ ದುಃಖ ಏಕೆ ಆಗಬೇಕು? ಯಾರ ಸಹವಾಸದಲ್ಲಿ ಒಂದು ದಿವಸ, ಯಾಕೆ ಒಂದು ಕ್ಷಣ ಕೂಡ ಸುಖದಿಂದ ಹೋಗಲಿಲ್ಲ. ಯಾವ ಮನುಷ್ಯನು ನನ್ನ ಎಲ್ಲ ದುಃಖಗಳಿಗೆ ಕಾರಣನಾದನೋ ಅವನು ಜೀವಂತ ವಿದ್ದರೂ ಸುಖವಿರುತ್ತಿರಲಿಲ್ಲ ವಾದರೆ ಮೃತ್ಯುವಿನ ದುಃಖವೇಕೆ ಆಗಬೇಕು?" (ಪು.104) ಎನ್ನುವ ಶಾಂತರ ವ್ಯಕ್ತಿತ್ವ ಇಲ್ಲಿ ಉಲ್ಲೇಖಾರ್ಹವಾಗುತ್ತದೆ.

ಈ ಸಂದರ್ಭದಲ್ಲಿ 'ಲೋಕಸತ್ತಾ' ಪತ್ರಿಕೆಯಲ್ಲಿ ಪ್ರಕಟವಾದ ಶಾಂತಾ ಹುಬಳೀಕರ ಅವರ ಕುರಿತಾದ ಲೇಖನದಿಂದ ಶಾಂತಾ ಹುಬಳೀಕರ ಅವರ ಪುನರ್ಜನ್ಮವಾದಂತಾಯಿತು. ಪೆನ್‌ಶನ್ ಸಿಗತೊಡಗಿತು. ಅನೇಕ ವ್ಯಕ್ತಿಗಳಿಂದ ಧನಸಹಾಯ ಒದಗಿ ಬಂದವು. ಆದರೇನು ಶಾಂತ ಅವರ ಅತಂತ್ರ ಸ್ಥಿತಿಯಲ್ಲೇನೂ ಬದಲಾವಣೆ ಆಗಲಿಲ್ಲ. ಆಶ್ರಮದವರೂ ಶಾಂತಾ ಅವರ ಹಣದ ಮೇಲೆ ಕಣ್ಣಿಟ್ಟರು. ಈ ಸ್ಥಿತಿಯಲ್ಲಿ ಶಾಂತಾ ಆ ಆಶ್ರಮವನ್ನು ತೊರೆಯಬೇಕಾಗಿ ಬಂತು. ಮಗನ ಮನೆಗೆ ಆಶ್ರಯಕ್ಕಾಗಿ ಹೋದರು. ಅಲ್ಲಿ ಮಗ, ಸೊಸೆಯ ಜತೆಗೆ ಮೊಮ್ಮಗಳೂ ಮದ್ಯವ್ಯಸನಕ್ಕೆ ಬಲಿಯಾದದ್ದನ್ನು ಕಂಡರು. ಮಗನ ಕಣ್ಣೂ ತಾಯಿಯ ಹಣದ ಮೇಲೆಯೇ ನೆಟ್ಟಿದೆಯೆಂಬ ಅರಿವು ಶಾಂತಾರಿಗಾದಾಗ ಮಗನ ಮನೆಯಿಂದಲೂ ಹೊರಬಂದು ಪುಣೆಯ ಮಹಿಳಾ ಮಂಡಳದ ವೃದ್ಧಾಶ್ರಮಕ್ಕೆ ಸೇರಿಕೊಂಡರು, ತಮ್ಮ ಜೀವಿತದ ಕೊನೆಯ ತನಕ ಅಲ್ಲೇ ನೆಲೆ ನಿಂತರು. ಮಗನ ದುರ್ನಡತೆಯಿಂದ ಬೇಸತ್ತ ಶಾಂತಾ 'ತಾವು ಮರಣ ಹೊಂದಿದಾಗ ತಮ್ಮ ಶವಕ್ಕೆ ಅಗ್ನಿ ಸಂಸ್ಕಾರವನ್ನು ತಮ್ಮ ಮಗನು ಮಾಡಕೂಡದು ಹಾಗೂ ಭಾರತೀಯ ವಿದ್ಯಾಪೀಠ ಪುಣೆ ಇದರ ಮೆಡಿಕಲ್ ಕಾಲೇಜಿನ ಹಾಸ್ಪಿಟಲ್‌ಗೆ ತಮ್ಮ ದೇಹ ದಾನ ಮಾಡಬೇಕು' ಎಂಬ ಕಠೋರ ನಿರ್ಧಾರವನ್ನು ಈ ಸಂದರ್ಭದಲ್ಲಿ ತಾಳಿದರು.

ಶಾಂತ ಹುಬಳೀಕರ ಅವರ ಆತ್ಮಕಥೆ 'ನಾಳೀನ ಚಿಂತ್ಯಾಕ' ನಿರೂಪಿಸಿಕೊಡುವ ಈ 'ಹೋರಾಟದ ಜೀವನ' ಸಮಾಜವು ಮಹಿಳಾ ಬದುಕಿಗೆ ಕಟ್ಟಿಕೊಟ್ಟ ಒಂದು ಪಾಠವೂ, ಎಚ್ಚರಿಕೆಯೂ ಹೌದು ಎಂದರೆ ತಪ್ಪಾಗಲಾರದು. ಹೆಣ್ಣುಮಕ್ಕಳ ಬಗ್ಗೆ ಅಂದಿನ ಸಮಾಜದ ದೃಷ್ಟಿಕೋನ, ಸ್ಥಿತಿಗತಿಗಳು ಹೇಗಿತ್ತು ಎನ್ನುವುದಕ್ಕೆ ಉತ್ತರ ಈ ಆತ್ಮಕಥೆಯಲ್ಲಿ ಸಿಗುತ್ತದೆ. ಅಂದಿನ ಕಾಲದ ಸಂಪ್ರದಾಯ, ಅಂಧಾನುಕರಣೆ, ಗೊಡ್ಡು ಆಚರಣೆಗಳ ವಿರುದ್ಧ ಧ್ವನಿ ಎತ್ತುವ ಕೆಲಸವನ್ನು ಶಾಂತ ತಮ್ಮ ಈ ಆತ್ಮಕಥೆಯಲ್ಲಿ ನಡೆಸಿದ್ದಾರೆ. ಇಡೀ ಕೃತಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳುವು ದಾದರೆ ಭಾರತೀಯ ಮಹಿಳೆಯರ ಅಸಹಾಯಕತೆಯ ಪ್ರತಿನಿಧಿ ಯಾಗಿ ಈ ಕೃತಿ ಕೆಲಸ ಮಾಡುವುದರ ಜತೆ ಜತೆಗೆ ಮಹಿಳೆಯ ಅಂತರಂಗದ ಬಯಕೆಗಳು, ಕನಸುಗಳಾವುವು? ಮಹಿಳಾ ಸ್ವಾಭಿಮಾನವೆಂದರೇನು? ಆಕೆಯ ಅಸ್ತಿತ್ವ, ಅನನ್ಯತೆಗಳು ದಾಖಲಾಗುವ ಸಂದರ್ಭಗಳಾವುವು? ಮಹಿಳಾ ಜೀವಿತದ ಗುರಿಗಳೇನು? 'ಹೆಣ್ಣು' ಎಂದರೆ ಬರೀ ಮದುವೆ, ಮಕ್ಕಳು, ಅಲಂಕಾರಕ್ಕೆ ಮಾತ್ರ ಸೀಮಿತಳಾಗಿರಬೇಕೇ? ಆಕೆಗೆ ಬರುವ ಅಥವಾ ಬಂದ ಅವಕಾಶಗಳನ್ನು ಸಮಾಜ ಹಿಡಿತದಲ್ಲಿಟ್ಟುಕೊಳ್ಳುವ ಪರಿಯೆಂತಹದ್ದು? ಇಂತಹ ಹಲವಾರು ಪ್ರಶ್ನೆಗಳನ್ನು, ಚಿಂತನೆ ಗಳನ್ನು ಓದುಗರಿಗೆ ವರ್ಗಾಯಿಸುವ ಕೆಲಸವನ್ನೂ ಇದು ನಡೆಸಿಕೊಟ್ಟಿದೆ ಎನ್ನಬಹುದು. ❑

ಪತ್ರಿಕೆಗೊಂದು ಪತ್ರ

ಮಾನ್ಯರೆ,

ಕಳೆದ ಐದು ವರ್ಷಗಳಿಂದ 'ನಮ್ಮ ಮಾನಸ' ಪತ್ರಿಕೆಯನ್ನು ಓದುವ ಅಭ್ಯಾಸವುಳ್ಳವಳಾಗಿದ್ದೇನೆ. ಕೆಲವೊಂದು ಪುಟಗಳ ಕಿರು ಪತ್ರಿಕೆಯಾದರೂ ಪ್ರತಿ ಸಂಚಿಕೆಯೂ ಸಂಗ್ರಹ ಯೋಗ್ಯ ಸಂಚಿಕೆಯಾಗಿ ಬರುತ್ತಿರುವುದು 'ನಮ್ಮ ಮಾನಸ'ದ ವಿಶೇಷ, ನಮಗೆ ಸಂತೋಷ ಕೊಡುವ ಸಂಗತಿ ಕೂಡಾ ಹೌದು.

'ನಮ್ಮ ಮಾನಸ' ಸದಾ ಬೆಳೆಯುತ್ತಿರಲಿ ಎಂಬ ಶುಭ ಹಾರೈಕೆಗಳೊಂದಿಗೆ,

–ಶೈಲಜ.ಕೆ,
ಸಂತ ಆಗ್ನೆಸ್ ಕಾಲೇಜು, ಮಂಗಳೂರು

✦ ✦

ಆತ್ಮೀಯರೆ,

'ನಮ್ಮ ಮಾನಸ' ಪತ್ರಿಕೆಯು ಸೊಗಸಾಗಿ ಮೂಡಿಬರುತ್ತಿದೆ. ಪ್ರಕಟವಾಗುತ್ತಿರುವ ಲೇಖನಗಳು ಚೆನ್ನಾಗಿವೆ. ಮಾನಸ ಪತ್ರಿಕೆಯಲ್ಲಿ ಇನ್ನೂ ಸೊಗಸಾದ ಲೇಖನಗಳು ಮೂಡಿಬರಲಿ ಎಂದು ಆಶಿಸುತ್ತೇನೆ.

–ಚಂದ್ರ

✦ ✦

ಆತ್ಮೀಯರೆ,

'ನಮ್ಮ ಮಾನಸ' ಚೆಂದವಾಗಿ ಮೂಡಿಬರುತ್ತಿದೆ. ಮಹಿಳೆಯರು ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ದೊಡ್ಡಮಟ್ಟದಲ್ಲಿ ಬೆಳೆಯಬೇಕಾದಲ್ಲಿ ಎದುರಿಸಬೇಕಾದ ಸಮಸ್ಯೆಗಳನ್ನೊಳಗೊಂಡ ಲೇಖನವು ಚೆನ್ನಾಗಿತ್ತು.

–ಜ್ಯೋತಿ ಎಂ.

'ನಮ್ಮ ಮಾನಸ' ಓದುಗರಲ್ಲಿ ವಿನಂತಿ

ನಮ್ಮ ಮಾನಸ ಪತ್ರಿಕೆಯನ್ನು ಓದಿ ನಿಮ್ಮ ಅನಿಸಿಕೆಗಳನ್ನು ಇ–ಮೇಲ್ ಅಥವಾ 'ನಮ್ಮ ಮಾನಸ' ವಿಳಾಸಕ್ಕೆ ಕಳುಹಿಸಿ. ಲೇಖನಗಳಿಗೆ ಸಂಬಂಧಪಟ್ಟ ನಿಮ್ಮ ಅಭಿಪ್ರಾಯ ಮತ್ತು ಅನಿಸಿಕೆ ಸ್ವಾಗತಾರ್ಹ.

ಇ–ಮೇಲ್ ಐಡಿ: nammamanasa@gmail.com

ನಮ್ಮ ಮಾನಸ ವಿಳಾಸ:

'ನಮ್ಮ ಮಾನಸ'

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ,
ಬೆಂಗಳೂರು – 560 018

ಆತ್ಮೀಯರೆ,

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಒಂದು ಕತ್ತಲ ಹಾಡು' ಒಕ್ಕುಂದರವರ ಲೇಖನ ಬಹಳ ಸೊಗಸಾಗಿ ಮೂಡಿಬಂದಿದೆ. ಮತ್ತುಳಿದ ಲೇಖನಗಳೂ ಚಂದವಾಗಿ ಮೂಡಿಬಂದಿದೆ. ಪತ್ರಿಕೆ ಹೀಗೇ ನಡೆಯಲಿ...

–ಕವನ

✦ ✦

ಆತ್ಮೀಯರೆ,

'ನಮ್ಮ ಮಾನಸ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಎಲ್ಲಾ ಲೇಖನಗಳು ವಿಭಿನ್ನವಾಗಿವೆ. ಇಂತಹ ಲೇಖನಗಳು ಮತ್ತಷ್ಟು ಬರಲಿ, ಹಾಗೂ ಇನ್ನೂ ಹೊಸ ಬಗೆಯ ಆಲೋಚನೆಯ ಲೇಖನಗಳು ಮೂಡಿಬರಲಿ..ಪತ್ರಿಕೆ ಹೀಗೆ ಮುಂದುವರೆಯಲಿ...

–ಕಾವ್ಯ

✦ ✦

ಆತ್ಮೀಯರೆ,

'ನಮ್ಮ ಮಾನಸ'ವನ್ನು ಯುವ ಗೆಳತಿಯರು ನಡೆಸುತ್ತಿರುವುದು ತುಂಬಾ ಸಂತೋಷ. ಮಾನಸ ಹೀಗೆ ಸದಾ ಹೊರಬರಲಿ ಎಂದು ಆಶಿಸುತ್ತೇನೆ. ಯುವಜನರ ಆಲೋಚನೆ ಹಾಗೂ ವಿಚಾರಸಂಕಿರಣ ಮಾನಸದಲ್ಲಿ ವ್ಯಕ್ತವಾಗಬೇಕು.

–ಗಿರಿಜಾ ಎಸ್.
ರಾಮನಗರ

✦ ✦

ಚಂದಾದಾರರಲ್ಲಿ ಮನವಿ

ನವೀಕರಣ


ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಕೂಡಲೇ ನವೀಕರಿಸಿ. ಚಂದಾ ಅವಧಿ ಮುಗಿಯುವ 2–3 ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ದಯವಿಟ್ಟು ಕೂಡಲೇ ಚಂದಾ ನವೀಕರಿಸಬೇಕೆಂದು ವಿನಂತಿಸುತ್ತೇವೆ.

–ಸಂಪಾದಕ ಮಂಡಳಿ

ನಿಮ್ಮ ಸ್ನೇಹಿತರನ್ನೂ ಚಂದಾದಾರರನ್ನಾಗಿಸಿ

ನಂಗೊತ್ತು

■ಶೀತಲಾ ಭಟ್



ನನಗೆ ಗೊತ್ತಿಲ್ಲದಿರಬಹುದು ನಿಮ್ಮ ಯುದ್ಧದ ಘೋರತೆ
ಆದರೆ ಅಡುಗೆ ಮನೆಯ ಕಿಟಕಿಯಿಂದ
ಕತ್ತು ಉದ್ದ ಮಾಡಿ ನಿಮ್ಮ ನಿರೀಕ್ಷಿಸುವಾಗ
ಎದೆಯಲ್ಲಿ ಕತ್ತಿ ಇರಿದಂತಾಗುತ್ತಿತ್ತು

ನನಗೆ ಅರಿವಿಲ್ಲ ಆಡಳಿತ, ಕಂದಾಯಗಳ ರಾಮಾಯಣದ ಬಗ್ಗೆ
ನೀವೆಲ್ಲ ನಡುಮನೆಯಲ್ಲಿ ರಾಷ್ಟ್ರದ ಆರ್ಥಿಕ ಏಳಿಗೆ ಕುರಿತು
ಉದ್ದುದ್ದ ಭಾಷಣ ಮಾಡುವಾಗೆಲ್ಲ
ಇದ್ದ ಒಂದೇ ಹಿಡಿ ಅಕ್ಕಿಯಲ್ಲಿ ಎಲ್ಲರಿಗೂ ಉಣಬಡಿಸಿ
ಹಸಿವಲ್ಲಿ ರಾತ್ರಿ ಮಗ್ಗಲು ಬದಲಿಸುವಾಗ
ನಾಳೆಯ ಊಟದ ಚಿಂತೆಯಲ್ಲಿ ನಿಟ್ಟುಸಿರುಬಿಟ್ಟಿದ್ದೆ

ನನಗೆ ತಿಳಿದಿಲ್ಲ ಆದಾಯ ವೆಚ್ಚಗಳ ಬಗ್ಗೆ
ವರ್ಷಗಳಿಂದ ಸಕ್ಕರೆ ಡಬ್ಬಿಯಲ್ಲಿ ಸೀರೆಗಾಗಿ ಕೂಡಿಟ್ಟ
ಹಣದಿಂದ
ನನ್ನ ಪುಟ್ಟ ಕೂಸಿಗೆ ಗೆಜ್ಜೆ ತಂದು ಕಟ್ಟಿದಾಗ
ಅದರ ಜಣ ಜಣ ಸದ್ದು ಮನಸ್ಸೆಲ್ಲ ತುಂಬಿತ್ತು

ನಾನು ಓದಿಲ್ಲ ಇತಿಹಾಸದ ಪುಟಗಳನ್ನು
ನನಗೆ ಗೊತ್ತಿರುವುದೆಲ್ಲ
ನಮ್ಮಮ್ಮ ಆಕೆಯ ಹತ್ತು ಮಕ್ಕಳನ್ನು ಆರೈಕೆ ಮಾಡಿದ್ದು
ಮೂಲೆ ಮನೆ ಪಂಕಜಕ್ಕ ವರದಕ್ಷಿಣೆ ಕೊಡಲಾಗದೆ ಸತ್ತಿದ್ದು
ನಮ್ಮ ಮನೆಯ ದನದ ಹದಿನೈದನೇ ಕರುವಿಗೆ
ಲಕ್ಷ್ಮೀ ಎಂದು ಹೆಸರಿಟ್ಟದ್ದು

ಆದರೆ ತಿಳಿದಿರಿ, ನನಗೆ ಗೊತ್ತು
ನನ್ನ ಬಳೆಯಲ್ಲಿರುವ ಪಿನ್ನುಗಳು
ನಿಮ್ಮ ಬದುಕಿಗೆ ತೇಪೆ ಹಾಕುತ್ತವೆಂದು
ನನಗೆ ಗೊತ್ತು
ನಾನು ದೀಪ ಹಚ್ಚದೆ, ನಾನು ಉಣಬಡಿಸದೆ,
ನಾನು ನಿಮ್ಮ ಮಕ್ಕಳನ್ನು ಹೆರದೆ
ನನ್ನ ಬೆಚ್ಚನೆಯ ಸಾಂತ್ವನವಿಲ್ಲದೇ
ಜಗತ್ತು ನಡೆಯಲಾರದೆಂದು

❑

Registered with Registrar of Newspapers of India under No. KARKAN/2007/22289
'NAMMA MANASA', REGD.No.: MAG(3) NPP/399(A)/2006-07 **Reg.KA/BGS/2074/2010-12**

ಕಂಡಿದ್ದೀರಾ ಮೀಡಿಯಾಗಳಲ್ಲಿ

ಫ್ಯಾಶನ್ ಶೋ, ರಿಯಾಲಿಟಿ ಶೋ
ಟಿ.ವಿ., ಇಂಟರ್‌ನೆಟ್, ಚಾಟುಗಳಲ್ಲಿ
ಮಗ್ನರಾಗಿ ಫಾಸ್ಟಫುಡ್ ನೆಕ್ಕುವ
ಐಷಾರಾಮಿ ಬಂಗಲೆ ವಾಸಿಗಳೇ
ರಕ್ತದಲಿ ಅದ್ದಿದ ರೊಟ್ಟಿ ತಿನ್ನಲು
ನಿಮಗೆ ಸಾಧ್ಯವಾಗುವುದಾದರೆ ಹೇಳಿ?
ಸೋದರಿ ಇರೋಮ್ ಶರ್ಮಿಳಾ
ಯಾರೆಂದು ಗೊತ್ತ ನಿಮಗೆ?
ಮಿಡಿಯಾಗಳ ಮಿರ್ಚ್ ಮಸಾಲಾಗಳಲಿ
ಬೆಡಗು ಬಿನ್ನಾಣಗಿತ್ತಿಯವರು ನೋಡಿದ್ದೀರಿ
ಕಂಡಿದ್ದೀರಾ ನೀವು ನನ್ನ ಸೋದರಿಯನ್ನ?

ಹತ್ತು ವರ್ಷಗಳೇ ಕಳೆದವು
ಅನ್ನ ನೀರು ಮುಟ್ಟದೆ ರಚ್ಚೆ ಹಿಡಿದು
ನಳಿಕೆತಲ್ಲಿ ಜೀವ ಹಿಡಿದಿದ್ದಾಳೆ ಅವಳು
ಪೂರ್ವಾಂಚಲದ ಛಲದ ಕುರುಹು
ಮಣಿಪುರದ ಮುತ್ತು ಮಾಣಿಕ್ಯದ ಹರಳು
ಕಂಡಿದ್ದೀರಾ ನೀವು ಟಿ.ವಿ. ಮಾಧ್ಯಮದಲ್ಲಿ
ದಿಟ್ಟ ಹೋರಾಟಗಾರ್ತಿ
ಇರೋಮ್ ಶರ್ಮಿಳಾಳನ್ನ.

ಅವಳು ಹಟ ಹಿಡಿದಿರುವುದು ಚಾಕಲೇಟು
ವೈಭವದ ಧಿರಿಸು, ಒಡವೆಗಳಿಗೂ ಅಲ್ಲ,
ಸೈನಿಕರ ವಿಶೇಷಾಧಿಕಾರದ ವಿರುದ್ಧ
ಉರಿವ ಕೊಳ್ಳಿಯಾಗಿ ದಹಿಸುತ್ತಿದ್ದಾಳೆ ಅವಳು
ದಿಟ್ಟ ಉಕ್ಕಿನ ಅವಳ ಅಗ್ರಹದ ಬೇಡಿಕೆ
ಮಣಿಪುರದ ನ್ಯಾಯಕ್ಕೆ ಕಾದಿಟ್ಟ ಮಹಿಳೆ.
ಅಗಳು ಮುಟ್ಟದೇ ಮಲಗಿದ್ದಾಳೆ
ಸೋದರಿ ಇರೋಮ್ ಶರ್ಮಿಳಾಳನ್ನು
ಕಂಡಿದ್ದೀರಾ ಮೀಡಿಯಾಗಳಲ್ಲಿ?

■ಡಾ. ಕೆ. ಷರೀಫಾ

Registered Magazine

Posted on 9th of every month at MBC, Bangalore GPO
Total No. of Pages: 24

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ
ಬೆಂಗಳೂರು - 560 018